# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 19 ಶುಕ್ರವಾರ 2024

ಸಂಪುಟ: 45 | ಸಂಚಿಕೆ: 4 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



### ಇಂದು ದೇಶದಲ್ಲಿ ಮೊದಲ ಹಂತದ ಲೋಕಸಭಾ ಚುನಾವಣೆ: 18 ರಾಜ್ಯ, 3 ಕೇಂದ್ರಾಡಳಿತ ಪ್ರದೇಶಗಳ

# 102 ಕ್ಷೇತ್ರಗಳಲ್ಲಿ ಮತದಾನ

**● ನಿತಿನ್ ಗಡ್ಕರಿ ಸೇರಿ 8 ಮಂದಿ ಕೇಂದ್ರ ಸಚಿವರು; ಐವರು ಮುಖ್ಯಮಂತ್ರಿಗಳು, ಓರ್ವ ರಾಜ್ಯಪಾಲರು ಸೇರಿ 1625 ಅಭ್ಯರ್ಥಿಗಳ ಅದೃಷ್ಟ ಪರೀಕ್ಷೆ ● ತಮಿಳುನಾಡಿನ 39 ಕ್ಷೇತ್ರಕ್ಕೆ ಇಂದು ಒಂದೇ ಹಂತದಲ್ಲಿ ಚುನಾವಣೆ**

ನವದೆಹಲಿ, ಏ.18– ಹದಿನೆಂಟನೇ ಲೋಕಸಭೆಗೆ ಏಳು ಹಂತಗಳಲ್ಲಿ ಮತದಾನ ನಡೆಯಲಿದ್ದು, ನಾಳೆ (ಏ.19) 18 ರಾಜ್ಯಗಳು ಹಾಗೂ 3 ಕೇಂದ್ರಾಡಳಿತ ಪ್ರದೇಶಗಳ 102 ಲೋಕಸಭಾ ಕ್ಷೇತ್ರಗಳಲ್ಲಿ ಮೊದಲ ಹಂತದ ಮತದಾನ ನಡೆಯಲಿದೆ.

ನಾಳೆ ನಡೆಯಲಿರುವ ಮೊದಲ ಹಂತದ ಚುನಾವಣೆಯಲ್ಲಿ 8 ಮಂದಿ ಕೇಂದ್ರ ಸಚಿವರು, ಐವರು ಮಾಜಿ ಮುಖ್ಯಮಂತ್ರಿಗಳು, ಓರ್ವ ಮಾಜಿ ರಾಜ್ಯಪಾಲರು ಸೇರಿದಂತೆ ಒಟ್ಟು 1625 ಅಭ್ಯರ್ಥಿಗಳು ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಅವರಲ್ಲಿ 1490 ಪುರುಷರು ಹಾಗೂ 135 ಮಹಿಳಾ ಅಭ್ಯರ್ಥಿಗಳಿದ್ದಾರೆ. ತಮಿಳುನಾಡಿನ ತರೂರ್‌ನಲ್ಲಿ 54 ಅಭ್ಯರ್ಥಿಗಳು ಕಣದಲ್ಲಿದ್ದು, ಅತೀ ಹೆಚ್ಚು ಅಭ್ಯರ್ಥಿಗಳಿರುವ ಲೋಕಸಭಾ ಕ್ಷೇತ್ರ ಇದಾದರೆ, ನಾಗಾಲ್ಯಾಂಡ್‌ನ ದಿಬ್ರಘಡದಲ್ಲಿ ಮೂವರು ಮಾತ್ರ ಸ್ಪರ್ಧಿಸುತ್ತಿದ್ದು, ಅತೀ ಕಡಿಮೆ ಅಭ್ಯರ್ಥಿಗಳಿರುವ ಕ್ಷೇತ್ರ ಇದಾಗಿದೆ.


ನಾಳೆ ತಮಿಳುನಾಡಿನ 39 ಕ್ಷೇತ್ರಗಳಲ್ಲಿ 950 ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ. ಅಂಡಮಾನ್ ನಿಕೋಬಾರ್‌ನ ಒಂದು ಕ್ಷೇತ್ರದಲ್ಲಿ 12, ಅರುಣಾಚಲಪ್ರದೇಶದ 2 ಕ್ಷೇತ್ರಗಳಲ್ಲಿ 14, ಅಸ್ಸಾಂನ 5 ಕ್ಷೇತ್ರದಲ್ಲಿ 35, ಬಿಹಾರ್‌ನ



4 ಕ್ಷೇತ್ರದಲ್ಲಿ 38, ಛತ್ತೀಸ್‌ಘಡದ ಒಂದು ಕ್ಷೇತ್ರದಲ್ಲಿ 11, ಜಮ್ಮು–ಕಾಶ್ಮೀರದ ಒಂದು ಕ್ಷೇತ್ರದಲ್ಲಿ 12, ಲಕ್ಷದ್ವೀಪದ ಒಂದು ಕ್ಷೇತ್ರದಲ್ಲಿ 4, ಮಧ್ಯಪ್ರದೇಶದ 6 ಕ್ಷೇತ್ರದಲ್ಲಿ 88, ಮಹಾರಾಷ್ಟ್ರದ 5 ಕ್ಷೇತ್ರದಲ್ಲಿ 97, ಮಣಿಪುರದ ಎರಡು ಕ್ಷೇತ್ರದಲ್ಲಿ 10, ಮೇಘಾಲಯದ 2 ಕ್ಷೇತ್ರದಲ್ಲಿ 10, ಮಿಜೋರಾಂನ ಒಂದು ಕ್ಷೇತ್ರದಲ್ಲಿ 6, ನಾಗಾಲ್ಯಾಂಡ್‌ನ ಒಂದು ಕ್ಷೇತ್ರದಲ್ಲಿ 3, ಪುದುಚೇರಿಯ ಒಂದು ಕ್ಷೇತ್ರದಲ್ಲಿ 26, ರಾಜಸ್ಥಾನದ 12 ಕ್ಷೇತ್ರದಲ್ಲಿ 114, ಸಿಕ್ಕಿಂನ ಒಂದು ಕ್ಷೇತ್ರದಲ್ಲಿ 14, ತ್ರಿಪುರದ ಒಂದು ಕ್ಷೇತ್ರದಲ್ಲಿ 9, ಉತ್ತರ ಪ್ರದೇಶದ 8 ಕ್ಷೇತ್ರದಲ್ಲಿ 80, ಉತ್ತರಾಖಂಡ್‌ನ 5 ಕ್ಷೇತ್ರದಲ್ಲಿ 55 ಮತ್ತು ಪಶ್ಚಿಮ ಬಂಗಾಳದ 3 ಕ್ಷೇತ್ರದಲ್ಲಿ 37 ಮಂದಿ ಸೇರಿದಂತೆ ಒಟ್ಟು 102 ಕ್ಷೇತ್ರಗಳಲ್ಲಿ 1625 ಮಂದಿ ಸ್ಪರ್ಧಿಸುತ್ತಿದ್ದಾರೆ.

ಕೇಂದ್ರ ಸಚಿವ ನಿತಿನ್ ಗಡ್ಕರಿ, ನಾಗ್ಪುರದಿಂದ ಸ್ಪರ್ಧಿಸಿದರೆ, ಕೇಂದ್ರ ಸಚಿವರಾದ ಕಿರಣ್ ರಿಜೀಜು ಅರುಣಾಚಲ ಪಶ್ಚಿಮ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾದರೆ, ಅದೇ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾಜಿ ಮುಖ್ಯಮಂತ್ರಿ ನಬೀಂ ತುಕಿ ಸ್ಪರ್ಧಿಸುತ್ತಿದ್ದಾರೆ. ಜಿತೇಂದ್ರ ಸಿಂಗ್, ಜುಮಾಯಿ ಕ್ಷೇತ್ರದಿಂದ ಚಿರಾಗ್ ಪಾಸ್ವಾನ್, ನಕುಲ್ ನಾಥ್ (ಚಿಂದ್ವಾರಾ), ಅಣ್ಣಾಮಲೈ (ಕೊಯಮತ್ತೂರು), ಎಲ್.ಮುರುಗನ್ (ನೀಲಗಿರಿ), ಮಾಜಿ ರಾಜ್ಯಪಾಲೆ ತಮಿಳಿಸೈ ಸೌಂದರರಾಜು (ಚೆನ್ನೈ ದಕ್ಷಿಣ), ಪೊನ್ ರಾಧಾಕೃಷ್ಣನ್ (ಕನ್ಯಾಕುಮಾರಿ), ಕನಿಮೊಳಿ ಕರುಣಾನಿಧಿ (ತೂತ್‌ಪುಡಿ), ವಿ.ವೈದ್ಯಲಿಂಗಂ (ಪುದಿಚೇರಿ), ಹರೇಂದ್ರ ಸಿಂಗ್ ಮಲ್ಲಿಕ್ (ಮುಜಾಫರ್ ನಗರ), ಕಾರ್ತಿ ಚಿದಂಬರಂ (ಶಿವಗಂಗಾ), ಸಂಜೀವ್ ಬಲ್ಯಾಣ್ (ಫಿಲಿತ್ ಪ್ರಸಾದ್ ನಗರ), ನಿಶಿತ್ ಪ್ರಮಾಣಿತ್ (ಕೂಚ್ ಬೆಹರ್), ಟಿ.ಆರ್.ಬಾಲು (ಶ್ರೀ ಪೆರಂಬದೂರು) ಮುಂತಾದ ● 9ನೇ ಪುಟಕ್ಕೆ

## ಮೈಸೂರಲ್ಲಿ ವರ್ಷದ ಮೊದಲ ಮಳೆ ಸಿಂಚನ; ಜನರಲ್ಲಿ ಸಂಭ್ರಮ



ಮಳೆ ಬಿದ್ದ ವೇಳೆ ರಸ್ತೆ ಬದಿ ನೊರೆಯ ತೊರೆ ನಿರ್ಮಾಣವಾಗಿರುವುದು.

**● ಹಲವೆಡೆ ರಸ್ತೆಗಳು ಜಾರುಮಣೆಯಾಗಿ ದ್ವಿಚಕ್ರ ವಾಹನ ಸವಾರರಿಗೆ ಸಂಕಷ್ಟ ● ರಸ್ತೆ ಬದಿ ನೊರೆಯ ತೊರೆ**

ಮೈಸೂರು, ಏ.18(ಎಸ್‌ಬಿಡಿ)– ಮೈಸೂರಲ್ಲಿ ಗುರುವಾರ ಸಂಜೆ ಮೊದಲ ಮಳೆ ಸಿಂಚನವಾಯಿತು. ನಗರದದಲ್ಲಿ ಸಂಜೆ 6 ಗಂಟೆ ಸುಮಾರಿಗೆ ಮೋಡ ಕವಿದು, ಗುಡುಗು– ಮಿಂಚಿನೊಂದಿಗೆ ಭಾರಿ ಮಳೆ ಬರುವಂತಿತ್ತು. ಆದರೆ ಕೆಲವೆಡೆ ಮಾತ್ರ ಸಾಧಾರಣ ಮಳೆ ಸುರಿಯಿತು. ರಾತ್ರಿ 10 ಗಂಟೆ ನಂತರವೂ ಕೆಲಕಾಲ ಜೋರು ಮಳೆ ಸುರಿಯಿತು.


**ಸ್ಕಿಡ್ ಆದ ವಾಹನಗಳು:** ನಗರದ ಹಲವು ರಸ್ತೆಗಳಲ್ಲಿ ಉದುರಿದ್ದ ಬಾಗೆ ಮರದ ಕಾಯಿಗಳು(ಕಾರ್ಕ್ ಬೀಜದ ಕಾಯಿ ಎನ್ನಲಾಗುತ್ತದೆ) ಮಳೆಯಿಂದ ತೊಯ್ದಿದ್ದರಿಂದ ಹಲವು ದ್ವಿಚಕ್ರ ವಾಹನಗಳ ಸವಾರರು ಸ್ಕಿಡ್ ಆಗಿ ಬಿದ್ದರು. ಅದರಲ್ಲೂ ರಾಮಸ್ವಾಮಿ ವೃತ್ತದಿಂದ ಹಾರ್ಡಿಂಜ್ ವೃತ್ತದವರೆಗೆ ಕಾಂಕ್ರೀಟ್ ರಸ್ತೆಯಲ್ಲೇ ಹೆಚ್ಚು ಅಪಘಾತ ಸಂಭವಿಸಿವೆ. ಚಾಮರಾಜ ಜೋಡಿ ರಸ್ತೆ ಹಾಗೂ ತ್ಯಾಗರಾಜ ರಸ್ತೆ ಸಂಧಿಸುವ ಜಂಕ್ಷನ್‌ನಲ್ಲಿ ಏಳೆಂಟು ದ್ವಿಚಕ್ರ ವಾಹನಗಳು ಸ್ಕಿಡ್ ಆಗಿ ಬಿದ್ದವು. ಅದೃಷ್ಟವಶಾತ್ ಸಣ್ಣಪುಟ್ಟ ಗಾಯಗಳೊಂದಿಗೆ ಸವಾರರು ಅಪಾಯದಿಂದ ● 6ನೇ ಪುಟಕ್ಕೆ



ಮೈಸೂರಿನ ಚಾಮರಾಜ ಜೋಡಿ ರಸ್ತೆ– ತ್ಯಾಗರಾಜ ರಸ್ತೆ ಜಂಕ್ಷನ್‌ನಲ್ಲಿ ಸ್ಕಿಡ್ ಆಗಿ ಬಿದ್ದ ದ್ವಿಚಕ್ರ ವಾಹನ ಸವಾರರನ್ನು ಸ್ಥಳೀಯರು ಮೇಲೆತ್ತುತ್ತಿರುವುದು.

### ಶ್ರೇಷ್ಠ ಭಾರತದ ನಿರ್ಮಾಣಕ್ಕೆ ಪ್ರಧಾನಿ ಮೋದಿಯವರ ಕೈಬಲಪಡಿಸೋಣ

## ಯದುವೀರ್ ಮೈಸೂರಲ್ಲಿ ಭರ್ಜರಿ ಮತ ಬೇಟೆ



ಮೈಸೂರಿನ ಅಗ್ರಹಾರದಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಗುರುವಾರ ಸಂಜೆ ರೋಡ್ ಶೋ ಮೂಲಕ ಮತ ಯಾಚಿಸಿದರು.

**ಮೈಸೂರಲ್ಲಿ 25 ಸಾವಿರ ಮನೆ ನಿರ್ಮಾಣ**

ನಮ್ಮ ಮೈಸೂರಿನಲ್ಲೇ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ 25 ಸಾವಿರ ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ಅಂತೆಯೇ ರಾಷ್ಟ್ರದಲ್ಲಿ 4 ಕೋಟಿ ಮನೆಗಳನ್ನು ನಿರ್ಮಿಸಲಾಗಿದೆ. ಈ ಯೋಜನೆಯ ಹೆಚ್ಚಿನ ಫಲಾನುಭವಿಗಳೆಂದರೆ ನಮ್ಮ ಹಿಂದುಳಿದ ವರ್ಗಗಳಾಗಿವೆ. ಜಲಜೀವನ್ ಮಿಷನ್‌ನಡಿ ಮೈಸೂರಿನಲ್ಲೇ ಎರಡೂವರೆ ಲಕ್ಷ ನಲ್ಲಿಗಳನ್ನು ಮನೆ ಮನೆಗೆ ಸಂಪರ್ಕ ಮಾಡಲಾಗಿದೆ. ಜನ ಔಷಧಿ ಕೇಂದ್ರಗಳು ಮೈಸೂರಿನಲ್ಲೇ ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿದ್ದು, ಇಲ್ಲಿ ಕೈಗೆಟಕುವ ದರದಲ್ಲಿ ಔಷಧಗಳು ದೊರೆಯುತ್ತಿವೆ. ಇದಕ್ಕೆ ಪ್ರಧಾನಿಯವರ ಸರ್ವತೋಮುಖ ಅಭಿವೃದ್ಧಿ ಕೆಲಸಗಳೇ ಕಾರಣ. -ಯದುವೀರ್

ಮೈಸೂರು,ಏ.18(ಪಿಎಂ)– ಕಳೆದ 10 ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ದೇಶದ ಸರ್ವತೋಮುಖ ಅಭಿವೃದ್ಧಿ ಮಾಡಿದ್ದು, ಅವರ ಕೈಬಲಪಡಿಸುವ ಮೂಲಕ ಶ್ರೇಷ್ಠ ಭಾರತ ನಿರ್ಮಾಣಕ್ಕೆ ತಮ್ಮನ್ನು ಬೆಂಬಲಿಸಬೇಕೆಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮತದಾರರಲ್ಲಿ ಮನವಿ ಮಾಡಿದರು.

ಮೈಸೂರಿನ ಅಗ್ರಹಾರದ ರಾಮಾನುಜ ರಸ್ತೆಯ 9ನೇ ಕ್ರಾಸ್‌ನಲ್ಲಿ ಗುರುವಾರ ಸಂಜೆ ಹಮ್ಮಿಕೊಂಡಿದ್ದ ಸಾರ್ವಜನಿಕ ಸಭೆ ಉದ್ದೇಶಿಸಿ ಅವರು ಮಾತನಾಡಿದರು. ನಾನು ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿದ್ದೇನೆ. ಪ್ರಧಾನಿಯವರ ಆಶೀರ್ವಾದದಿಂದ ಇಲ್ಲಿ ಸ್ಪರ್ಧೆ ಮಾಡಿದ್ದೇನೆ. ಪ್ರಧಾನಿಯವರು ದೇಶದ ಅಭಿವೃದ್ಧಿಗೆ ಹಲವು ಕೊಡುಗೆಗಳನ್ನು ನೀಡಿದ್ದಾರೆ ಎಂದು ಹೇಳಿದರು. ಮೋದಿಯವರ ಆಡಳಿತಕ್ಕೂ ಮುನ್ನ 2014ರಲ್ಲಿ ಅಸಮತೋಲನ ಆರ್ಥಿಕತೆಯ ಪಟ್ಟಿಯಲ್ಲಿ ದೇಶ ಸೇರಿತ್ತು. ಆದರೆ 2024ರಲ್ಲಿ ಬಲಿಷ್ಠ ಆರ್ಥಿಕತೆ ಪಟ್ಟಿಯಲ್ಲಿ ಐದನೇ ಸ್ಥಾನಕ್ಕೆ ಭಾರತ ಭಾಜನವಾಗಿದೆ. ಇದಕ್ಕೆ ಕಾರಣ ಮೋದಿಯವರ ಅಭಿವೃದ್ಧಿಪರವಾದ ಕಾರ್ಯವೈಖರಿಯಾಗಿದೆ. ಕೇವಲ 7 ನಗರದಲ್ಲಿ ಮೆಟ್ರೋ ಇತ್ತು. ಆದರೆ ಮೋದಿಯವರ ಆಡಳಿತದಿಂದ ಇದು ಈಗ 22 ನಗರಕ್ಕೆ ವಿಸ್ತರಣೆಯಾಗಿದೆ ಎಂದು ತಿಳಿಸಿದರು.

65 ವರ್ಷಗಳಲ್ಲಿ ಕೇವಲ 9 ಸಾವಿರ ಕಿ.ಮೀ. ರಾಷ್ಟ್ರೀಯ ಹೆದ್ದಾರಿ ನಿರ್ಮಿಸಲಾಗಿತ್ತು. ಆದರೆ ಈಗ ಒಂದೂವರೆ ಲಕ್ಷ ಕಿ.ಮೀ.ಗೆ ವಿಸ್ತರಿಸಲಾಗಿದೆ. 65 ವರ್ಷಗಳಲ್ಲಿ ಗ್ರಾಮೀಣ ರಸ್ತೆಗಳನ್ನು ಕೇವಲ ● 9ನೇ ಪುಟಕ್ಕೆ



## ನಾಗಮಂಗಲದಲ್ಲಿ ಪತಿಯೇ ಪತ್ನಿ, ಮಕ್ಕಳಿಬ್ಬರಿಗೆ ವಿಷ ಹಾಕಿ ಕೊಂದರೆ; ಶ್ರೀರಂಗಪಟ್ಟಣ ಬಳಿ ತಾಯಿಯೇ ವಿಷವುಣಿಸಿ ಕಂದಮ್ಮಗಳ ಸಾವು

### ಮೂವರು ಅಸ್ವಸ್ಥ; ಆಸ್ಪತ್ರೆಯಲ್ಲಿ ಚಿಕಿತ್ಸೆ

ನಾಗಮಂಗಲ/ಶ್ರೀರಂಗಪಟ್ಟಣ, ಏ.18–ಕ್ರಿಕೆಟ್ ಬೆಟ್ಟಿಂಗ್ ಮತ್ತು ಪರಸ್ತ್ರೀ ಸಂಬಂಧ ಪ್ರಶ್ನಿಸಿದ ಕಾರಣಕ್ಕಾಗಿ ವ್ಯಕ್ತಿಯೋರ್ವ ಪತ್ನಿ ಹಾಗೂ ಇಬ್ಬರು ಮಕ್ಕಳಿಗೆ ವಿಷವುಣಿಸಿ ಹತ್ಯೆಗೈದು, ತಾನೂ ಆತ್ಮಹತ್ಯೆಗೆ ಪ್ರಯತ್ನಿಸಿದ ಘಟನೆ ನಾಗಮಂಗಲ ಪಟ್ಟಣದಲ್ಲಿ ನಡೆದಿದ್ದರೆ, ಕೌಟುಂಬಿಕ ಕಲಹದಿಂದ ಬೇಸತ್ತ ಗೃಹಿಣಿ ತನ್ನ ಮೂವರು ಮಕ್ಕಳಿಗೆ ಐಸ್‌ಕ್ರೀಂನಲ್ಲಿ ವಿಷ ಬೆರೆಸಿ ಕೊಟ್ಟ ನಂತರ ತಾನೂ ಸೇವಿಸಿದ್ದಾಳೆ. ಈ ಪ್ರಕರಣದಲ್ಲಿ ಒಂದೂವರೆ ವರ್ಷದ ಅವಳಿ ಹಸುಳೆಗಳು ಸಾವನ್ನಪ್ಪಿದ್ದು, ಗೃಹಿಣಿ ಮತ್ತು ಆಕೆಯ ಮೂರು ವರ್ಷದ ಮಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನಾಗಮಂಗಲ ಪಟ್ಟಣದ ಪೇಟೆ ಹೊಲ ರಸ್ತೆ ನಿವಾಸಿ ನರಸಿಂಹ(35), ಪತ್ನಿ ಕೀರ್ತನಾ(23), ಪುತ್ರ ಜಯಸಿಂಹ (4), ಒಂದೂವರೆ ವರ್ಷದ ಪುತ್ರಿ ಋಷಿಕಾ ಅವರಿಗೆ ವಿಷ ವುಣಿಸಿ ಕೊಂದಿದ್ದಾನೆ. ಮಂಡ್ಯ ತಾಲೂಕಿನ ಕದಂಬಹಳ್ಳಿ ಗ್ರಾಮದ ಕೀರ್ತನಾಳನ್ನು, ಈತ 5 ವರ್ಷದ ಹಿಂದೆ ಮದುವೆಯಾಗಿದ್ದ ಎಂದು ಹೇಳಲಾಗಿದೆ. ನಾಗಮಂಗಲದಲ್ಲಿ ಸಲೂನ್ ಶಾಪ್ ನಡೆಸುತ್ತಿದ್ದ ಈತ, ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ತೊಡಗಿ ಸುಮಾರು 8 ಲಕ್ಷ ರೂ.ವರೆಗೆ ಸಾಲ ಮಾಡಿಕೊಂಡಿದ್ದ ಎನ್ನಲಾಗಿದೆ. ಅಲ್ಲದೇ ಪರಸ್ತ್ರೀಯೊಂದಿಗೆ ಸಂಬಂಧವಿಟ್ಟುಕೊಂಡು ತವರು ಮನೆಯಿಂದ ಹಣ ತರುವಂತೆ ಪತ್ನಿಯನ್ನು ಪೀಡಿಸುತ್ತಿದ್ದನಂತೆ.

ಇದೇ ವಿಚಾರವಾಗಿ ಪತಿ–ಪತ್ನಿಯರ ನಡುವೆ ಪದೇ ಪದೆ ಜಗಳವಾಗುತ್ತಿತ್ತು ಎಂದು ಕೀರ್ತನಾ ತಂದೆ ಶಿವನಂಜು ಮಾಧ್ಯಮಗಳಿಗೆ ತಿಳಿಸಿದ್ದಾರೆ. ● 6ನೇ ಪುಟಕ್ಕೆ

## ಮೈಸೂರಲ್ಲಿ ಅಲೆಮಾರಿ ದಂಪತಿಯ 40 ದಿನದ ಮಗು ಅಪಹರಣ: ಪತ್ರಕರ್ತ ಸೇರಿ ಐವರ ಬಂಧನ

### ಮಕ್ಕಳ ಕದ್ದು ಮಾರುವ ಜಾಲ ಭೇದಿಸಲು ತೀವ್ರಗೊಂಡ ಪೊಲೀಸರ ತನಿಖೆ

ಎಸ್.ಟಿ.ರವಿಕುಮಾರ್

ಮೈಸೂರು, ಏ.18– ಅಲೆಮಾರಿ ಜನಾಂಗದ ದಂಪತಿಯ 40 ದಿನದ ಮಗುವನ್ನು ಅಪಹರಿಸಿದ್ದ ತಂಡವನ್ನು ಘಟನೆ ನಡೆದ ಕೆಲವೇ ಗಂಟೆಗಳಲ್ಲಿ ಬಂಧಿಸಿ, ಮಗುವನ್ನು ರಕ್ಷಿಸುವಲ್ಲಿ ಮೈಸೂರಿನ ವಿಜಯನಗರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಮೈಸೂರಿನ ಹೂಟಗಳ್ಳಿ ನಿವಾಸಿ. ಪತ್ರಕರ್ತ ಮಂಜುನಾಥ್, ಆತನ ಸಂಬಂಧಿ ಪಾಂಡವಪುರ ತಾಲೂಕಿನ ಕುಮಾರ್, ನಾಗವಾಲ ಗ್ರಾಮದ ಇಂದ್ರಕುಮಾರ್, ಈತನ ಪತ್ನಿ ಸುಪ್ರಿಯಾ, ಸಹೋದರಿ



ಮಂಜುನಾಥ್



ಕುಮಾರ್



ಇಂದ್ರ ಕುಮಾರ್



ಸುಪ್ರಿಯಾ



ವಿಜಯಲಕ್ಷ್ಮೀ

ವಿಜಯಲಕ್ಷ್ಮಿ ಬಂಧಿತರಾಗಿದ್ದು, ಈ ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಸಯ್ಯದ್, ಆತನ ಪತ್ನಿ ಸಲ್ಲು ಮತ್ತು ಕಿರಣ್ ಬಂಧನಕ್ಕಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ. ಅಲೆಮಾರಿ ಜನಾಂಗದವರ ಮಗುವನ್ನು ಅಪಹರಿಸಿದ್ದ ● 6ನೇ ಪುಟಕ್ಕೆ

### ಕೆ.ಆರ್.ನಗರದಲ್ಲಿ ಎನ್‌ಡಿಎ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಪರ ಬೃಹತ್ ಚುನಾವಣಾ ಪ್ರಚಾರ ಸಭೆ

# 'ಗ್ಯಾರಂಟಿ' ಹಿಂದೆ ಬಿದ್ದಿರುವ ಸಿದ್ದರಾಮಯ್ಯ ಅಭಿವೃದ್ಧಿ ಮರೆತಿದ್ದಾರೆ

**● ಮಾಜಿ ಸಿಎಂ ಯಡಿಯೂರಪ್ಪ ವಾಗ್ದಾಳಿ ● ಕುಮಾರಸ್ವಾಮಿ ಗೆದ್ದರೆ ಸಂಪುಟದಲ್ಲಿ ಸಚಿವರಾಗ್ತಾರೆ ● ಸಿದ್ದರಾಮಯ್ಯರದ್ದು ಪಿಕ್ ಪಾಕೆಟ್ ಸರ್ಕಾರ: ಕುಮಾರಸ್ವಾಮಿ ವ್ಯಂಗ್ಯ**






ಕೆ.ಆರ್.ನಗರದಲ್ಲಿ ನಡೆದ ಮಂಡ್ಯ ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಪರ ಚುನಾವಣಾ ಪ್ರಚಾರ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಾತನಾಡಿದರು.

ಕೆ.ಆರ್.ನಗರ, ಏ.18– ಸಿದ್ದರಾಮಯ್ಯನವರ ಸರ್ಕಾರ ಸಂಪೂರ್ಣ ದಿವಾಳಿಯಾಗಿದ್ದು, ಬದುಕಿದ್ದು ಸತ್ತಂತಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಾಗ್ದಾಳಿ ನಡೆಸಿದರು.

ಪಟ್ಟಣದ ರೇಡಿಯೋ ಮೈದಾನದಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಪರ ಚುನಾವಣಾ ಪ್ರಚಾರ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ ಜನರ ಹಿತ ಮರೆತಿದ್ದಾರೆ. ಗ್ಯಾರಂಟಿ ಯೋಜನೆಗಾಗಿ ನೀರಾವರಿ ಯೋಜನೆಗಳನ್ನು ಕಡೆಗಣಿಸಿದ್ದಾರೆ ಎಂದು ಆರೋಪಿಸಿದರು.

ಪ್ರಸಕ್ತ ಮಂಡ್ಯ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ನನ್ನ ವೀರಶೈವ ಸಮಾಜದ ಬಂಧುಗಳು ಕ್ಷೇತ್ರದ ಅಭ್ಯರ್ಥಿ ಕುಮಾರಸ್ವಾಮಿ ಅಲ್ಲ. ನಾನು ನಿಮ್ಮ ಯಡಿಯೂರಪ್ಪ ಅಭ್ಯರ್ಥಿ ಎಂದು ಭಾವಿಸಿ ಎಂದು ಕೈ ಮುಗಿದು ಮತ ಯಾಚಿಸಿದ ಅವರು, ಹೆಚ್ಚಿನ ಮತಗಳನ್ನು ಕೊಟ್ಟು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಗೆಲ್ಲಿಸಿದರೆ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಸರ್ಕಾರದಲ್ಲಿ ಮಂತ್ರಿಯಾಗಿ ನಿಮ್ಮಗಳ ಸಂಕಷ್ಟಕ್ಕೆ ನೆರವಾಗಲಿದ್ದಾರೆ ಎಂದು ಹೇಳಿದರು.

ನಮ್ಮ ಸರ್ಕಾರದಲ್ಲಿ 20 ಲಕ್ಷ ಹೆಣ್ಣು ಮಕ್ಕಳಿಗೆ ಭಾಗ್ಯಲಕ್ಷ್ಮಿ ಯೋಜನೆ ಜಾರಿಗೊಳಿಸಲಾಗಿತ್ತು. ಆದರೆ ಸಿದ್ದರಾಮಯ್ಯನವರು ಭಾಗ್ಯಲಕ್ಷ್ಮಿ ಯೋಜನೆ ನಿಲ್ಲಿಸಿದರು. ಕಿಸಾನ್ ಸಮ್ಮಾನ್ ಯೋಜನೆಗೆ ಕೇಂದ್ರದಿಂದ 6 ಸಾವಿರ ಮತ್ತು ನಾನು ಸಿಎಂ ಆಗಿದ್ದಾಗ 4 ಸಾವಿರ ಸೇರಿ 10 ಸಾವಿರ ರೈತರಿಗೆ ನೀಡುತ್ತಿದ್ದೆವು. ಅದೆಲ್ಲವನ್ನು ನಿಲ್ಲಿಸಲಾಗಿದೆ. ಚಿಂತಿಸಬೇಡಿ ಕುಮಾರಸ್ವಾಮಿ ಅವರು ಈ ಚುನಾವಣೆಯಲ್ಲಿ ಗೆದ್ದು ಕೇಂದ್ರ ಮಂತ್ರಿಯಾಗಿ ಕೊಡುತ್ತಾರೆ. ಜೊತೆಗೆ ರಾಜ್ಯದ ಅಭಿವೃದ್ಧಿಗಾಗಿ ಶ್ರಮಿಸಲಿದ್ದಾರೆ ಎಂದು ನಾನು ಭರವಸೆ ನೀಡುತ್ತೇನೆ ಎಂದರು. ಈ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 28 ಕ್ಷೇತ್ರಗಳಲ್ಲೂ ನಮ್ಮ ಮೈತ್ರಿ ಅಭ್ಯರ್ಥಿ ಗಳು ಜಯ ಗಳಿಸಲಿದ್ದು, ನರೇಂದ್ರ ಮೋದಿ ಅವರು 3ನೇ ಬಾರಿ ಪ್ರಧಾನಿಯಾಗುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದರು.

**ಪಿಕ್ ಪಾಕೆಟ್ ಸರ್ಕಾರ:** ಮಂಡ್ಯ ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರ ಪಿಕ್ ಪಾಕೆಟ್ ಸರ್ಕಾರ. ನಿಮ್ಮ ದುಡ್ಡು ಹೊಡೆದು ನಿಮಗೆ ಗ್ಯಾರಂಟಿ ಕೊಡುತ್ತಿರುವ ಸರ್ಕಾರ ಎಂದು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

2006ರಲ್ಲಿ ನಾನು ಮತ್ತು ಬಿ.ಎಸ್. ಯಡಿಯೂರಪ್ಪನವರು ಸೇರಿ ಸರ್ಕಾರ ರಚಿಸಿ ಸಾರಾಯಿ, ಲಾಟರಿ ನಿಷೇಧ, ● 9ನೇ ಪುಟಕ್ಕೆ

# ಮೈಸೂರಿನ ಐತಿಹಾಸಿಕ ಸುಂದರ ಚಿಕ್ಕ ಗಡಿಯಾರ ಕಸದ ಗುಂಡಿ!

**ಬಾಪುಲಿಂಗರಾಜ್ ಅರಸ್**



- ಅಸ್ಥಿಪಂಜರದಂತಿರುವ ಕಲ್ಲಿನ ಆಸನಗಳು
- ಹಸಿರು ಮಾಸಿ ಒಣಗಿರುವ ಗಿಡಗಳು
- ಆವರಣದಲ್ಲಿ ವ್ಯಾಪಾರಸ್ಥರ ದರ್ಬಾರು
- ಗಬ್ಬು ವಾಸನೆಗೆ ಮೂಗು ಮುಚ್ಚುವ ಪ್ರವಾಸಿಗರು



ಮೈಸೂರು, ಏ.18– ಮೈಸೂರಿನ ಪಾರಂಪರಿಕ ಶೈಲಿಯ ತಾಣಗಳಲ್ಲಿ ಚಿಕ್ಕಗಡಿಯಾರ ಅಥವಾ ಡಫರಿನ್ ಕ್ಲಾಕ್ ಟವರ್ ಒಂದಾಗಿದೆ. ಚಾಮರಾಜೇಂದ್ರ ಒಡೆಯರ್ ಕಾಲದಲ್ಲಿ ನಿರ್ಮಾಣವಾದ ಈ ಸ್ಮಾರಕಕ್ಕೆ ವಿಶೇಷ ಮಹತ್ವವಿದೆ. ಕುಸುರಿ ಕೆತ್ತನೆಯೊಂದಿಗೆ ಕಲಾತ್ಮಕವಾಗಿ ನಿರ್ಮಾಣಗೊಂಡಿರುವ ಇದಕ್ಕೆ 128 ವರ್ಷಗಳ ಇತಿಹಾಸವಿದೆ. ದೇಶ–ವಿದೇಶಿ ಪ್ರವಾಸಿಗರ ಸೂಜಿಗಲ್ಲಿನಂತೆ ಸೆಳೆಯುವ ಚಿಕ್ಕಗಡಿಯಾರ ಈಗ ಕಸದ ತೊಟ್ಟಿಯಾಗಿದೆ.

ಮೈಸೂರು ಅರಮನೆಗೆ ಭೇಟಿ ನೀಡುವ ಪ್ರವಾಸಿಗರು ತಪ್ಪದೆ ದೇವರಾಜ ಮಾರುಕಟ್ಟೆಗೆ ಭೇಟಿ ನೀಡುತ್ತಾರೆ. ಮೈಸೂರು ಪಾಕ್, ಮೈಸೂರು ಮಲ್ಲಿಗೆ, ಮೈಸೂರು ವಿಳ್ಳೆದೆಲೆ ಸೇರಿದಂತೆ ಮೈಸೂರು ಪೇಟೆಂಟ್( ಬೌದ್ಧಿಕ ಸ್ವಾಮ್ಯದ ಹಕ್ಕು) ಹೊಂದಿರುವ ಪದಾರ್ಥಗಳ ಖರೀದಿಗೆ ದೇವರಾಜ ಮಾರುಕಟ್ಟೆಗೆ ಸರ್ವೆ ಸಾಮಾನ್ಯವಾಗಿ ಭೇಟಿ ನೀಡುತ್ತಾರೆ.

ಈ ವೇಳೆ ಮಾರುಕಟ್ಟೆ ಮುಂಭಾಗದಲ್ಲಿರುವ ಚಿಕ್ಕ ಗಡಿಯಾರದ ಮುಂದೆ ನಿಂತು ಗೋಪುರದ ಅಂದ–ಚೆಂದವನ್ನು ಸವಿಯುತ್ತಾರೆ. ಅಲ್ಲದೆ ಪಾರಂಪರಿಕ ಶೈಲಿಯಲ್ಲಿ ನಿರ್ಮಾಣವಾಗಿರುವ ಚಿಕ್ಕ ಗಡಿಯಾರದ ವಿಶಿಷ್ಟ ಕಲಾತ್ಮಕತೆಗೆ ಮಾರುಹೋಗುತ್ತಾರೆ. ಇದರ ಇತಿಹಾಸವನ್ನು ಅರಿಯುತ್ತಾರೆ. ಇಲ್ಲಿಗೆ ಭೇಟಿ ನೀಡದಿದ್ದರೆ ಒಂದು ರೀತಿ ಪ್ರವಾಸಿಗರ ಮೈಸೂರು ಭೇಟಿ ಅಪೂರ್ಣ ಎಂದೇ ಭಾವಿಸಲಾಗುತ್ತದೆ.

ಇಂತಹ ಐತಿಹಾಸಿಕ ಮಹತ್ವವಿರುವ ಚಿಕ್ಕ ಗಡಿಯಾರ ಈಗ ಅಂದ ಮಾತ್ರವಲ್ಲ ಮಹತ್ವ ಕಳೆದುಕೊಳ್ಳುತ್ತಿದೆ. ಇದನ್ನು ವಿವರಿಸುವ ಮುನ್ನ ಚಿಕ್ಕ ಗಡಿಯಾರ ನಿರ್ಮಾಣವಾದ ಆಸಕ್ತಿದಾಯಕ ವಿಚಾರ ಅರಿಯುವುದು ಅವಶ್ಯ.

ಮೈಸೂರು ಮಹಾರಾಜರು ಅಂದು ಬ್ರಿಟಿಷರ ಅನುಜ್ಞೆಯಂತೆ ಆಳ್ವಿಕೆ ನಡೆಸಬೇಕಿತ್ತು. ಅಲ್ಲದೆ ಮೈಸೂರಿನ ಅಭಿವೃದ್ಧಿಗೆ ಬ್ರಿಟಿಷರೊಡನೆ ಸೌಹಾರ್ದ ಹಾಗೂ ಸ್ನೇಹ ಭಾವ ಹೊಂದುವುದು ಅನಿವಾರ್ಯವಾಗಿತ್ತು. ಯಾವುದೇ ಮಹತ್ವದ ತೀರ್ಮಾನ ಕೈಗೊಳ್ಳುವ ವೇಳೆ ಬ್ರಿಟಿಷ್ ಅಧಿಕಾರಿಗಳನ್ನು ಮೆಚ್ಚಿಸಿ ಅವರಿಂದ ಅನುಮೋದನೆ ಪಡೆಯುವುದು, ಉಪಾಯದಿಂದ ಕಾರ್ಯ ಸಾಧಿಸಿಕೊಳ್ಳುವ ವಿಧಾನ ಅನುಸರಿಸಲಾಗುತ್ತಿತ್ತು.

1884ರಿಂದ 1888 ರವರೆಗೆ ಬ್ರಿಟಿಷ್ ವೈಸ್‌ರಾಯ್ ಲಾರ್ಡ್ ಡಫರಿನ್ ಆಳ್ವಿಕೆ ಇತ್ತು. 1886ರಲ್ಲಿ ಮೈಸೂರು ಮಹಾರಾಜರಾಗಿದ್ದ ಚಾಮರಾಜ ಒಡೆಯರ್ ಅವರ ಆಹ್ವಾನದ ಮೇರೆಗೆ ಲಾರ್ಡ್ ಡಫರಿನ್ ಮೈಸೂರಿಗೆ ಭೇಟಿ ನೀಡಿದ್ದರು.

ಲಾರ್ಡ್ ಡಫರಿನ್ ಅವರ ಸೌಹಾರ್ದಯುತ ಮೈಸೂರು ಭೇಟಿ ಹಿನ್ನೆಲೆಯಲ್ಲಿ ಅದರ ನೆನಪಿನಾರ್ಥ ದೇವರಾಜ ಮಾರುಕಟ್ಟೆ ಮುಂಭಾಗದಲ್ಲಿ ಚಿಕ್ಕ ಗಡಿಯಾರ ನಿರ್ಮಾಣ ಮಾಡಿ ಅದಕ್ಕೆ 'ಡಫರಿನ್ ಕ್ಲಾಕ್ ಟವರ್' ಎಂದು ನಾಮಕರಣ ಮಾಡಲಾಯಿತು. 1886 ರಲ್ಲಿ ಲಾರ್ಡ್ ಡಫರಿನ್ ಭೇಟಿ ನೀಡಿದ ವರ್ಷವೇ ಅದನ್ನು ಉದ್ಘಾಟಿಸಲಾಯಿತು.

ಅಂದು ಮನೆಯಲ್ಲಾಗಲಿ ಅಥವಾ ಜನರ ಕೈಯಲ್ಲಾಗಲಿ ಸಮಯ ಪರಿಪಾಲನೆಗಾಗಿ ಗಡಿಯಾರ ಬಳಕೆ ಅಪರೂಪವಾಗಿತ್ತು. ಅಂತಹ ಸಂದರ್ಭದಲ್ಲಿ ಜನರು ಸಮಯ ತಿಳಿದುಕೊಳ್ಳಲು ಅನುಕೂಲವಾಗಲೆಂದು ಚಾಮರಾಜ ಒಡೆಯರ್ ಅವರು ಗೋಪುರಕ್ಕೆ ಗಡಿಯಾರ ಅಳವಡಿಸಿದ್ದರು. ಅತ್ಯಾಕರ್ಷಕ ಕಂಬಗಳ ಮೇಲೆ ನಿರ್ಮಾಣ ಮಾಡಿರುವ ಗೋಪುರದ ಕೆಳಗೆ ಕಾರಂಜಿ ಕೂಡ ನಿರ್ಮಿಸಲಾಗಿದೆ. ಗಡಿಯಾರದ ಸುತ್ತ ಕುಸುರಿ ಕೆತ್ತನೆಯ ವಿಶಿಷ್ಟತೆಯ ಕಲಾತ್ಮಕ ರೂಪವಿದೆ.

2012ರಲ್ಲಿ ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ಮೈಸೂರು ನಗರಪಾಲಿಕೆ, ಚಿಕ್ಕ ಗಡಿಯಾರ ಆವರಣವನ್ನು ಅಭಿವೃದ್ಧಿಪಡಿಸಿತು. ಸುತ್ತಲು ಕಲ್ಲಿನ ಆಸನಗಳು, ಗ್ರಾನೈಟ್ ಮೆಟ್ಟಿಲು, ಆಕರ್ಷಕ ದೀಪಗಳ ಅಳವಡಿಕೆ ಸೇರಿದಂತೆ ಸುಂದರ ವಿಹಾರ ತಾಣವಾಗಿ ಮಾಡಲಾಗಿತ್ತು. ಆದರೆ ಕಳಪೆ ಕಾಮಗಾರಿ ಈಗ ಚಿಕ್ಕ ಗಡಿಯಾರದ ವೈಭವ ಮಾಸುವಂತೆ ಮಾಡಿದೆ.



ಚಿಕ್ಕ ಗಡಿಯಾರದ ಗೋಪುರದ ಅಂದಕ್ಕೆ ಸುತ್ತಲಿನ ಕಲುಷಿತ ವಾತಾವರಣದಿಂದ ಅಪಚಾರವಾಗಿದೆ. ಗೋಪುರದ ಕೆಳಗೆ ಇರುವ ಕಾರಂಜಿಯಲ್ಲಿ ಕಸ ತುಂಬಲಾಗಿದೆ. ಇದರಿಂದ ರಾಜರು ನಿರ್ಮಾಣ ಮಾಡಿದ ಕಾರಂಜಿ ಹೆಸರಿಗೆ ಮಾತ್ರ ಇದ್ದು, ಕಾರಂಜಿ ತುಂಬಾ ಕಸವಿದೆ. ಕಾರಂಜಿಯ ಪೈಪ್‌ಗಳು ತುಕ್ಕು ಹಿಡಿಯುತ್ತಿವೆ.

ಚಿಕ್ಕ ಗಡಿಯಾರದ ಸುತ್ತ ಕಲ್ಲಿನ ಆಸನಗಳನ್ನು ಅಳವಡಿಸಲಾಗಿದ್ದು, ಅವೆಲ್ಲಾ ಕಿತ್ತು ಅಸ್ಥಿಪಂಜರದಂತಾಗಿವೆ. ಕೆಲವು ಸ್ಥಳಗಳಲ್ಲಿ ಹೂವಿನ ಗಿಡಗಳನ್ನು ಬೆಳೆಸಲು ಜಾಗ ಬಿಡಲಾಗಿದೆ. ಆದರೆ ಗಿಡಗಳಿಗೆ ನೀರೆರೆಯದೆ ಒಣಗಿದ ಕಡ್ಡಿ ಮಾತ್ರ ಕಾಣುತ್ತಿದೆ. ಗ್ರಾನೈಟ್ ಮೆಟ್ಟಿಲುಗಳ ಬಳಿ ಸ್ವಚ್ಛತೆ ಇಲ್ಲದೆ ಇಡೀ ವಾತಾವರಣ ಗಬ್ಬು ನಾರುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಚಿಕ್ಕ ಗಡಿಯಾರ ಅಂದ ಸವಿಯಲು ಬಂದವರು ಅಲ್ಲಿನ ಅಶುಚಿತ್ವ ನೋಡಿ ಕಾಲ್ಕೀಳುತ್ತಿದ್ದಾರೆ. ಸುತ್ತಲಿನ ಕಲುಷಿತ ವಾತಾವರಣದಿಂದ 128 ವರ್ಷಗಳ ಇತಿಹಾಸವಿರುವ ಪಾರಂಪರಿಕ ಶೈಲಿಯ ಚಿಕ್ಕ ಗಡಿಯಾರ ತನ್ನ ಮಹತ್ವ ಕಳೆದುಕೊಳ್ಳುತ್ತಿದೆ. ಚಿಕ್ಕ ಗಡಿಯಾರದ ಆವರಣ ಸದ್ಯಕ್ಕೆ ಹೂವು, ಹಣ್ಣು ಸೇರಿದಂತೆ ಇತರೆ ವ್ಯಾಪಾರಿಗಳಿಗೆ ಅನುಕೂಲವಾಗಿದೆ. ಸುತ್ತಲಿನ ಕಟ್ಟೆ ಮೇಲೆ ಹೂವು, ಹಣ್ಣು ಸೇರಿದಂತೆ ಇತರೆ ವಸ್ತುಗಳನ್ನಿಟ್ಟು ವ್ಯಾಪಾರ ಮಾಡುತ್ತಿದ್ದು, ಇಲ್ಲಿಗೆ ಬರುವ ಪ್ರವಾಸಿಗರು ವ್ಯಾಪಾರಿಗಳ ದಾಟಿ ಹೋಗುವ ಸಾಹಸ ಮಾಡಲಾರರು. ಒಂದು ವೇಳೆ ವ್ಯಾಪಾರಿಗಳ ಭೇದಿಸಿ ಮುಂದೆ ಹೋದರೂ ಗಬ್ಬು ನಾರುವ ವಾತಾವರಣದಿಂದ ತಕ್ಷಣ ಅಲ್ಲಿಂದ ಪೇರಿ ಕೀಳುತ್ತಾರೆ.

### ತುರ್ತಾಗಿ ಸ್ವಚ್ಛತೆ ಆರಂಭಿಸಲಾಗುವುದು

ಈಗ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಕಾರಣ ಯಾವುದೇ ಹೊಸ ಯೋಜನೆ ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲ. ಆದ ಕಾರಣ ತುರ್ತಾಗಿ ಚಿಕ್ಕ ಗಡಿಯಾರದ ಸುತ್ತಲಿನ ಜಾಗವನ್ನು ಸ್ವಚ್ಛವಾಗಿಡುವ ಸಂಬಂಧ ಕ್ರಮ ಕೈಗೊಳ್ಳಲಾಗುವುದು. ಈ ಸಂಬಂಧ ವಲಯ ಅಧಿಕಾರಿಗಳಿಗೆ ಸೂಚನೆ ನೀಡಿ ಸ್ವಚ್ಛತಾ ಕಾರ್ಯ ಆರಂಭಿಸಲಾಗುವುದು. ಚಿಕ್ಕ ಗಡಿಯಾರದ ಸುತ್ತಲಿನ ಕಟ್ಟೆ ಮೇಲೆ ವ್ಯಾಪಾರ ನಡೆಸುವ ವ್ಯಾಪಾರಸ್ಥರನ್ನು ಕೂಡ ತೆರವು ಮಾಡಲಾಗುವುದು. – **ಡಾ.ಮಧು, ನಗರಪಾಲಿಕೆ ಆಯುಕ್ತರು, ಮೈಸೂರು.**

### ಮುಖ್ಯಮಂತ್ರಿಗಳ ತವರೂರಿನ ಪಾರಂಪರಿಕ ತಾಣಗಳ ಗತಿ ಇದು

ಮೈಸೂರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆ. ಇಲ್ಲಿನ ಪಾರಂಪರಿಕ ತಾಣಗಳಿಗೆ ಈ ಗತಿಯಾದರೆ ಇನ್ನು ಉಳಿದ ಜಿಲ್ಲೆಗಳ ಪರಿಸ್ಥಿತಿ ಏನು?

ಸಿದ್ದರಾಮಯ್ಯ ಇದೇ ಸಯ್ಯಾಜಿರಾವ್ ರಸ್ತೆಯಲ್ಲಿ ಬಹಳಷ್ಟು ಬಾರಿ ಹಾದು ಹೋಗುತ್ತಾರೆ. ಚಿಕ್ಕ ಗಡಿಯಾರದ ಅವ್ಯವಸ್ಥೆ ಅವರ ಗಮನಕ್ಕೆ ಬಂದರೆ ನಮ್ಮ ಗತಿ ಏನು ಎಂಬ ಭಯ ಅಧಿಕಾರಿಗಳಿಗಿಲ್ಲ. ನಾಲ್ವಡಿ ಕೃಷ್ಣರಾಜ ಒಡೆಯರ್ ಬಿಟ್ಟರೆ ಮೈಸೂರಿಗೆ ಅತೀ ಹೆಚ್ಚು ಕೊಡುಗೆ ನೀಡಿದವರು ಸಿದ್ದರಾಮಯ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಡಿ ಹೊಗಳುತ್ತಾರೆ. ಆದರೆ ಮೈಸೂರಿನ ಪಾರಂಪರಿಕ ಕಟ್ಟಡಗಳ ಹೀನಾಯ ಪರಿಸ್ಥಿತಿ ಅವರಿಗೆ ತಿಳಿದಿಲ್ಲವೆ ಎಂಬ ಪ್ರಶ್ನೆಯನ್ನು ಮೈಸೂರಿಗರು ಮುಂದಿಡುತ್ತಿದ್ದಾರೆ.

ಸಿದ್ದರಾಮಯ್ಯ ಹೊಸದೇನು ಕೊಡುಗೆ ಕೊಡುವುದು ಬೇಡ, ಮಹಾರಾಜರು ನಿರ್ಮಾಣ ಮಾಡಿರುವ ಲ್ಯಾನ್ಸ್‌ಡೌನ್ ಬಿಲ್ಡಿಂಗ್, ದೇವರಾಜ ಮಾರುಕಟ್ಟೆ ಸೇರಿದಂತೆ ಇತರೆ ಪಾರಂಪರಿಕ ತಾಣಗಳನ್ನು ಸಂರಕ್ಷಿಸಿದರೆ ಸಾಕು ಎಂಬ ಅಭಿಪ್ರಾಯ ಜನ ಸಾಮಾನ್ಯರಲ್ಲಿ ವ್ಯಕ್ತವಾಗುತ್ತಿದೆ. ಈಗಿನ ಸರ್ಕಾರ ಪಾರಂಪರಿಕ ಶೈಲಿಯ ಇಂತಹ ಸಣ್ಣ ಗೋಪುರ ಕೂಡ ನಿರ್ಮಾಣ ಮಾಡಲಂತೂ ಸಾಧ್ಯವಿಲ್ಲ. ಒಂದು ವೇಳೆ ನಿರ್ಮಾಣ ಮಾಡಿದರೂ ಕಳಪೆ ಕಾಮಗಾರಿಯಿಂದ ಕೆಲವೇ ತಿಂಗಳಲ್ಲಿ ಕುಸಿದು ಬೀಳುತ್ತದೆ. ಇಂತಹ ಸಂದರ್ಭದಲ್ಲಿ ಮಹಾರಾಜರು ನಿರ್ಮಾಣ ಮಾಡಿರುವ ಪಾರಂಪರಿಕ ತಾಣಗಳನ್ನು ನಿರ್ವಹಣೆ ಕೂಡ ಮಾಡಲು ಸಾಧ್ಯವಾಗುತ್ತಿಲ್ಲ. ನಗರಪಾಲಿಕೆ ಅಧಿಕಾರಿಗಳು ಕಂಡು ಕಾಣದಂತಿದ್ದಾರೆ. ಮತಬೇಟೆ ಸೇರಿದಂತೆ ರಾಜಕೀಯ ತಂತ್ರಗಾರಿಕೆಯಲ್ಲಿ ಯಾವಾಗಲೂ ಮಗ್ನರಾಗುವ ಜನಪ್ರತಿನಿಧಿಗಳಿಗೂ ಇಲ್ಲಿನ ಉಸಾಬರಿ ಬೇಕಾಗಿಲ್ಲ. ಇದರಿಂದ ಮೈಸೂರಿನ ಬಹಳಷ್ಟು ಪಾರಂಪರಿಕ ತಾಣಗಳಿಗೆ ಚಿಕ್ಕ ಗಡಿಯಾರದ ಗತಿ ಬಂದಿದೆ.

# ಪ್ರಧಾನಮಂತ್ರಿಗಳು ಕಾರ್ಯಾಂಗದ ಮುಖ್ಯಸ್ಥರಷ್ಟೆ; ಅವರಿಗೂ ಮಿತಿಗಳಿವೆ

## ಬುದ್ಧ ಧಮ್ಮ ಸಮಿತಿ ಕಾರ್ಯದರ್ಶಿ ಆರ್.ಮಹದೇವಪ್ಪ ಅಭಿಮತ



**ಮೈಸೂರಿನ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ ಸಭಾಂಗಣದಲ್ಲಿ ದಲಿತ ಸಂಘರ್ಷ ಸಮಿತಿ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ವರ್ಷದ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ಪ್ರಜಾಪ್ರಭುತ್ವದಲ್ಲಿ ಸರ್ವಾಧಿಕಾರ ಧೋರಣೆ ವಿಷಯದ ವಿಚಾರ ಸಂಕಿರಣದಲ್ಲಿ ಕರ್ನಾಟಕ ಬುದ್ಧ ಧಮ ಸಮಿತಿ ಕಾರ್ಯದರ್ಶಿ ಆರ್. ಮಹದೇವಪ್ಪ ಮಾತನಾಡಿದರು.**

ಮೈಸೂರು,ಏ.18(ಎಂಟಿವೈ)– ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಭಾರತದಲ್ಲಿ ಪ್ರಧಾನ ಮಂತ್ರಿಗಳು ಕಾರ್ಯಾಂಗದ ಮುಖ್ಯಸ್ಥರಷ್ಟೇ ಆಗಿದ್ದು, ನಾನೇ ಸರ್ವಸ್ವ ಎನ್ನುವುದಕ್ಕೆ ಮಾನ್ಯವಿಲ್ಲ ಎಂದು ಕರ್ನಾಟಕ ಬುದ್ಧ ಧಮ್ಮ ಸಮಿತಿ ಕಾರ್ಯದರ್ಶಿ ಆರ್.ಮಹದೇವಪ್ಪ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ ಸಭಾಂಗಣದಲ್ಲಿ ದಲಿತ ಸಂಘರ್ಷ ಸಮಿತಿ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ವರ್ಷದ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ಪ್ರಜಾಪ್ರಭುತ್ವದಲ್ಲಿ ಸರ್ವಾಧಿಕಾರ ಧೋರಣೆ ವಿಷಯದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಪ್ರಧಾನ ಮಂತ್ರಿಗಳಿಗೂ ಮಿತಿಗಳಿವೆ. ಅವರು ಶಾಸಕಾಂಗ, ನ್ಯಾಯಾಂಗಕ್ಕೆ ಮುಖ್ಯಸ್ಥರಲ್ಲ. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ, ರಷ್ಯಾ ರಾಷ್ಟ್ರಗಳ ಅಧ್ಯಕ್ಷರಂತೆ ನಡೆದುಕೊಳ್ಳುತ್ತಿದ್ದಾರೆ. ಭಾರತದ ಒಕ್ಕೂಟ ವ್ಯವಸ್ಥೆ ಅಧಿಕಾರ ವ್ಯಾಪ್ತಿಯನ್ನು ಮೋದಿ ಅರ್ಥ ಮಾಡಿಕೊಳ್ಳಬೇಕು. ಸಂವಿಧಾನ ಚೆನ್ನಾಗಿ ಓದಬೇಕು ಎಂದು ಹೇಳಿದರು.

ಲೇಖಕ ಡಾ.ದಿಲೀಪ್ ನರಸಯ್ಯ ಪ್ರಾಸ್ತಾವಿಕವಾಗಿ ಮಾತನಾಡಿ, 1950ರಲ್ಲಿ ರಾಷ್ಟ್ರಕ್ಕೆ ಸಂವಿಧಾನ ಸಮರ್ಪಿಸಿದ ಅಂಬೇಡ್ಕರ್ ಅವರು ಪ್ರಜಾಪ್ರಭುತ್ವ ವ್ಯವಸ್ಥೆ ಅಭಿವೃದ್ಧಿಗೆ ಪೂರಕವಾಗಿದೆ. ಪ್ರಜಾಪ್ರಭುತ್ವ ಉಳಿಸುವ ಶಕ್ತಿ ತಳ ಸಮುದಾಯಗಳು ಮತ್ತು ಸಂಘಟನೆಗಳಿಗೆ ಇದೆ ಎಂದು ಅಂಬೇಡ್ಕರ್ ಹೇಳಿದ್ದಾರೆ. ಸಂವಿಧಾನದ ಮೂಲ ಆಶಯ ಅರಿಯದಿದ್ದರೆ ಸರ್ವಾಧಿಕಾರ ಬರುತ್ತದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ ಎಂದರು.

2014ರ ನಂತರ ಶಿಕ್ಷಣ ವ್ಯವಸ್ಥೆ ಮೇಲೆ ಪ್ರಬಲ ದಾಳಿ ಮಾಡಲಾಯಿತು. ಪ್ರಾಧ್ಯಾಪಕರು ಅಭಿಪ್ರಾಯ ವ್ಯಕ್ತಪಡಿಸುವಂತಿಲ್ಲ. ವಿದ್ಯಾರ್ಥಿಗಳು ಭಾಷಣ ಮಾಡಬಾರದು. ಎನ್‌ಇಪಿ ಮೂಲಕ ಗುರುಕುಲ ಪದ್ಧತಿ ಜಾರಿಗೆ ತರಲಾಗುತ್ತಿದೆ. ಆಹಾರದ ಹಕ್ಕು ಕಸಿದುಕೊಳ್ಳಲಾಗಿದೆ. ದನದ ಮಾಂಸ ತಿನ್ನುವಂತಿಲ್ಲ. ಆದರೆ, ದನದ ಮಾಂಸ ರಫ್ತು ಮಾಡುವಲ್ಲಿ ಭಾರತ ಮೊದಲನೇ ಸ್ಥಾನದಲ್ಲಿದೆ ಎಂದರು.

ದಸಂಸ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ ಅಧ್ಯಕ್ಷತೆ ವಹಿಸಿದ್ದರು. ಚಿಂತಕ ವಿಜಯಕುಮಾರ್ ಎಲ್ ವಿಷಯ ಮಂಡಿಸಿದರು. ಜಿಲ್ಲಾ ಸಂಚಾಲಕರಾದ ಡಾ.ಆಲಗೂಡು ಚಂದ್ರಶೇಖರ್, ಚಾ. ಶಿವಕುಮಾರ್, ಕೆ.ವಿ.ದೇವೇಂದ್ರ, ಶಿವಮೂರ್ತಿ ಶಂಕರಪುರ, ಕಿರಂಗೂರುಸ್ವಾಮಿ, ನಟರಾಜ್ ಹಾರೋಹಳ್ಳಿ ಭಾಗವಹಿಸಿದ್ದರು.

# ಬಿಜೆಪಿ ಬೆಂಬಲಿಸಿ ಏ.21, ನೇಕಾರ ಸಮುದಾಯದ ಸಮಾವೇಶ

ಮೈಸೂರು, ಏ.18(ಜಿಎ)–ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರಕ್ಕೆ ಮತ್ತೊಮ್ಮೆ ಬೆಂಬಲ ನೀಡಲು ನೇಕಾರ ಸಮುದಾಯದಿಂದ ಏ. 21ರಂದು ಬೆಳಿಗ್ಗೆ 10.30ಕ್ಕೆ ನಗರದ ವಸ್ತು ಪ್ರದರ್ಶನ ಮೈದಾನದಲ್ಲಿ ಸಮಾವೇಶ ಆಯೋಜಿಸಲಾಗಿದೆ ಎಂದು ಬಿಜೆಪಿ ನೇಕಾರ ಪ್ರಕೋಷ್ಠದ ರಾಜ್ಯ ಸಂಚಾಲಕ ಬಿ.ಎಸ್.ಸೋಮಶೇಖರ್ ತಿಳಿಸಿದರು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮುದಾಯದ ಅಭಿವೃದ್ಧಿಗೆ ನೇಕಾರ ಸಮ್ಮಾನ್ ಯೋಜನೆ, ಅಭಿವೃದ್ಧಿ ನಿಗಮ, ನೇಕಾರ ಸಾಲಮನ್ನಾ ಯೋಜನೆ ಮೂಲಕ ಬಿಜೆಪಿ ಸರ್ಕಾರ ಕೆಲಸ ಮಾಡಿದೆ. ಪ್ರತಿ ಜಿಲ್ಲೆಯಲ್ಲೂ ಟೆಕ್ಸ್‌ಟೈಲ್ ಪಾರ್ಕ್ ನಿರ್ಮಾಣದ ಆದೇಶವಾಗಿದೆ. ಆದರಿಂದ ಮೈಸೂರು– ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಹಾಗೂ ಚಾಮರಾಜನಗರ ಅಭ್ಯರ್ಥಿ ಬಾಲರಾಜ್ ಬೆಂಬಲಕ್ಕೆ ಸಮುದಾಯ ಸಜ್ಜಾಗಬೇಕು. ಎಲ್ಲರೂ ಸಮಾವೇಶಕ್ಕೆ ಆಗಮಿಸಿ ಬಿಜೆಪಿಗೆ ಶಕ್ತಿ ತುಂಬಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯ ಕಾರ್ಯದರ್ಶಿ ಎಸ್.ಸಿ.ಸತೀಶ್, ಜಿಲ್ಲಾ ಕಾರ್ಯದರ್ಶಿ ಚಲುವರಾಜು, ಪ್ರಕೋಷ್ಠ ರಾಜ್ಯ ಸದಸ್ಯ ಎಸ್.ಆರ್.ನಾಗಭೂಷಣ, ದೇವಾಂಗ ಸಂಘದ ಚಾಮರಾಜನಗರ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಬಿ.ಮೋಹನ್, ಪ್ರಮುಖರಾದ ಹೇಮಾ ಉಪಸ್ಥಿತರಿದ್ದರು.

# ಜನಸೇವಕ ಯುವ ಬ್ರಿಗೇಡ್‌ನ ಬೇಸಿಗೆ ಶಿಬಿರ ಸಮಾರೋಪ



ಮೈಸೂರು, ಏ. 18– ಮೈಸೂರಿನ ಜನಸೇವಕ ಯುವ ಬ್ರಿಗೇಡ್ ವತಿಯಿಂದ ಬೋಗಾದಿಯ ರೂಪಾನಗರದಲ್ಲಿ ಹತ್ತು ದಿನಗಳ ಕಾಲ ಮಕ್ಕಳಿಗೆ ಉಚಿತವಾಗಿ ಬೇಸಿಗೆ ಶಿಬಿರ ಆಯೋಜಿಸಿದ್ದು, ಸಮಾರೋಪ ಕಾರ್ಯಕ್ರಮದಲ್ಲಿ ಉಚಿತವಾಗಿ ಬೇಸಿಗೆ ಶಿಬಿರ ನಡೆಸಿಕೊಟ್ಟ ಶಿಕ್ಷಕರನ್ನು ಸನ್ಮಾನಿಸಲಾಯಿತು.


ಬಳಿಕ ಜನ ಸೇವಾ ಯುವ ಬ್ರಿಗೇಡ್ ಅಧ್ಯಕ್ಷ ರಾಘವೇಂದ್ರ ಮಾತನಾಡಿ, ಬೇಸಿಗೆ ಶಿಬಿರ ಚೆನ್ನಾಗಿ ನಡೆದಿದ್ದು ಶಿಕ್ಷಕರ, ವಿದ್ಯಾರ್ಥಿಗಳ ಲವಲವಿಕೆಯ ಸಹಭಾಗಿತ್ವ ಖುಷಿ ನೀಡಿದೆ. ಇಂಥ ಶಿಬಿರಗಳು ಮಕ್ಕಳಲ್ಲಿ ನಾಯಕತ್ವ ಗುಣ ಮೂಡಿಬರಲು ಸಹಕಾರಿಯಾಗುತ್ತವೆ ಎಂದರು.

ಕಾರ್ಯಕ್ರಮದಲ್ಲಿ ಪ್ರಧಾನ ಕಾರ್ಯದರ್ಶಿ ಮಹೇಶ್‌ಕುಮಾರ್, ಮಂಜು, ಪ್ರದೀಪ್‌ಕುಮಾರ್, ನವೀನ್‌ಕುಮಾರ್, ಪ್ರವೀಣ್ ಕುಮಾರ್, ಬಿಜೆಪಿಯ ಚಾಮುಂಡೇಶ್ವರಿ ಗ್ರಾಮಾಂತರ ಅಧ್ಯಕ್ಷ ವೈ.ಟಿ.ರವಿ, ಶಿವಕುಮಾರ್, ಹೇಮಂತ್, ಸುನಿಲ್, ಯೋಗ ಶಿಕ್ಷಕರಾದ ಶ್ರೀನಿವಾಸ್, ನೃತ್ಯ ಶಿಕ್ಷಕರಾದ ಆನಂದ್, ರಕ್ಷಾ ಪ್ರಭು, ಸ್ಪಂದ, ಮಾಯಾ, ಮಲ್ಲೇಶ್, ನಾಗರಾಜ್, ಯೋಗೇಶ್, ಮಕ್ಕಳ ಪೋಷಕರು ಉಪಸ್ಥಿತರಿದ್ದರು.



**ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಪರ ಚಾಮರಾಜ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.3ರಲ್ಲಿ ಮೈಸೂರು ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್ ಮನೆ ಮನೆಗೆ ತೆರಳಿ, ಮತಯಾಚಿಸಿದರು. ಈ ವೇಳೆ ವಾರ್ಡ್ ಅಧ್ಯಕ್ಷ ಸುರೇಶ್, ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದವರ್ಗದ ಗೋಪಾಲ್, ರಾಜು ಉಪ್ಪಾರ್, ಡಾ.ವಿಜಯರಾಜ್ ರವಿ ಕುಂಬಾರ್, ಮಹೇಶ್ ಮಡಿವಾಳ, ಲಕ್ಷ್ಮಿನಾರಾಯಣ್, ವೆಂಕಟೇಶ್ ಗುಂಡ ಇದ್ದರು.**

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**19.04.2024 ಶುಕ್ರವಾರ, ಮಳೆ ನಕ್ಷತ್ರ: ಅಶ್ವಿನಿ 13.04.2024 ರಿಂದ 26.04.2024**
**ಕ್ರೋಧಿ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,**
**ತಿಥಿ: ಏಕಾದಶಿ, ನಕ್ಷತ್ರ: ಮಖ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ**

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಶೀತದ ತಲೆನೋವು, ತಲೆಭಾರ, ಮೂಗು ಕಟ್ಟುವುದು, ಇತರೆ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ :** ಮತ ಜಾಗೃತಿ ಅಭಿಯಾನ, ಚಾಲನೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು : ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಪ್ರಾಂಶುಪಾಲ ಎಂ. ಪ್ರಕಾಶ್, ಸಿಪಿಸಿ ಪಾಲಿಟೆಕ್ನಿಕ್ ವಿಶೇಷ ಅಧಿಕಾರಿ ದೊಡ್ಡಯ್ಯ, ಸ್ಥಳ: ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್, ಬೆಳಗ್ಗೆ 9ಕ್ಕೆ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ರವರೆಗೆ
- **ಕಾದಂಬರಿ ಏಜೆನ್ಸೀಸ್ ಮತ್ತು ವಿಕಲ ವಿಕಾಸ ಟ್ರಸ್ಟ್ :** ಮಕ್ಕಳ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂ.45, ಕೆ.ಆರ್. ಸರ್ಕಲ್, ದೇವರಾಜ ಅರಸು ರಸ್ತೆ, ಬೆಳಗ್ಗೆ 10 ರಿಂದ.
- **ಮಹಾರಾಣಿ ವಿಜ್ಞಾನ ಮಹಿಳಾ ಕಾಲೇಜು, ಕಾಲೇಜು ಶಿಕ್ಷಣ ವಿಭಾಗ, ಗಣಿತಶಾಸ್ತ್ರ ಅಧ್ಯಯನ ವಿಭಾಗ :** ಮ್ಯಾಥಮಾಜಿಕಾ ಫನ್ ಅಂಡ್ ಲರ್ನ್, ಉದ್ಘಾಟನೆ : ಬಳ್ಳಾರಿ ಶ್ರೀ ಕೃಷ್ಣದೇವರಾಯ ವಿವಿ ಗಣಿತಶಾಸ್ತ್ರ ಅಧ್ಯಯನ ವಿಭಾಗದ ಪ್ರೊ. ವಿ. ಲೋಕೇಶ, ಅಧ್ಯಕ್ಷತೆ : ಮಹಾರಾಣಿ ಕಾಲೇಜು ಪ್ರಿನ್ಸಿಪಾಲ್ ಪ್ರೊ. ಎಂ. ಅಬ್ದುಲ್ ರಹಿಮಾನ್, ಸ್ಥಳ: ಕಲಾಮಂಟಪ, ಬೆಳಗ್ಗೆ 10.30ಕ್ಕೆ
- **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಅಕ್ಯೂಪ್ರೆಶರ್ ಹಾಗೂ ಸುಜೋಕ್ ಮತ್ತು ಅಕ್ಯೂ ಡಿಜಿಟಲ್ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಸಿಎ14–ಸಿ, ಎ ಬ್ಲಾಕ್, ವಿ.ಕೆ. ಪಬ್ಲಿಕ್ ಸ್ಕೂಲ್, ವಿಜಯನಗರ 3ನೇ ಹಂತ, ಬೆಳಗ್ಗೆ 10.30 ರಿಂದ.
- **ಶಾರದ ವಿಲಾಸ ಕಾಲೇಜು :** ಶಾರದೋತ್ಸವ–2024, ಅಂತರ ಕಾಲೇಜು ಸಾಹಿತ್ಯ ಮತ್ತು ಸಾಂಸ್ಕೃತಿಕ ಹಬ್ಬ, ಉದ್ಘಾಟನೆ : ನಿವೃತ್ತ ಪ್ರಾಧ್ಯಾಪಕ ಡಾ. ಪ್ರೀತಿ ಶುಭಚಂದ್ರ, ಗೌರವ ಅತಿಥಿಗಳು : ಎಸ್‌ವಿಇಐ ಅಧ್ಯಕ್ಷ ಡಾ. ಬಿ.ಎಂ. ಸುಬ್ರಾಯ, ಕಾರ್ಯದರ್ಶಿ ಎನ್. ಚಂದ್ರಶೇಖರ, ಅಧ್ಯಕ್ಷತೆ : ಶಾರದ ವಿಲಾಸ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ದೇವಿಕಾ, ಸ್ಥಳ: ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11ಕ್ಕೆ.
- **ರಂಗಾಯಣ :** ರಂಗಾಯಣದ ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ವೃಕ್ಷರಾಜ ನಾಟಕ ಪ್ರದರ್ಶನ, ಸಾಹಿತ್ಯ ರಚನೆ : ಎಸ್. ರಾಮನಾಥ್, ನಿರ್ದೇಶನ : ಹೈಸ್ನಾಂ ತೋಂಬಾ, ಸ್ಥಳ: ಭೂಮಿಗೀತ ರಂಗಮಂದಿರ, ಮಧ್ಯಾಹ್ನ 3ಕ್ಕೆ
- **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ಅರವತ್ತು ತುಂಬಿದ ಸಾಹಿತಿ ಬನ್ನೂರು ಕೆ. ರಾಜು ಅವರಿಗೆ ಅಭಿನಂದನಾ ಸಮಾರಂಭ, ಸಾನ್ನಿಧ್ಯ : ಶ್ರೀ ಹೊಸಮಠದ ಮಠಾಧ್ಯಕ್ಷ ಶ್ರೀ ಚಿದಾನಂದ ಸ್ವಾಮಿಗಳು, ಅಧ್ಯಕ್ಷತೆ : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಮುಖ್ಯ ಭಾಷಣ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಡಾ. ಎಸ್.ಶಿವರಾಜಪ್ಪ, ವಿಶೇಷ ಆಹ್ವಾನಿತರು : ಚಲನಚಿತ್ರ ನಟ ಸುಪ್ರೀತ್, ಮುಖ್ಯ ಅತಿಥಿಗಳು : ಸಾಹಿತಿ ಡಾ. ಕೆ. ಲೀಲಾಪ್ರಕಾಶ್, ಉದ್ಯಮಿ ರವಿಕುಮಾರ್, ಶ್ರೀಮತಿ ವಿದ್ಯಾ, ಸ್ಥಳ: ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಸಂಜೆ 4ಕ್ಕೆ.

### ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ–ಲೀಲಾ ಅಪ್ಪಾಜಿ, ಪ್ರಸ್ತುತಿ– ಜಿ.ಶಾಂತಕುಮಾರ್, 6.40 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ. ಪಿ. ಮಣಿ, ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಹಾಗೂ ಸಂಶೋಧನಾ ವಿಭಾಗ, ಪ್ರಸ್ತುತಿ– ಎನ್. ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಮತ ಹಾಕೋಣ ಬನ್ನಿ, 9.10 ನಮ್ಮ ಅರೋಗ್ಯ, 10.00 ಎಂ. ರಾಘವೇಂದ್ರ – ಹಾಡುಗಾರಿಕೆ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 1.20 ಭಾವಗೀತೆ, 1.30 ಚಿತ್ರಗೀತೆಗಳು, 3.00 ರಂಗಸ್ವಾಮಿ – ನಾಗಸ್ವರ, 4.00 ಮಹಿಳಾರಂಗ, ಸಖಿ–ಸಾಹಿತ್ಯ, 4.30 ವೃತ್ತಿ ಮಾರ್ಗದರ್ಶನ, 5.45 ಕರಾಮುವಿವಿ ಮುಕ್ತವಾಣಿ– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ.ಪಿ. ಮಣಿ, ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಹಾಗೂ ಸಂಶೋಧನಾ ವಿಭಾಗ, ಪ್ರಸ್ತುತಿ– ಎನ್. ಕೇಶವಮೂರ್ತಿ, 6.55 ಕೃಷಿರಂಗ, ನಾಟಕ–ಮನೆ ಬೆಳಗಿದ ಮಗಳು, ರಚನೆ–ಡಾ. ಜಾನಕಿ ಸುಂದರೇಶ್, ನಿರ್ಮಾಣ–ಪ್ರಭುಸ್ವಾಮಿ ಮಳೀಮಠ್, ಕೃಷಿಲೋಕ, ಪ್ರಸ್ತುತಿ–ಆರ್. ಲೋಕೇಶ್ವರಿ, 8.00 ರಸಮಂಜರಿ, 9.30 ಲೋಕ್ ಪ್ರಸಾರಕ್ ಕೇ ಸಾಥ್ ಲೋಕ್ ನಿರ್ಣಯ್–2024, 10.00 ತತ್ವ ಸಂಚಾರ, ಭಾಗವಹಿಸುತ್ತಾರೆ–ಕಾಳಿಸಿದ್ಧನಹುಂಡಿಯ ಮಹದೇವ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 10.30 ಸವಿನೆನಪು

- **ರಂಗಾಯಣ :** ಚಿಣ್ಣರ ಮೇಳ–2024, ಮಕ್ಕಳ ರಂಗ ತರಬೇತಿ ಶಿಬಿರ, ಚಿಣ್ಣರು ಮಣ್ಣಿನ ಮೌಲ್ಡಿನಿಂದ ಪೇಪರ್‌ನಲ್ಲಿ ತಯಾರಿಸಿದ ಮುಖವಾಡಗಳನ್ನು ಅಲಂಕರಿಸಿದ ರಥವನ್ನು ಎಳೆಯುವ ಕಾರ್ಯಕ್ರಮ, ಸ್ಥಳ: ರಂಗಾಯಣ, ಸಂಜೆ 4.30ಕ್ಕೆ.
- **ಶ್ರೀ ರಾಮ ಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್, ಮೈಸೂರು ಉತ್ತರ :** 30ನೇ ಶ್ರೀರಾಮನವಮಿ ಸಂಗೀತೋತ್ಸವ–2024, ಬೆಳಗ್ಗೆ 10ಕ್ಕೆ ಸೀತಾ ಸಹಸ್ರನಾಮ ಮತ್ತು ಶ್ರೀ ರಾಮ ಪಟ್ಟಾಭಿಷೇಕ, ಸಂಜೆ 5.15ಕ್ಕೆ ವಿದುಷಿ ಅಕ್ಷತ ಭಟ್ –ಯಶಸ್ವಿ–ಶುಭಾಂಗ್ ಅವರಿಂದ ಗಾಯನ, ಸಂಜೆ 6.15ಕ್ಕೆ ವಿದ್ವಾನ್ ಡಿ. ಬಾಲಕೃಷ್ಣ ಅವರಿಗೆ ಸಂಗೀತ ಕಲಾರಾಧಕ ಪ್ರಶಸ್ತಿ ಪ್ರದಾನ, ಸಂಜೆ 6.30ಕ್ಕೆ ವಿದ್ವಾನ್ ಡಿ. ಬಾಲಕೃಷ್ಣ ಅವರಿಂದ ವೀಣೆ, ವಿದ್ವಾನ್ ಟಿ.ಆರ್.ಶ್ರೀನಾಥ್–ಕೊಳಲು, ಡಾ. ಜ್ಯೋತ್ಸ್ನಾ ಶ್ರೀಕಾಂತ್–ಪಿಟೀಲು, ವಿದ್ವಾನ್ ಸಿ. ಚೆಲುವರಾಜು–ಮೃದಂಗ, ವಿದ್ವಾನ್ ಎನ್. ಗುರುಮೂರ್ತಿ–ಘಟಂ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿವಿ ಮೊಹಲ್ಲಾ.
- **ಶ್ರೀ ರಾಮಮಂದಿರ :** ಶ್ರೀ ರಾಮೋತ್ಸವ, ಶ್ರೀ ಮಹಾಗಣಪತಿ ಹೋಮ, ಶ್ರೀ ರಾಮಕೃಷ್ಣಾಶ್ರಮದ ಯತಿಗಳಾದ ಶ್ರೀ ಸ್ವಾಮಿ ಮಹಾಮೇಧಾನಂದ ಮಹಾರಾಜ್ ಅವರಿಂದ ಶ್ರೀ ರಾಮೋತ್ಸವ ಉದ್ಘಾಟನಾ ಸಮಾರಂಭ, ಸ್ಥಳ: ಶ್ರೀರಾಮಮಂದಿರ, ಜಯನಗರ, ಸಂಜೆ 6.30 ರಿಂದ.
- **ಶ್ರೀರಾಮ ದೇವಸ್ಥಾನ :** ಶ್ರೀರಾಮ ನವಮಿ ಮಹೋತ್ಸವ, ಶ್ರೀ ಲಲಿತಾ ಸಹಸ್ರನಾಮ ಹೋಮ, ಸ್ಥಳ: ಶ್ರೀರಾಮ ದೇವಸ್ಥಾನ, ಅರಮನೆ ಕೋಟೆ, ಉತ್ತರ ಬಾಗಿಲು.
- **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀ ರಾಮನವಮಿ ಪ್ರಯುಕ್ತ ಸಂಗೀತೋತ್ಸವ, ವಿದ್ವಾನ್ ಸಂದೀಪ್ ನಾರಾಯಣ್ ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ಹೆಚ್.ಕೆ. ವೆಂಕಟರಾಮ್–ಪಿಟೀಲು, ವಿದ್ವಾನ್ ಸಾಯಿ ಗಿರಿಧರ್–ಮೃದಂಗ, ವಿದ್ವಾನ್ ಗಿರಿಧರ್ ಉಡುಪ–ಘಟಂ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6.30 ರಿಂದ.
- **ಶ್ರೀ ರಾಮಸೇವಾ ಮಂಡಲಿ:** 71ನೇ ವರ್ಷದ ಶ್ರೀರಾಮೋತ್ಸವ, ಸಂಜೆ 6.30ಕ್ಕೆ ವಿದ್ವಾನ್ ಎಸ್. ಶಿವಕುಮಾರ್ ಶಿವಮೊಗ್ಗ ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ಎಸ್.ಪಿ. ಅನಂತಪದ್ಮನಾಭ–ಪಿಟೀಲು, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ – ಮೃದಂಗ, ವಿದ್ವಾನ್ ಎಂ.ಆರ್. ಮಂಜುನಾಥ್–ಘಟಂ, ಸ್ಥಳ: ಶ್ರೀರಾಮ ಸೇವಾ ಮಂಡಲಿ, ವಿದ್ಯಾರಣ್ಯಪುರಂ.

**ಗಾಣಿಗನಕೊಪ್ಪಲಿನಲ್ಲಿಂದು, ತಿ. ನರಸೀಪುರ ತಾಲೂಕು**

- **ಶ್ರೀ ಘನನೀಲಿ ಪವಾಡಪುರುಷ ಸಿದ್ದಪ್ಪಾಜಿ ದೇವಸ್ಥಾನ :** ಮಹಾ ಕೊಂಡೋತ್ಸವ, ಬೆಳಗ್ಗೆ 6.30ಕ್ಕೆ 6.30ಕ್ಕೆ ಕೊಂಡೋತ್ಸವ, ಬೆಳಗ್ಗೆ 7.30ಕ್ಕೆ ಅನ್ನಸಂತರ್ಪಣೆ, ಸ್ಥಳ: ದೇವಸ್ಥಾನ.

ಮೈಸೂರು ಮಿತ್ರ ಶುಕ್ರವಾರ 19 ಏಪ್ರಿಲ್ 2024

# ಕಾಂಗ್ರೆಸ್ ಅಭ್ಯರ್ಥಿ ಪರ ಡಾ. ಯತೀಂದ್ರ ಮತಯಾಚನೆ



ಮೈಸೂರು ತಾಲೂಕಿನ ಹಿನಕಲ್‌ನಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಮಾಜಿ ಶಾಸಕ ಡಾ.ಯತೀಂದ್ರ ಮತಯಾಚಿಸಿದರು.

ಮೈಸೂರು, ಏ.18(ಎಂಟಿವೈ)– ಕಾಂಗ್ರೆಸ್ ಪಕ್ಷ ನುಡಿದಂತೆ ನಡೆದ ಪಕ್ಷ. ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ 9 ತಿಂಗಳಲ್ಲೇ 5 ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ಜನರ ಹಿತ ಕಾಪಾಡಿದೆ. ಸರ್ಕಾರಕ್ಕೆ ಶಕ್ತಿ ತುಂಬಲು ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರನ್ನು ಅಧಿಕ ಮತಗಳ ಅಂತರದಿಂದ ಗೆಲ್ಲಿಸಬೇಕೆಂದು ಮಾಜಿ ಶಾಸಕ ಡಾ.ಯತೀಂದ್ರ ಮನವಿ ಮಾಡಿದ್ದಾರೆ.

ಮೈಸೂರು ತಾಲೂಕಿನ ಹಿನಕಲ್ ಗ್ರಾಮದಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ. ಲಕ್ಷ್ಮಣ ಪರವಾಗಿ ಮತಯಾಚಿಸಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಗೊಬ್ಬರದ ಬೆಲೆ ರೂ. 500 ರಿಂದ 1700ಕ್ಕೆ ಹೆಚ್ಚಾಗಿದೆ. ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಗಿದ್ದು, 30 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿ ಇವೆ. ಸರ್ಕಾರಿ ಸಂಸ್ಥೆಗಳನ್ನು ಖಾಸಗಿಯವರಿಗೆ ಮಾರುತ್ತಿದ್ದಾರೆ. ಬಿಜೆಪಿ ಶ್ರೀಮಂತರ ಪರ, ಬಂಡವಾಳಶಾಹಿಗಳ ಪರವಾಗಿದ್ದು, ಬಡವರ ವಿರೋಧಿ ಸರ್ಕಾರವಾಗಿದೆ. ಬಿಜೆಪಿ ಎಂದಿಗೂ ಕೊಟ್ಟ ಮಾತನ್ನು ಉಳಿಸಿಕೊಂಡಿಲ್ಲ. ವಚನ ಭ್ರಷ್ಟ ಪಕ್ಷವಾಗಿದೆ. ಆದ್ದರಿಂದ ಈ ಬಾರಿ ಎಚ್ಚರಿಕೆಯಿಂದ ಮತದಾನ ಮಾಡಿ ಎಂದು ಕೋರಿದರು.

ಜಿ.ಪಂ. ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಿನಕಲ್ ಗ್ರಾಮಕ್ಕೆ ಒಳಚರಂಡಿ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಕಾವೇರಿ ನೀರು ಕೊಟ್ಟಿದ್ದಾರೆ, ಸ್ಮಶಾನದ ಅಭಿವೃದ್ಧಿ ಮಾಡಿಕೊಡುತ್ತಾರೆ. ಚುನಾವಣೆ ಮುಗಿದ ಮೇಲೆ ಇಂದಿರಾ ಕ್ಯಾಂಟೀನ್ ನಿರ್ಮಾಣಕ್ಕೆ ಮುಖ್ಯಮಂತ್ರಿಗಳಿಂದಲೇ ಗುದ್ದಲಿ ಪೂಜೆ ಮಾಡಿಸಲಾಗುವುದು. ಹಿನಕಲ್ ಗ್ರಾಮದ ಎಲ್ಲಾ ಕೇರಿಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಮಾಡಿಸಿ ಕೊಡುವುದಾಗಿ ತಿಳಿಸಿದ ಅವರು ಎಲ್ಲಾ ಮುಖಂಡರು ನಿಮ್ಮನಿಮ್ಮ ಬೂತ್‌ಗಳಲ್ಲಿ ಮನೆ ಮನೆಗೆ ತೆರಳಿ ಗ್ಯಾರಂಟಿ ಕಾರ್ಡ್ ವಿತರಿಸಿ ಮತ ಕೇಳುವ ಮುಖಾಂತರ ಎಂ. ಲಕ್ಷ್ಮಣ ಅವರನ್ನು ಗೆಲ್ಲಿಸಬೇಕೆಂದರು.

ಸಭೆಯಲ್ಲಿ ಜಿ.ಪಂ. ಮಾಜಿ ಸದಸ್ಯರಾದ ಕೂರ್ಗಳ್ಳಿ ಮಹದೇವ, ಬೀರಿಹುಂಡಿ ಬಸವಣ್ಣ, ಅರುಣ್‌ಕುಮಾರ್, ಜವರಪ್ಪ, ಮಾದೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ. ಗುರುಸ್ವಾಮಿ, ಬಿ. ರವಿ, ಕೆಪಿಸಿಸಿ ಕಾರ್ಯದರ್ಶಿ ನಾಗವಾಲ ನರೇಂದ್ರ, ಮುಖಂಡರಾದ ಹೊನ್ನಪ್ಪ, ಸಂದೇಶ ದೇವಣ್ಣ, ಹಿನಕಲ್ ಪ್ರಕಾಶ್, ಉದಯ್ ಶ್ರೀನಿವಾಸ್, ಕೆ.ಜಿ. ನಾಗರಾಜ್, ಪೈ. ಕುಮಾರ್, ಚಂದ್ರಶೇಖರ್, ದೇವರಾಜ್, ರಮೇಶ್ ಹೊಟ್ಟೇಗೌಡ, ಕೆ.ಎಸ್. ಕರೀಗೌಡ, ಸಿ.ಎಂ. ಸಿದ್ದರಾಮೇಗೌಡ, ದೊಡ್ಡೇಗೌಡ, ಫರ್ಜಾನ್, ರಾಜಣ್ಣ, ಡಾ. ಪ್ರಕಾಶ್, ನಂಜುಂಡ, ದಡದಹಳ್ಳಿ ಮಹಾದೇವ, ನುಗ್ಗಳ್ಳಿ ಚಿಕ್ಕಣ, ಮಂಜು ಹಾಜರಿದ್ದರು.

# ಮಂಡ್ಯ ಅಭಿವೃದ್ಧಿಯನ್ನು ಎರಡೇ ವರ್ಷದಲ್ಲಿ ಮಾಡಿ ತೋರಿಸುತ್ತೇನೆ

● ಮಾಜಿ ಮುಖ್ಯಮಂತ್ರಿ, ಮಂಡ್ಯ ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕುಮಾರಸ್ವಾಮಿ ವಿಶ್ವಾಸ ● ಮುಖ್ಯಮಂತ್ರಿಯಾಗಿದ್ದಾಗ ಮಂಡ್ಯ ಅಭಿವೃದ್ಧಿ ಪರ ನಿರ್ಧಾರ ಕೈಗೊಂಡಿದ್ದೆ ● ಮೈಸೂರಲ್ಲಿ ನೆಲೆಸಿರುವ ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿ ಜನರಲ್ಲಿ ಬೆಂಬಲ ಯಾಚನೆ



ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಮೈಸೂರು ನಿವಾಸಿಗಳು ಹಾಗೂ ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರ ಚುನಾವಣಾ ಪ್ರಚಾರ ಸಭೆಯಲ್ಲಿ ಕೈ ಮೇಲೆತ್ತುವ ಮೂಲಕ ಶಕ್ತಿ ಪ್ರದರ್ಶನ ಮಾಡಲಾಯಿತು. ಮಾಜಿ ಮುಖ್ಯಮಂತ್ರಿ ಹಾಗೂ ಮಂಡ್ಯ ಲೋಕಸಭಾ ಕ್ಷೇತ್ರದ ಎನ್‌ಡಿಎ ಮೈತ್ರಿ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ, ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಸಾರಾ ಮಹೇಶ್, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮತ್ತಿತರರಿದ್ದರು.

ಮೈಸೂರು, ಏ.18(ಎಂಕೆ)– ಮಂಡ್ಯ ಜಿಲ್ಲೆಯ ಅಭಿವೃದ್ಧಿಗೆ ನನಗೆ ಐದು ವರ್ಷಗಳ ಅವಶ್ಯಕತೆ ಇಲ್ಲ. ಕಾವೇರಿ ನದಿ ನೀರು ಹಂಚಿಕೆ ಹಾಗೂ ಮೇಕೆದಾಟು ಯೋಜನೆಗೆ ಶಾಶ್ವತ ಪರಿಹಾರ ಸೇರಿದಂತೆ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಯನ್ನು ಎರಡೇ ವರ್ಷದಲ್ಲಿ ಮಾಡುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಮಂಡ್ಯ ಲೋಕಸಭಾ ಕ್ಷೇತ್ರದ ಎನ್‌ಡಿಎ ಮೈತ್ರಿ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಭರವಸೆ ನೀಡಿದರು.

ಮೈಸೂರಿನ ವಿಜಯನಗರದಲ್ಲಿರುವ ಸಪ್ತಪದಿ ಕಲ್ಯಾಣ ಮಂಟಪದಲ್ಲಿ ಗುರುವಾರ ಆಯೋಜಿಸಿದ್ದ ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಮೈಸೂರು ನಿವಾಸಿಗಳು ಹಾಗೂ ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರ ಚುನಾವಣಾ ಪ್ರಚಾರ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಇವತ್ತಿನ ಚುನಾವಣೆ ಹಣ ಬಲ ಮತ್ತು ಜನ ಬಲದ ನಡುವೆ ನಡೆಯುತ್ತಿರುವ ಚುನಾವಣೆಯಾಗಿದೆ. ಮಂಡ್ಯದಲ್ಲಾಗುತ್ತಿರುವ ಬೆಳವಣಿಗೆಗಳ ಬಗ್ಗೆ ಎಲ್ಲರಿಗೂ ಗೊತ್ತೆ ಇದೆ. ನೀವು ಮನಸ್ಸು ಮಾಡಿ ನಾಲ್ಕೈದು ದಿನ ನನಗಾಗಿ ಶ್ರಮಿಸಿದರೆ ದೊಡ್ಡ ಮಟ್ಟದಲ್ಲಿ ಗೆಲ್ಲಲು ಸಾಧ್ಯವಾಗುತ್ತದೆ ಎಂದರು.

ನಾನು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಮಂಡ್ಯ ಜಿಲ್ಲೆಯ ಅಭಿವೃದ್ಧಿಗಾಗಿ ಕೆಲಸ ಮಾಡುವ ನಿರ್ಧಾರಗಳನ್ನು ತೆಗೆದುಕೊಂಡಿದ್ದೆ. ಆದರೆ ನಂತರ ಬಂದ ಸರ್ಕಾರಗಳು ನಾನು ತೆಗೆದುಕೊಂಡಿದ್ದ ಅಭಿವೃದ್ಧಿ ಪರ ನಿರ್ಧಾರಗಳನ್ನು ಜಾರಿಗೊಳಿಸಲಿಲ್ಲ. ರಾಜ್ಯದಲ್ಲಿರುವ ಈ(ಕಾಂಗ್ರೆಸ್) ಸರ್ಕಾರದ ಕೆಲ ತೀರ್ಮಾನಗಳು ರೈತರನ್ನು ಸಂಕಷ್ಟಕ್ಕೆ ದೂಡಿದೆ. ಕೃಷಿ ಮಂತ್ರಿ ಭತ್ತವನ್ನೇ ಬೆಳೆಯಬೇಡಿ ಎಂದಿದ್ದಾರೆ. ಕಬ್ಬು ಒಣಗಿ ಹಾಳಾಗುತ್ತಿದೆ. ಕಾವೇರಿ ನದಿ ನೀರು ಹಂಚಿಕೆ ಹಾಗೂ ಮೇಕೆದಾಟು ವಿಚಾರದಲ್ಲಿಯೂ ಯಾವುದೇ ಬದಲಾವಣೆಗಳು ಆಗಿಲ್ಲ. ಮೈಶುಗರ್ ಕಾರ್ಖಾನೆ ಆರಂಭಿಸುತ್ತೇವೆ ಎಂದು ಬಜೆಟ್ ಪ್ರತಿಯಲ್ಲಿ ಓದಿದ್ದು ಬಿಟ್ಟರೇ ಆ ಕುರಿತು ಯಾವ ಕೆಲಸವೂ ಆಗಿಲ್ಲ. ಮಂಡ್ಯ ಜಿಲ್ಲೆ ಅಭಿವೃದ್ಧಿಗೆ ನನ್ನದೇ ಆದ ಕಲ್ಪನೆಗಳಿದ್ದು, ಸಂಸದನಾದ ಒಂದೆರಡು ವರ್ಷದಲ್ಲೇ ಜಿಲ್ಲೆಯನ್ನು ಎಲ್ಲಾ ರೀತಿಯಲ್ಲೂ ಅಭಿವೃದ್ಧಿ ಮಾಡುತ್ತೇನೆ. ದುಡಿಯುವ ಕೈಗಳಿಗೆ ಕೆಲಸ ಕೊಡಲಿದ್ದೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಪುಟ್ಟರಾಜು ಅವರನ್ನು ಅಭ್ಯರ್ಥಿಯನ್ನಾಗಿ ಮಾಡಬೇಕು ಎಂದುಕೊಂಡಿದ್ದೆವು. ಆದರೆ ನಂತರದಲ್ಲಾದ ಬದಲಾವಣೆ ಹಾಗೂ ಕಾಂಗ್ರೆಸ್‌ನ ಕೆಟ್ಟ ದೃಷ್ಟಿ ಮಂಡ್ಯ ಜನತೆಯ ಮೇಲೆ ಬೀಳಬಾರದು, ಅವರು ನನ್ನ ಮೇಲೆ ಇಟ್ಟಿರುವ ಅಭಿಮಾನ ಪ್ರೀತಿಗೆ ಅಗೌರವ ತೋರಬಾರದು ಎಂದು ಚುನಾವಣೆಗೆ ನಿಂತಿದ್ದೇನೆ. ನಿಮ್ಮ ಬೆಂಬಲ, ಆಶೀರ್ವಾದದಿಂದ ಜಿಲ್ಲೆ ಮತ್ತು ರಾಜ್ಯದ ಸಮಸ್ಯೆಗಳನ್ನು ಬಗೆಹರಿಸಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ಇದಕ್ಕಾಗಿ ಮಂಡ್ಯದಲ್ಲಿ ಹುಟ್ಟಿ ಮೈಸೂರಿನಲ್ಲಿ ನೆಲೆಸಿರುವ ನಿವಾಸಿಗಳು ಮಂಡ್ಯದಲ್ಲಿರುವ ನಿಮ್ಮ ಕುಟುಂಬಸ್ಥರು, ಸಂಬಂಧಿಕರನ್ನು ಭೇಟಿ ಮಾಡಿ ಸಹಕಾರ ನೀಡುವಂತೆ ಮನವಿ ಮಾಡಬೇಕು ಎಂದು ಕೋರಿದರು.

**ರಣರಂಗಕ್ಕೆ ದಂಡೆತ್ತಿ ಹೋಗಿ... ಕುಮಾರಣ್ಣನನ್ನು ಗೆಲ್ಲಿಸಿ...!**

ಮಂಡ್ಯದಲ್ಲಿ ಚುನಾವಣೆ ಯುದ್ಧ ನಡೆಯುತ್ತಿದೆ. ಕಾಂಗ್ರೆಸ್ ಹೈಕಮಾಂಡ್ ರಾಹುಲ್‌ಗಾಂಧಿಯನ್ನು ಕರೆದುಕೊಂಡು ಬಂದಿದ್ದಾರೆ. ಮುಖ್ಯಮಂತ್ರಿಗಳು ಸೇರಿದಂತೆ ಸರ್ಕಾರವೇ ಕುಮಾರಸ್ವಾಮಿಯನ್ನು ತೆಗೆದರೆ(ಸೋಲಿಸಿದರೆ) ನಾವು ಉಳಿಯೋದು ಎಂದು ಹೇಳುತ್ತಿದ್ದಾರೆ. ಇದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು. ಉದಾಸೀನ ಮಾಡದೆ, ಮೈಮರೆಯದೇ ಮಂಡ್ಯ ರಣರಂಗಕ್ಕೆ ದಂಡೆತ್ತಿ ಹೋಗಿ, ನಿಮ್ಮ ಸಂಬಂಧಿಕರು, ಕುಟುಂಬಸ್ಥರ ಮನೆಗೆ ಮೂರು ದಿನ ಮುಂಚಿತವಾಗಿ ಹೋಗಿ ಉಳಿದು ಅವರೆಲ್ಲರೂ ಜೆಡಿಎಸ್ ಬೆಂಬಲಿಸುವಂತೆ ಮಾಡಿ. ಕುಮಾರಣ್ಣರನ್ನು ಮೋದಿಯವರ ಪಕ್ಕದಲ್ಲಿ ನಿಲ್ಲಿಸಿ.

– ಜಿ.ಟಿ.ದೇವೇಗೌಡ, ಅಧ್ಯಕ್ಷರು, ಜೆಡಿಎಸ್ ಕೋರ್ ಕಮಿಟಿ

**ಕುಮಾರಣ್ಣನೇ ಸೂಕ್ತ:** ಮಾಜಿ ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಕಾವೇರಿ ನದಿ ನೀರು ಹಂಚಿಕೆ ವಿವಾದ ಹಾಗೂ ಮೇಕೆದಾಟು ಯೋಜನೆಗೆ ಶಾಶ್ವತ ಪರಿಹಾರ ನೀಡಲು ಹಾಗೂ ತಮಿಳುನಾಡಿನ ಎಂಪಿಗಳ ಲಾಬಿಯನ್ನು ಮೆಟ್ಟಿ ನಿಲ್ಲಲು ಕುಮಾರಣ್ಣ ಅವರೇ ಸೂಕ್ತರಾಗಿದ್ದು, ಅವರು ಲೋಕಸಭೆ ಪ್ರವೇಶ ಮಾಡಬೇಕು. ಅವರು ಗೆದ್ದರೆ ನಮಗೆ ಆನೆ ಬಲ ಬರಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಒಕ್ಕಲಿಗರ ಮೇಲೆ ಈಗ ಪ್ರೀತಿ ಹೆಚ್ಚಾಗಿದ್ದು, ಮೈಸೂರು–ಕೊಡಗು ಕ್ಷೇತ್ರದಲ್ಲಿ ಲಕ್ಷ್ಮಣ್ ಅವರನ್ನು ಬಲಿ ಕೊಡಲು ನಿಲ್ಲಿಸಿದ್ದಾರೆ. ನಮ್ಮಿಂದಲೇ ಬೆಳೆದ ಗುತ್ತಿಗೆದಾರ ಲೋಡ್‌ಗಟ್ಟಲೇ ದುಡ್ಡು ತಂದಿದ್ದಾರೆ. ಆದರೆ ಮಂಡ್ಯ ಜನತೆ ದುಡ್ಡಿಗೆ ಮಾರು ಹೋಗಲ್ಲ ಎಂಬ ನಂಬಿಕೆ ಇದೆ ಎಂದರು.

ಮಾಜಿ ಸಚಿವ ಸಾರಾ ಮಹೇಶ್, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ, ರವಿಕುಮಾರ್, ನಗರಪಾಲಿಕೆ ಮಾಜಿ ಸದಸ್ಯರಾದ ಎಸ್‌ಬಿಎಂ ಮಂಜು, ಪ್ರೇಮಾಶಂಕರೇಗೌಡ, ಲಕ್ಷ್ಮಿ ಶಿವಣ್ಣ, ಕೆ.ವಿ.ಶ್ರೀಧರ್ ಮುಖಂಡರಾದ ಕೆ.ವಿವೇಕಾನಂದ, ಕೆ.ಆರ್.ಪೇಟೆ ರಾಮಚಂದ್ರ, ಹೆಚ್.ಕೆ.ರಾಮು ಮತ್ತಿತರರು ಉಪಸ್ಥಿತರಿದ್ದರು.

**ರಾಜಕೀಯ ಚಕ್ರವ್ಯೂಹದಲ್ಲಿ ನಿಖಿಲ್‌ಗೆ ಸೋಲು...!**

ಕಳೆದ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ರಾಜಕೀಯ ಚಕ್ರವ್ಯೂಹ ಪ್ರವೇಶ ಮಾಡಿದ ನಿಖಿಲ್ ಗೆದ್ದು ಹೊರ ಬರಲು ಸಾಧ್ಯವಾಗಲಿಲ್ಲ. ಅದಕ್ಕೆ ನಮ್ಮಿಂದಲೂ ಸ್ವಲ್ಪಮಟ್ಟಿನ ತಪ್ಪುಗಳಾಗಿವೆ. ಆದರೆ ಈ ಬಾರೀ ನಿಮ್ಮೆಲ್ಲರ ಶ್ರಮದ ಆಶೀರ್ವಾದೊಂದಿಗೆ ಅಂತಿಮವಾಗಿ ನಾನು ಚಕ್ರವ್ಯೂಹ ಪ್ರವೇಶ ಮಾಡಿದ್ದೇನೆ. ಮಂಡ್ಯ ಫಲಿತಾಂಶ ಪಕ್ಷಕ್ಕೆ ಹೊಸ ಚೈತನ್ಯ ತರಲಿದೆ.

– ಹೆಚ್.ಡಿ.ಕುಮಾರಸ್ವಾಮಿ, ಮಂಡ್ಯ ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿ

# ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಮತದಾನ ಜಾಗೃತಿ




ಜಿಲ್ಲಾ ಕಸಾಪ ವತಿಯಿಂದ ಮತದಾನ ಜಾಗೃತಿ ಮೂಡಿಸಲಾಯಿತು.

ಮೈಸೂರು, ಏ.18(ಎಂಕೆ)– 'ನಿಮ್ಮ ಒಂದು ಮತ ದೇಶಕ್ಕೆ ಹಿತ', 'ಮತಗಟ್ಟೆಗೆ ಬನ್ನಿ ಮತದಾನ ಮಾಡಿ' ಎಂಬಿತ್ಯಾದಿ ಸಂದೇಶಗಳ ಮೂಲಕ ಸಾರ್ವಜನಿಕರಲ್ಲಿ ಮತದಾನ ಜಾಗೃತಿ ಮೂಡಿಸಲಾಯಿತು.

ಮೈಸೂರಿನ ವಿಜಯನಗರದಲ್ಲಿರುವ ಯೋಗನರಸಿಂಹ ದೇವಸ್ಥಾನದ ಎದುರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಹಮ್ಮಿಕೊಂಡಿದ್ದ ಮತದಾನ ಜಾಗೃತಿ ಅಭಿಯಾನದಲ್ಲಿ ಜಾಗೃತಿ ಸಂದೇಶಗಳ ಮೂಲಕ ಮತದಾನದ ಮಹತ್ವ ತಿಳಿಸಿಕೊಡಲಾಯಿತು.


ಮತದಾನದ ಪ್ರಾಮುಖ್ಯತೆ ತಿಳಿಸುವ ಹಾಡುಗಳನ್ನು ಹಾಡಿ ಸಾರ್ವಜನಿಕರ ಗಮನ ಸೆಳೆಯಲಾಯಿತು. ಈ ವೇಳೆ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಮತದಾನ ಪ್ರತಿಯೊಬ್ಬ ಭಾರತೀಯರ ಕರ್ತವ್ಯವಾಗಿದೆ. ಬಲಿಷ್ಠ ಭಾರತದ ನಿರ್ಮಾಣಕ್ಕಾಗಿ ಕಡ್ಡಾಯ ಮತದಾನ ಮಾಡುವಂತೆ ಮನವಿ ಮಾಡಿದರು. ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಕನ್ನಡಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಮ.ನ.ಲತಾ ಮೋಹನ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಶ್ರೀಮತಿ ಆಲಮ್ಮನವರ ಛತ್ರದ ಆವರಣದಲ್ಲಿ ಹಮ್ಮಿಕೊಂಡಿರುವ ಸಂಗೀತೋತ್ಸವದಲ್ಲಿ ಗುರುವಾರ ಅಕ್ಕರೈ ಶುಭಲಕ್ಷ್ಮಿ ಮತ್ತು ಸರ್ವಲತಾ ಅವರು ಶಾಸ್ತ್ರೀಯ ಗಾಯನ ನಡೆಸಿಕೊಟ್ಟರು. ಪಕ್ಕವಾದ್ಯದಲ್ಲಿ ಗೋಕುಲ್ (ಪಿಟೀಲು), ಡೆಲ್ಲಿ ಸಾಯಿರಾಂ (ಮೃದಂಗ), ಕೃಷ್ಣ (ಘಟಂ) ಸಹಕಾರ ನೀಡಿದರು.

# ಖ್ಯಾತ ಸಾಹಿತಿ ಡಾ. ಎಸ್.ಎಲ್.ಭೈರಪ್ಪ ಅವರ 'ವಂಶವೃಕ್ಷ'ದ ತಮಿಳು ಅವತರಣಿಕೆ 'ವಂಶವೃಕ್ಷಂ' ಕೃತಿ ಬಿಡುಗಡೆ

## ಬ್ರಿಟಿಷರ ಕಾಲದ ಇತಿಹಾಸ ಬದಲಾಗಬೇಕು: ಡಾ. ಭೈರಪ್ಪ ಆಗ್ರಹ



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸರಸ್ವತಿ ಸಮ್ಮಾನ್ ಪುರಸ್ಕೃತ ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪ ಅವರು ತಮಿಳು ಭಾಷೆಗೆ ಅನುವಾದಗೊಂಡ ತಮ್ಮ 'ವಂಶವೃಕ್ಷಂ' ಕಾದಂಬರಿಯನ್ನು ಬಿಡುಗಡೆ ಮಾಡಿದರು. ಚಿತ್ರದಲ್ಲಿ 'ಝೀರೊ ಡಿಗ್ರಿ' ಪ್ರಕಾಶನದ ರಾಮ್‌ಜೀ ನರಸಿಂಹನ್, ಅನುವಾದಕ ಕೆ.ನಲ್ಲತಂಬಿ, ಆರ್.ಗಾಯತ್ರಿ ಅವರನ್ನು ಕಾಣಬಹುದು.

ಮೈಸೂರು, ಏ.18(ಎಂಟಿವೈ)– ಸಾಮ್ರಾಜ್ಯ ರಕ್ಷಣೆಗಾಗಿ ಬ್ರಿಟಿಷರು ಭಾರತೀಯ ಇತಿಹಾಸ, ತತ್ವಶಾಸ್ತ್ರವನ್ನು ತಮಗೆ ಬೇಕಾದಂತೆ ಬರೆದುಕೊಂಡಿದ್ದು, ನಾವು ಬ್ರಿಟಿಷರು ಬರೆದ ಇತಿಹಾಸವನ್ನೇ ಓದುವಂತಾಗಿದೆ. ಅದು ಬದಲಾಗಬೇಕು ಎಂದು ಖ್ಯಾತ ಹಿರಿಯ ಸಾಹಿತಿ ಡಾ. ಎಸ್.ಎಲ್.ಭೈರಪ್ಪ ಆಗ್ರಹಪಡಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ 'ಝೀರೊ ಡಿಗ್ರಿ' ಪ್ರಕಾಶನದ ಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತಮ್ಮ 'ವಂಶವೃಕ್ಷ' ಕಾದಂಬರಿಯ ತಮಿಳು ಅವತರಣಿಕೆ 'ವಂಶವೃಕ್ಷಂ' ಕೃತಿಯನ್ನು ಬಿಡುಗಡೆ ಮಾಡಿ, ಅನುವಾದಕ ಕೆ.ನಲ್ಲತಂಬಿ ಅವರನ್ನು ಅಭಿನಂದಿಸಿ ಮಾತನಾಡಿದ ಅವರು, ದೇಶದ ಎಲ್ಲ ಭಾಷೆಗಳಿಗೂ ನನ್ನ ಬಹುತೇಕ ಕಾದಂಬರಿಗಳು ಅನುವಾದಗೊಂಡಿದ್ದರೂ, ಇದುವರೆಗೂ ತಮಿಳು ಭಾಷೆಗೆ ಅನುವಾದ ಆಗಿರಲಿಲ್ಲ. ಬೇರೆ ಭಾಷೆಗೆ ನನ್ನ ಕೃತಿಯನ್ನು ಅನುವಾದ ಮಾಡಲು ನಾನು ತಕ್ಷಣಕ್ಕೆ ಅನುಮತಿ ಕೊಡುವುದಿಲ್ಲ. ಅನುಮತಿ ನೀಡಬೇಕೋ, ಬೇಡವೋ ಎಂದು ಆಲೋಚನೆ ಮಾಡುತ್ತೇನೆ. ಸ್ನೇಹಿತ ಡಾ.ಚಂದ್ರಶೇಖರ್ 'ವಂಶವೃಕ್ಷ' ಕಾದಂಬರಿಯನ್ನು ತಮಿಳಿಗೆ ಅನುವಾದ ಮಾಡಲು ನಲ್ಲತಂಬಿ ಬಂದಿದ್ದಾರೆ. ಬಹಳ ಚೆನ್ನಾಗಿ ಅನುವಾದ ಮಾಡುತ್ತಾರೆ. ಒಪ್ಪಿಗೆಕೊಡಿ ಎಂದು ಕೇಳಿದ್ದರು. ಅದಕ್ಕೆ ನಾನೂ ಒಪ್ಪಿದೆ. ಇದೀಗ ತಮಿಳಿನಲ್ಲಿ 'ವಂಶವೃಕ್ಷಂ' ಕೃತಿ ಬಂದಿರುವುದು ಸಂತೋಷವನ್ನುಂಟು ಮಾಡಿದೆ ಎಂದರು.

ಈ ಹಿಂದೆ ಹಿಂದೂ ಕಾನೂನುಗಳನ್ನು ಅರ್ಥ ಮಾಡಿಕೊಳ್ಳಲು ಹಾಗೂ ನ್ಯಾಯಾಲಯದಲ್ಲಿ ವಾದ ಮತ್ತು ತೀರ್ಪು ನೀಡಲು ಮುಲ್ಲಾ ಆ್ಯಂಡ್ ಮುಲ್ಲಾ ಅವರ ಕೃತಿಯನ್ನು ವಕೀಲರು ಹಾಗೂ ನ್ಯಾಯಾಧೀಶರು ಅಧ್ಯಯನ ನಡೆಸುವ ಅಗತ್ಯವಿತ್ತು. ಆ ಕೃತಿ ಅಧ್ಯಯನದಿಂದ ಹೆಚ್ಚಿನ ಮಾಹಿತಿ ಸಿಗುತ್ತಿರಲಿಲ್ಲ. ವಂಶವೃಕ್ಷ ಕಾದಂಬರಿ ಓದಿದರೆ ಹಿಂದೂ ಕಾನೂನುಗಳು ಸರಿಯಾಗಿ ಅರ್ಥವಾಗುತ್ತವೆ ಎಂದು ಮುಖ್ಯ ನ್ಯಾಯಮೂರ್ತಿ ಗೋವಿಂದ ಭಟ್ ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಹೇಳಿದ್ದರು. ಹಿಂದೂ ಕಾನೂನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಪಿ.ವಿ.ಕಾಣೆ ಅವರ 'ಹಿಸ್ಟರಿ ಆಫ್ ಧರ್ಮಶಾಸ್ತ್ರ' ಪುಸ್ತಕ ಓದಬೇಕು. 10 ಸಂಪುಟಗಳನ್ನು ಬರೆಯಲು 40 ವರ್ಷ ತೆಗೆದುಕೊಂಡರು ಎಂದು ಹೇಳಿದರು.

ಅನುವಾದಕ ಕೆ.ನಲ್ಲತಂಬಿ ಮಾತನಾಡಿ, ಡಾ.ಎಸ್.ಎಲ್.ಭೈರಪ್ಪ ಅವರ ವಂಶವೃಕ್ಷ ಕೃತಿ ಬಿಡುಗಡೆಯಾದ 64 ವರ್ಷದ ನಂತರ ತಮಿಳಿಗೆ ಅನುವಾದವಾಗಿದೆ. ವಂಶವೃಕ್ಷಂ ನನ್ನ 51ನೇ ಅನುವಾದಿತ ಕೃತಿಯಾಗಿದೆ. ಈ ಕೃತಿ ಬಿಡುಗಡೆ ಕಾರ್ಯಕ್ರಮ ನಾನು ಓದಿದ ಮೈಸೂರಿನಲ್ಲಿಯೇ ನಡೆದಿರುವುದು ಸಂತಸ ತಂದಿದೆ ಎಂದರು.

ಕಾರ್ಯಕ್ರಮದಲ್ಲಿ ಲೇಖಕ ಪಾವಣ್ಣನ್, 'ಝೀರೊ ಡಿಗ್ರಿ' ಪ್ರಕಾಶನದ ರಾಮ್‌ಜೀ ನರಸಿಂಹನ್, ಆರ್.ಗಾಯತ್ರಿ ಉಪಸ್ಥಿತರಿದ್ದರು.

# ಕಾರ್ಮಿಕರನ್ನು ಮತದಾನಕ್ಕೆ ಪ್ರೇರೇಪಿಸಿ

## ಸಂಘ–ಸಂಸ್ಥೆ ಪದಾಧಿಕಾರಿಗಳಲ್ಲಿ ಸ್ವೀಪ್ ಸದಸ್ಯ ಟಿ.ದಿನೇಶ್ ಮನವಿ



ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿರುವ ಎಂಸಿಸಿಐ ಕಚೇರಿಯಲ್ಲಿ ಗುರುವಾರ ಸ್ವೀಪ್ ಸಮಿತಿಯಿಂದ ನಡೆದ ಸಭೆಯಲ್ಲಿ ಮತದಾನ ಸಂಬಂಧ ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು.

ಮೈಸೂರು,ಏ.18(ಪಿಎಂ)– ಮತದಾನ ದಿನದಂದು ತಮ್ಮಲ್ಲಿನ ಕಾರ್ಮಿಕರು ಹಾಗೂ ಸುತ್ತಮುತ್ತಲಿನವರಿಗೆ ಮತದಾನ ಮಾಡುವಂತೆ ಪ್ರೇರೇಪಿಸಬೇಕೆಂದು ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳಿಗೆ ಸ್ವೀಪ್ ಸದಸ್ಯರೂ ಆದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಜಂಟಿ ನಿರ್ದೇಶಕ ಟಿ.ದಿನೇಶ್ ಮನವಿ ಮಾಡಿದರು.

ಮೈಸೂರಿನ ದೇವರಾಜ ರಸ್ತೆಯಲ್ಲಿರುವ ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಯಲ್ಲಿ (ಎಂಸಿಸಿಐ) ಮೈಸೂರು ಜಿಲ್ಲಾ ಸ್ವೀಪ್ ಸಮಿತಿ ಹಾಗೂ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ವತಿಯಿಂದ ಎಂಸಿಸಿಐ ವ್ಯಾಪ್ತಿಯ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ಗುರುವಾರ ಹಮ್ಮಿಕೊಂಡಿದ್ದ ಸಭೆಯಲ್ಲಿ ಅವರು ಮಾತನಾಡಿದರು.

ಮತದಾನ ಜಾಗೃತಿ ಸಂಬಂಧ ಈವರೆಗೆ ಬೃಹತ್ ಮತ್ತು ಮಧ್ಯಮ ವರ್ಗದ 25 ಕೈಗಾರಿಕಾ ಘಟಕಗಳಿಗೆ ಭೇಟಿ ನೀಡಿ, 12 ಸಾವಿರ ಕಾರ್ಮಿಕರನ್ನು ತಲುಪಿದ್ದೇವೆ. ಆದರೆ ಎಲ್ಲಾ ಸಣ್ಣ ಕೈಗಾರಿಕೆಗಳಿಗೆ ಭೇಟಿ ನೀಡುವುದು ಸಾಧ್ಯವಿಲ್ಲ. ಹಾಗಾಗಿ ಸಣ್ಣ ಕೈಗಾರಿಕೆ ಹಾಗೂ ವಾಣಿಜ್ಯ ಸಂಸ್ಥೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಮತದಾನದ ಮಹತ್ವ ತಿಳಿಸಿ ಕಡ್ಡಾಯ ಮತದಾನಕ್ಕೆ ಉತ್ತೇಜಿಸಲು ಈ ಸಭೆಯಲ್ಲಿ ತಮ್ಮೆಲ್ಲರ ಮೂಲಕ ಸಂದೇಶ ರವಾನಿಸಲಾಗುತ್ತಿದೆ ಎಂದು ತಿಳಿಸಿದರು.

ಇಡೀ ವಿಶ್ವದಲ್ಲೇ ಭಾರತದ ಲೋಕಸಭಾ ಚುನಾವಣೆ ಅತ್ಯಂತ ದೊಡ್ಡ ಮಟ್ಟದ ಚುನಾವಣೆಯಾಗಿದೆ. ಪ್ರಸ್ತುತ ಭಾರತದ ಜನಸಂಖ್ಯೆ 144 ಕೋಟಿ ಇದ್ದು, ಈ ಪೈಕಿ 97 ಕೋಟಿ ಮತದಾರರು ಇದ್ದಾರೆ. ಮತದಾನಕ್ಕಾಗಿ 10.5 ಲಕ್ಷ ಮತಗಟ್ಟೆಗಳನ್ನು ವ್ಯವಸ್ಥೆ ಮಾಡಲಾಗಿದೆ. 55 ಲಕ್ಷ ಇವಿಎಂ ಯಂತ್ರಗಳನ್ನು ಸಜ್ಜುಗೊಳಿಸಲಾಗಿದೆ. ಒಂದೂವರೆ ಕೋಟಿ ಜನ ಚುನಾವಣಾ ಕರ್ತವ್ಯದಲ್ಲಿ ನಿರತರಾಗಿದ್ದಾರೆ. ಇಷ್ಟು ವ್ಯವಸ್ಥಿತ ಚುನಾವಣೆ ಬೇರೆ ಯಾವುದೇ ದೇಶದಲ್ಲಿ ನಡೆಯುವುದಿಲ್ಲ. ಒಬ್ಬ ಮತದಾರನೂ ಮತದಾನ ಮಾಡದೇ ಇರುವಂತೆ ಆಗಬಾರದೆಂದು ಭಾರತ ಚುನಾವಣಾ ಆಯೋಗ ಹೇಳಿದ್ದು, ನಿಮ್ಮ ಕಾರ್ಮಿಕರು ಹಾಗೂ ಸಂಘದ ಸದಸ್ಯರಿಗೂ ಮತದಾನದಲ್ಲಿ ಪಾಲ್ಗೊಳ್ಳಲು ಸಲಹೆ ನೀಡಿ ಎಂದು ಕೋರಿದರು.

ಇದೇ ವೇಳೆ ಮತದಾನ ಸಂಬಂಧ ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು. ಎಂಸಿಸಿಐ ಅಧ್ಯಕ್ಷ ಕೆ.ಬಿ.ಲಿಂಗರಾಜು, ಕಾರ್ಯದರ್ಶಿ ಶಿವಾಜಿರಾವ್, ಖಜಾಂಚಿ ಅಶೋಕ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ದೇವರಾಜ ಮಾರುಕಟ್ಟೆ ಬಾಡಿಗೆದಾರರ ಸಂಘದ ಅಧ್ಯಕ್ಷ ಮಹದೇವ್, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳಾದ ಆರ್.ಮಂಜುನಾಥ್, ಎಸ್.ಕುಮಾರಸ್ವಾಮಿ, ಎಸ್.ರಾಧಾಕೃಷ್ಣ, ಎನ್.ಮಲ್ಲೇಶ್, ಜಿ.ನಳಿನಿ, ರುಕ್ಮಿಣಿ ಚಂದ್ರ, ಪದ್ಮಿನಿ ಶಿವಣ್ಣ, ಎಸ್. ಅಚ್ಯುತ, ಶಶಿಧರ್ ಮತ್ತಿತರರು ಹಾಜರಿದ್ದರು.

# ಶಾಸನಗಳು ನಾಶವಾದರೆ ದೇಶದ ಇತಿಹಾಸವೇ ನಾಶವಾದಂತೆ

● ಪುರಾತತ್ವ ಸಂಗ್ರಹಾಲಯಗಳು ಮತ್ತು ಪಾರಂಪರಿಕ ಇಲಾಖೆ ಆಯುಕ್ತ ದೇವರಾಜು ಅಭಿಮತ
● ವಿಶ್ವ ಪರಂಪರೆ ದಿನ; ಶಿಲಾ ಶಾಸನಗಳ ಸಂರಕ್ಷಣೆ ಕುರಿತ ವಿಚಾರ ಸಂಕಿರಣ



ಮೈಸೂರಿನ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ 'ವಿಶ್ವ ಪರಂಪರೆ ದಿನ'ವನ್ನು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತ ದೇವರಾಜು ಉದ್ಘಾಟಿಸಿದರು.

ಮೈಸೂರು, ಏ.18(ಎಂಟಿವೈ)– ಶಾಸನಗಳು ನಾಶವಾದರೆ ಇತಿಹಾಸ ನಾಶವಾದಂತೆ. ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕ ಶಾಸನ ಹಾಗೂ ಪ್ರಾಚ್ಯ ವಸ್ತುಗಳ ಸಂರಕ್ಷಣೆ ಮಾಡಬೇಕು ಎಂದು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತ ದೇವರಾಜು. ಎ. ಮನವಿ ಮಾಡಿದ್ದಾರೆ.

ಮೈಸೂರಿನ ದಸರಾ ವಸ್ತು ಪ್ರದರ್ಶನ ಆವರಣದಲ್ಲಿರುವ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ 'ವಿಶ್ವ ಪರಂಪರೆ ದಿನ' ಹಾಗೂ ಶಿಲಾ ಶಾಸನಗಳ ಸಂರಕ್ಷಣೆ ಕುರಿತ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ವರ್ಷಗಳಲ್ಲಿ ಪ್ರಪಂಚದಾದ್ಯಂತ ಪಾರಂಪರಿಕ ಸ್ಥಳ, ಸ್ಮಾರಕ ಸಂರಕ್ಷಣೆ ಮಾಡುವ ಕಾರ್ಯ ನಡೆಸಲಾಗುತ್ತಿದೆ. ಶಾಸನಗಳ ಆಧಾರದ ಮೇಲೆ ಪಠ್ಯಕ್ರಮಗಳು ಹಾಗೂ ಪುಸ್ತಕ ರಚನೆಯಾಗುತ್ತಿದೆ. ಶಾಸನಗಳಿಂದ ಇತಿಹಾಸ ತಿಳಿಯಬಹುದಾಗಿದೆ. ಹೊಸ ಹೊಸ ಶಾಸನಗಳು ಹೊಸ ವಿಚಾರಗಳನ್ನು ತಿಳಿಸುತ್ತವೆ. ಈ ಹಿನ್ನೆಲೆಯಲ್ಲಿ ಶಾಸನಗಳು ಹಾಗೂ ಪ್ರಾಚ್ಯ ವಸ್ತುಗಳ ಪ್ರಾಮುಖ್ಯತೆ ಹೊಂದಿದ್ದು, ಅವುಗಳ ಸಂರಕ್ಷಣೆಗೆ ಪುರಾತತ್ವ ಇಲಾಖೆಗೆ ಸಾರ್ವಜನಿಕರು ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ರಾಜ್ಯದಲ್ಲಿ 844 ಸಂರಕ್ಷಿತ ಸ್ಮಾರಕಗಳಿವೆ. ದೇಶದಲ್ಲಿಯೇ ಹೆಚ್ಚು ಸ್ಮಾರಕ ಸಂರಕ್ಷಣೆ ಮಾಡಿದ ರಾಜ್ಯಗಳಲ್ಲಿ ಕರ್ನಾಟಕ ಎರಡನೇ ಸ್ಥಾನ ಹೊಂದಿದೆ. ಇದೀಗ ಶಾಸನಗಳನ್ನು ತ್ರಿಡಿ ತಂತ್ರಜ್ಞಾನದಲ್ಲಿ ಸ್ಕ್ಯಾನ್ ಮಾಡಿ ಸಂರಕ್ಷಣೆ ಮಾಡುವ ಹಾಗೂ ಡಿಜಿಟಲೀಕರಣ ಮಾಡುವ ಕಾರ್ಯದಲ್ಲಿ ತೊಡಗಿದ್ದು, ಇದುವರೆಗೂ 530 ಶಾಸನಗಳನ್ನು ಸ್ಕ್ಯಾನ್ ಮಾಡಿ ಸಂರಕ್ಷಿಸಲಾಗಿದೆ. ರಾಜ್ಯದಲ್ಲಿ 16 ವಸ್ತು ಸಂಗ್ರಹಾಲಯಗಳಿದ್ದು, ಅವುಗಳ ವೆಬ್‌ಸೈಟ್‌ನಲ್ಲಿ ಒಂದು ವೇಳೆ ಶಾಸನಗಳು ನಾಶವಾದರೂ ಅವುಗಳಲ್ಲಿನ ಮಾಹಿತಿ ಸಂರಕ್ಷಿಸುವ ನಿಟ್ಟಿನಲ್ಲಿ ಡಿಜಿಟಲೀಕರಣ ಕಾರ್ಯ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ತಿಳಿಸಿದರು.

ಕಳೆದ ವರ್ಷ ವಿಶ್ವಸಂಸ್ಥೆ ಕರ್ನಾಟಕದ ಬೇಲೂರು, ಹಳೇಬೀಡು ಹಾಗೂ ಮೈಸೂರು ಜಿಲ್ಲೆಯ ಸೋಮನಾಥಪುರ ವರ್ಲ್ಡ್ ಹೆರಿಟೇಜ್ ಸೈಟ್ಸ್ ಆಗಿ ಘೋಷಿಸಿದೆ. ಈ ಮೂರು ಸ್ಥಳ ವಿಶ್ವ ಪ್ರವಾಸೋದ್ಯಮದಲ್ಲಿ ಗುರುತಿಸಿಕೊಂಡಿವೆ. ವಿಶ್ವದಲ್ಲಿ 1199 ಹೆರಿಟೇಜ್ ಸೈಟ್ಸ್‌ಗಳಿವೆ. 52 ಭಾರತದಲ್ಲಿರುವ 52ರಲ್ಲಿ 4 ಕರ್ನಾಟಕದಲ್ಲಿವೆ. ವಿಶ್ವ ಪಾರಂಪರಿಕ ಸ್ಥಳಗಳು ಹೆಚ್ಚಾಗಿ ಗುರುತಿಸಿಕೊಳ್ಳುತ್ತಿದ್ದಂತೆ ಪ್ರವಾಸಿಗರ ಆಗಮನದ ಸಂಖ್ಯೆಯೂ ಹೆಚ್ಚಾಗುತ್ತದೆ, ಉದ್ಯೋಗಾವಕಾಶ ಹೆಚ್ಚಾಗುತ್ತದೆ. ಇದರಿಂದ ಪ್ರವಾಸೋದ್ಯಮ ಅಭಿವೃದ್ಧಿಯಾಗುತ್ತದೆ. ಪ್ರವಾಸೋದ್ಯಮವನ್ನೇ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಅವಲಂಬಿಸಿರುವವರ ಆರ್ಥಿಕ ಸ್ಥಿತಿ ಸುಧಾರಿಸುತ್ತದೆ ಎಂದು ಹೇಳಿದರು.

ಶಾಸನ ಮತ್ತು ಪ್ರಾಚ್ಯ ವಸ್ತುಗಳ ಸಂರಕ್ಷಣೆಗಾಗಿ ದತ್ತು ಸ್ವೀಕಾರ ಯೋಜನೆಯನ್ನೂ ಜಾರಿಗೊಳಿಸಲಾಗಿದ್ದು, ಕಾರ್ಪೊರೇಟ್ ಸಂಸ್ಥೆಗಳಿಂದ ಸಿಎಸ್‌ಆರ್ ಫಂಡ್ ಬಳಸಿ ಶಾಸನ, ಪ್ರಾಚ್ಯ ವಸ್ತುಗಳ ಸಂರಕ್ಷಿಸುವ ಕಾರ್ಯಕ್ರಮಕ್ಕೂ ಇಲಾಖೆ ಮುಂದಾಗಿದೆ ಎಂದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಮುಖ್ಯಸ್ಥ ಡಾ.ಶೆಲ್ವಪಿಳ್ಳೆ ಅಯ್ಯಂಗಾರ್ ಮಾತನಾಡಿ, ನಮ್ಮ ಪೂರ್ವಿಕರು ಬಿಟ್ಟು ಹೋಗಿರುವ ವಸ್ತುಗಳೇ ಪ್ರಾಚ್ಯ ವಸ್ತುಗಳಾಗಿವೆ. ಅವುಗಳ ಸಂರಕ್ಷಣೆ ಎಲ್ಲರ ಹೊಣೆಯೂ ಆಗಿದೆ. ಎಲ್ಲರೂ ತಮ್ಮ ಹಕ್ಕಿನ ಬಗ್ಗೆ ಮಾತನಾಡುತ್ತೇವೆ. ಅದರೊಂದಿಗೆ ಕರ್ತವ್ಯದ ಬಗ್ಗೆಯೂ ಗಮನಕೊಡಬೇಕು. ಪಾರಂಪರಿಕ ಸ್ಥಳ, ಶಾಸನ, ಸ್ಮಾರಕಗಳ ರಕ್ಷಣೆ ಮಾಡಬೇಕು ಎಂದರು.


ಇದೇ ವೇಳೆ ಶಿಲಾ ಶಾಸನಗಳನ್ನು 3ಡಿ ಸ್ಕ್ಯಾನಿಂಗ್ ಮಾಡುವ ಮಹತ್ವದ ಬಗ್ಗೆ ಬೆಂಗಳೂರಿನ ಮಿಥಿಕ್ ಸೊಸೈಟಿ ಸಂಸ್ಥೆಯ ಉದಯ್‌ಕುಮಾರ್ ತ್ರಿಡಿ ಸ್ಕ್ಯಾನಿಂಗ್ ಪ್ರಾತ್ಯಕ್ಷಿಕೆ ಮೂಲಕ ಮಾತನಾಡಿ, ಶಾಸನಗಳು ಊರಿನ ಇತಿಹಾಸ ಹೇಳುತ್ತವೆ. ಆದರೆ, ಜನರಿಗೆ ಶಾಸನಗಳ ಬಗ್ಗೆ ಜ್ಞಾನವಿರದ ಕಾರಣ, ಅವುಗಳು ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಕನ್ನಡದ ಪ್ರಥಮ ಶಾಸನ ಹಲ್ಮಿಡಿ ಶಾಸನಕ್ಕೆ ಹಸು ಕಟ್ಟಲಾಗುತ್ತಿತ್ತು ಇದರಿಂದ ಜಾನು ವಾರುಗಳು ಮೈ ಉಜ್ಜಿರುವುದರಿಂದ ಹಲ್ಮಿಡಿ ಶಾಸನ ಸವೆದು ಹೋಗಿದೆ ಎಂದು ವಿಷಾದಿಸಿದರು.

ಈ ಸಂದರ್ಭದಲ್ಲಿ ಪುರಾತತ್ವ ಸಂರಕ್ಷಣಾ ಇಂಜಿನಿಯರ್ ಪುಟ್ಟಸ್ವಾಮಿ, ಸಿದ್ಧಾರ್ಥನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.




ಮೈಸೂರಿನ ಅಗ್ರಹಾರ ತ್ಯಾಗರಾಜ ರಸ್ತೆಯಲ್ಲಿರುವ ಶ್ರೀ ಚಿಕ್ಕಾಂಜನೇಯ ಸ್ವಾಮಿ ದೇವಾಲಯದಲ್ಲಿ ಬುಧವಾರ ಶ್ರೀ ರಾಮನವಮಿ ಪ್ರಯುಕ್ತ ವಿಶೇಷ ಪೂಜೆ ಸಲ್ಲಿಸಿ, ದೇವಸ್ಥಾನದ ಸಮಿತಿ ವತಿಯಿಂದ ಸಾರ್ವಜನಿಕರಿಗೆ ಪಾನಕ–ಮಜ್ಜಿಗೆ ವಿತರಿಸಲಾಯಿತು.

## ಅತ್ಯುನ್ನತ ಶ್ರೇಣಿ



ಮೈಸೂರು, ಏ.18– ಮೈಸೂರಿನ ಪ್ರಮತಿ ಪಿಯು ಕಾಲೇಜು ವಿದ್ಯಾರ್ಥಿ ಎನ್.ವಿ.ಚಿರಂತ್, ದ್ವಿತೀಯ ಪಿಯು ಪರೀಕ್ಷೆ(ವಿಜ್ಞಾನ ವಿಭಾಗ)ಯಲ್ಲಿ 600ಕ್ಕೆ 549(ಶೇ.91.5) ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಈತ ಬಿ.ಎಂ.ಶ್ರೀನಗರದ ವಿಜಯಕುಮಾರ್ ಹಾಗೂ ಜಯಮ್ಮ ದಂಪತಿ ಪುತ್ರ

## ನಕ್ಕರೆ ಅದೇ ಸ್ವರ್ಗ

ಅವರು : "ಈ ಓಟದ ಅಭ್ಯಾಸ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವುದಕ್ಕೇನು?"
ಇವರು : "ಅದಕ್ಕಲ್ಲಾ ಈ ಅಭ್ಯಾಸ, ದಿನಾ ಸಿಟಿ ಬಸ್ ಹಿಡೀಬೇಕಲ್ಲಾ...!"


ಮೈಸೂರು ಮಿತ್ರ

ಶುಕ್ರವಾರ, 19 ಏಪ್ರಿಲ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*


**ಅಮೃತವಾಹಿನಿ.........**

ಪ್ರಪಂಚದಲ್ಲಿ ಬಲಶಾಲಿಗಳಾಗಿರುವುದು ಮಹತ್ವದ ವಿಷಯವಲ್ಲ.
ಆ ಬಲವನ್ನು ಸದುಪಯೋಗವಾಗಿ ಬಳಸುವುದು ಮಹತ್ವ. –ಬೀಚರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಾಳೋರ್‌ಗೆ ಒಂದು ಮಾತು, ಬಾಳೆಗೊಂದ್ ಗೊನೆ

## ನಿಮ್ಮ ಪತ್ರಗಳು

### ■ ಆಧುನಿಕ ತಂತ್ರಜ್ಞಾನಗಳ ಯುಗದಲ್ಲಿ ಮಾಹಿತಿ ಬಚ್ಚಿಡುವ ಪ್ರಯತ್ನಗಳು ನಿರರ್ಥಕ

ಮಾನ್ಯರೆ,

ಚುನಾವಣಾ ಸಂದರ್ಭದಲ್ಲಿ ಪಕ್ಷದ ಮಹಾ ನಾಯಕರು ಬಂದಾಗ ಜನಸಮೂಹ ಸೇರುವುದು, ತಮ್ಮ ನಾಯಕರನ್ನು ನೋಡಿ, ಅವರ ಭಾಷಣ ಕೇಳಿ ಮತದಾರ ಪುಳಕಗೊಳ್ಳುವುದು. ಅದನ್ನು ಆದಷ್ಟು ಹೆಚ್ಚು ಜನ ನೋಡಿ ತಮ್ಮ ಪಕ್ಷದೆಡೆಗೆ ಒಲವು ತೋರಲಿ ಎಂದು ಪಕ್ಷಗಳು ಸೌಲಭ್ಯವಿರುವ ಎಲ್ಲಾ ವಿಧಾನಗಳನ್ನೂ ಪಕ್ಷಗಳು ಬಳಸಿಕೊಳ್ಳುವುದೂ ಸರ್ವೇ ಸಾಮಾನ್ಯ. ಆದರೆ ಇದಕ್ಕೆ ವಿಲೋಮವಾಗಿ ಆಡಳಿತಾರೂಢ ಪಕ್ಷ ತನ್ನ ವಿರೋಧಿಗಳನ್ನು ಹಣಿಯಲು ತನ್ನ ಅಧಿಕಾರ ದುರುಪಯೋಗಪಡಿಸಿಕೊಳ್ಳುವ ಸಂದರ್ಭಗಳೂ ನಡೆದಿರುತ್ತವೆ.

ಚುನಾವಣಾ ಆಯೋಗದ ಉಸ್ತುವಾರಿಯಲ್ಲಿ ಆಚಾರ ಸಂಹಿತೆ ಅಡಿಯಲ್ಲಿ ಇಂತಹ ಕ್ರಮಗಳನ್ನು ನಿಯಂತ್ರಣಕ್ಕೊಳಪಡಿಸಿದ್ದರೂ ಚಾಪೆ ಕೆಳಗೆ ನುಸುಳುವ ಮೂಲಕ ಕೆಲವು ರಾಜ್ಯ ಸರ್ಕಾರಗಳು ತಮ್ಮ ದುರುದ್ದೇಶಗಳನ್ನು ಜಾರಿಗೊಳಿಸುವ ಕ್ರಮಗಳು ನಮ್ಮ ಕಣ್ಣ ಮುಂದೆ ಇವೆ. ಇತ್ತೀಚೆಗೆ ಬಂಗಾಲದಲ್ಲಿ ಅಲ್ಲಿನ ಸರ್ಕಾರ ಇಂತಹ ಉಪಕ್ರಮಗಳಿಂದ ನ್ಯಾಯಾಲಯದಿಂದ ಛೀಮಾರಿ ಹಾಕಿಸಿಕೊಂಡಿದ್ದನ್ನೂ ನೋಡಿದ್ದೇವೆ. ನಿನ್ನೆ ಮೈಸೂರಿನಲ್ಲಿ ಪ್ರಧಾನ ಮಂತ್ರಿಗಳ ಕಾರ್ಯಕ್ರಮ ನಡೆದಾಗ ಆ ಸಮಯದಲ್ಲಷ್ಟೇ ನಗರದಲ್ಲಿ ಪವರ್ ಕಟ್ ಆಗಿದ್ದೂ ಇಂತಹ ದುರುದ್ದೇಶದಿಂದ ಕೂಡಿತ್ತು ಎಂಬ ಅನುಮಾನ ಮೂಡದೇ ಇರದು. ಇಂದಿನ ಆಧುನಿಕ ತಂತ್ರಜ್ಞಾನಗಳ ಯುಗದಲ್ಲಿ ಮಾಹಿತಿಗಳನ್ನು ಹೀಗೆ ಬಚ್ಚಿಡುವ ಪ್ರಯತ್ನಗಳು ನಿರರ್ಥಕ ಎನಿಸಿದರೂ ತಮ್ಮ ಯಶಸ್ಸಿನ ಬಗ್ಗೆ ಹತಾಶಗೊಂಡಿರುವವರಷ್ಟೇ ಇಂತಹ ದುಸ್ಸಾಹಸಕ್ಕೆ ಕೈಹಾಕಿರಬಹುದು ಎಂಬುದು ಸ್ಪಷ್ಟವಾಗುತ್ತದೆ. ವಿಕಟ ಸಂತೋಷಿಗಳು ಮಾತ್ರ ಇಂತಹ ಕ್ರಮಗಳಿಂದ ಕ್ಷಣಿಕ ಸಮಾಧಾನ ಹೊಂದಬಹುದು.

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

### ■ ಚುನಾವಣಾ ವಸ್ತುವಾದ ಸಂವಿಧಾನ

ಮಾನ್ಯರೆ,

ಸಂಸದ ಅನಂತ್ ಕುಮಾರ್ ಹೆಗಡೆ ಹೇಳಿದ ಬೇಜವಾಬ್ದಾರಿ ಹೇಳಿಕೆಯನ್ನೆ ಆಧಾರವಾಗಿಸಿಕೊಂಡು ಕಾಂಗ್ರೆಸ್ ಸಂವಿಧಾನ ಬದಲಾವಣೆ ಮಾಡಲು ಬಿಜೆಪಿ ಹುನ್ನಾರ ಮಾಡುತ್ತಿದೆ ಎಂದು ದಿನ ನಿತ್ಯ ಹೇಳುತ್ತಲೇ ಇದೆ. ನಿತ್ಯವೂ ಮಾಧ್ಯಮದಲ್ಲಿ ಇದೇ ಸುದ್ದಿ. ಸಂವಿಧಾನ ಬದಲಾಯಿಸಲು ಸಾಧ್ಯವೇ? ಎಂದು ಯೋಚಿಸಿದರೆ ಉತ್ತರ ಯಾರ ಆಲೋಚನೆಗೂ ನಿಲುಕುವುದಿಲ್ಲ. ಪ್ರಪಂಚದಲ್ಲೇ ಭಾರತದ ಸಂವಿಧಾನ ಅಷ್ಟು ಶ್ರೇಷ್ಠತೆಯನ್ನು ಹೊಂದಿದೆ. ಅದಕ್ಕೆ ಪ್ರಧಾನಿ ನರೇಂದ್ರ ಮೋದಿ ಸಂವಿಧಾನ ದೇಶದ ಪರಮೋಚ್ಚ ಗ್ರಂಥ, ಅಂಬೇಡ್ಕರ್ ಮತ್ತೆ ಹುಟ್ಟಿ ಬಂದರು ಸಂವಿಧಾನ ಬದಲಾವಣೆ ಸಾಧ್ಯವಿಲ್ಲ ಎಂದಿದ್ದಾರೆ. ಇದೇ ವಿಚಾರಕ್ಕೆ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಪ್ರತಿಕ್ರಿಯಿಸಿ ಸಂವಿಧಾನ ಬದಲಾಯಿಸೋಕೆ ಅದು ಮಗ್ಗಿ ಪುಸ್ತಕವಲ್ಲ ಎಂದಿದ್ದಾರೆ. ಹಾಗೆ ಯೋಚಿಸಿದರೆ ಮಗ್ಗಿ ಪುಸ್ತಕಗಳನ್ನು ಬದಲಾಯಿಸಲು ಸಾಧ್ಯವಿಲ್ಲ. ಇಷ್ಟಿದ್ದರೂ ಅದೇ ಪದ ಪ್ರಯೋಗ ಮಾಡುತ್ತಿರುವುದು ಚುನಾವಣಾ ತಂತ್ರಗಾರಿಕೆಯೇ ಹೊರತು ಬೇರೆನಿಲ್ಲ. ಸಂವಿಧಾನ ಜಾಗೃತಿ ಜಾಥಾ ಉತ್ತಮ ಕಾರ್ಯವಾಗಿದ್ದರಲ್ಲಿ ಸಂಶಯವಿಲ್ಲ. ಇದು ಕಾಂಗ್ರೆಸ್ ಅಜೆಂಡವಾದರೆ, ಸೀಮಿತ ಧರ್ಮ, ಜಾತಿ, ದೇಶಭಕ್ತಿ ಹೆಸರಲ್ಲಿ ಬಿಜೆಪಿ ಪ್ರಚಾರಕ್ಕೆ ಇಳಿದಿದೆ. ಇದು ವಿಷಾದನೀಯ. ಎರಡು ರಾಷ್ಟ್ರೀಯ ಪಕ್ಷಗಳಾಗಿ ಅಭಿವೃದ್ಧಿ ಮುಂದಿಟ್ಟುಕೊಂಡು ರಾಜಕಾರಣ ಮಾಡಬೇಕೆ ಹೊರತು ಭಾವನಾತ್ಮಕ ವಿಷಯಗಳ ಮೇಲಲ್ಲ. ಮತದಾರರು ದಯಮಾಡಿ ಇದಕ್ಕೆ ಕಿವಿಗೊಡಬೇಡಿ. ನಿಮಗೆ ಸರಿ ಎನಿಸಿದ ಉತ್ತಮ ವ್ಯಕ್ತಿಯ ಆಯ್ಕೆಗೆ ಮುಂದಾಗಬೇಕು.

– ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.

### ■ ಬದುಕಿನ ಹಾದಿಯಲ್ಲಿ ಸೋಲು–ಗೆಲುವಿನ ಸ್ವಾದ

ಮಾನ್ಯರೆ,

ಬರೀಯ ಸಿಹಿಯ ರುಚಿಯ ಕಂಡ ನಾಲಿಗೆಗೆ ತುಸು ಖಾರದ ರುಚಿ ಒಳ್ಳೆಯ ಸ್ವಾದಿಷ್ಟ ನೀಡುತ್ತದೆ. ಹಾಗೆಯೇ, ಬದುಕಿನಲ್ಲಿ ಅಂದುಕೊಂಡಂತೆ ಮೊದಲ ಪ್ರಯತ್ನದಲ್ಲೇ ಎಲ್ಲವೂ ಆಗಿ ಬಿಟ್ಟರೆ, ಸಿಕ್ಕ ಗೆಲುವಿನ ಸಂಭ್ರಮವೂ ಅಷ್ಟು ಖುಷಿ ಕೊಡದು. ಹೌದು ನಾವೊಮ್ಮೆ ಸೋಲಬೇಕು. ಹಾಗಂತ ಪ್ರಯತ್ನಿಸದೇ ಸೋಲುವುದಲ್ಲ. ನೂರಕ್ಕೆ ನೂರರಷ್ಟು ಪ್ರಯತ್ನ ಪಡಬೇಕು. ಅದನ್ನು ಮೀರಿ ಸೋತರೆ, ಸೋಲನ್ನು ಒಪ್ಪಿಕೊಳ್ಳುವ ಮನೋಭಾವ ಇರಬೇಕು.

ಗೆದ್ದಾಗ ಎಲ್ಲರೂ ಸುತ್ತುವರೆದು ಬರೀಗೈಯಲ್ಲಿ ಬೆನ್ನು ತಟ್ಟಿ ನೀನು ನಮ್ಮವನೆಂಬ ಗುರುತಿನ ಅಚ್ಚೆ ಒತ್ತುತ್ತಾರೆ. ಹೊಗಳಿಕೆಗಳ ಸಾಲುಗಳು, ಗೌರವ ಎಲ್ಲವೂ ಸಿಗುತ್ತಿರುತ್ತದೆ. ಗೆಲುವು ಜಗತ್ತಿಗೆ ನಮ್ಮನ್ನು ಪರಿಚಯಿಸುವಂತೆ ಮಾಡುತ್ತೆ. ಆದರೆ, ಸೋಲು ಜಗತ್ತನ್ನು ನಮಗೆ ಪರಿಚಯಿಸುತ್ತದೆ. ಸೋಲಿನಲ್ಲಿ ನಮ್ಮವರು ಯಾರು ಎಂಬುದನ್ನು ತಿಳಿಸುತ್ತದೆ. ಮುಖವಾಡ ಧರಿಸಿ ಹೆಸರಿಗೆ ಮಾತ್ರ ಜೊತೆಗಿದ್ದು, ಸೋತಾಗ ದೂರ ಸರಿದವರ ಸಹವಾಸವೂ ಕೂಡ ಬದುಕಿಗೆ ಅವಶ್ಯಕವಲ್ಲ ಎಂಬುದನ್ನು ತಿಳಿಸುತ್ತದೆ. ಸೋಲಿನ ಸುಳಿಯಲ್ಲಿ ನಿಂತಾಗ ನಿಮ್ಮ ಸುತ್ತಮುತ್ತಲಿನವರು ನಿಮ್ಮನ್ನು ನಡೆಸಿಕೊಳ್ಳುವ ರೀತಿ ನಿಮ್ಮ ಕಡೆಗಿನ ಅವರ ನಿಜವಾದ ಸ್ವರೂಪ ತಿಳಿಯುತ್ತದೆ. ಸೋತೆವೆಂದ ಮಾತ್ರಕ್ಕೆ ಕಂಗೆಟ್ಟು ಕೂರಬಾರದು. ನಮ್ಮ ಹೋರಾಟ ನಮ್ಮ ನಿನ್ನೆಯ ಸೋಲಿನೊಂದಿಗೆ ಆಗುತ್ತಿರಬೇಕು.

ನಮ್ಮ ಅಪ್ಪ ಅಮ್ಮ ಒಂದೊತ್ತು ಕೂಡ ನಮ್ಮನ್ನು ಹಸಿವಿನಲ್ಲಿರಿಸಿಲ್ಲ. ನಮ್ಮ ಎಲ್ಲಾ ಬೇಕು ಬೇಡಗಳನ್ನು ನೀಡಿರುತ್ತಾರೆ. ದುಡಿದಷ್ಟರಲ್ಲೇ ಎಲ್ಲವನ್ನೂ ಸರಿದೂಗಿಸಿರುತ್ತಾರೆ. ಕಷ್ಟವೆಂದು ಕೈಚಲ್ಲಿ ಕುಳಿತ್ತಿದ್ದರೆ ನಾವಿಂದು ಇರುವುದೇ ಅನುಮಾನವಿತ್ತು. ಪೈಸೆ ಲೆಕ್ಕದಲ್ಲಿ ಕೂಡಿಸಿ ವಿದ್ಯೆ ನೀಡಿದ್ದಾರೆ. ಒಮ್ಮೆ ನಮ್ಮ ಅಪ್ಪ ಅಮ್ಮ ನಮ್ಮನ್ನು ಸಾಕಿ ಸಲುಹಲು ಪಟ್ಟ ಕಷ್ಟ ಅರಿವಿಗೆ ಬಾರದಿದ್ದರೆ ತುಸು ಬಿಡುವಾಗಿ ಕುಳಿತು ಕೇಳೋಣ. ನಮ್ಮ ಅಪ್ಪ ಅಮ್ಮ ಪಟ್ಟ ಕಷ್ಟಗಳ ನಡುವೆ ನಮ್ಮ ಕಷ್ಟಗಳು ಏನೇನು ಅಲ್ಲ ಅಲ್ಲವೇ?

– ಮಂಜೇಶ್ ದೇವಗಳ್ಳಿ, ಮೈಸೂರು

### ■ ಬ್ಯಾಲೆಟ್ ಪೇಪರ್ ವ್ಯವಸ್ಥೆ ಜಾರಿಗೆ ಸಲ್ಲಿಸಿದ್ದ ಅರ್ಜಿ ವಜಾ, ಸ್ವಾಗತಾರ್ಹ

ಮಾನ್ಯರೆ,

ಮತದಾನ ಮಾಡಲು ಎಲೆಕ್ಟ್ರಾನಿಕ್ ವೋಟಿಂಗ್ ಮೆಶೀನನ್ನು ರದ್ದುಪಡಿಸಿ (ಇವಿಎಂ), ಹಿಂದಿನ ಬ್ಯಾಲೇಟ್ ಪೇಪರ್ ವ್ಯವಸ್ಥೆಯನ್ನು ಜಾರಿ ಮಾಡುವಂತೆ ಕೋರಿ ಅರ್ಜಿದಾರರೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಮೊನ್ನೆ ವಜಾ ಮಾಡಿರುವುದು ಸ್ವಾಗತಾರ್ಹ ಕ್ರಮ. ಹಿಂದಿನ ಬ್ಯಾಲೇಟ್ ಪೇಪರ್ ವ್ಯವಸ್ಥೆಯಲ್ಲಿನ ಕಹಿ ಘಟನೆಗಳನ್ನು ಸುಪ್ರೀಂಕೋರ್ಟ್ ಅರ್ಜಿದಾರರಿಗೆ ಮಾಹಿತಿ ನೀಡಿರುವುದಲ್ಲದೇ ಇವಿಎಂ ಪಾರದರ್ಶಕತೆಯನ್ನು ಕಾಪಾಡಿಕೊಳ್ಳಲು ಸಾಧ್ಯ ಎಂದು ಹೇಳಿದೆ. ಮತ ಎಣಿಕೆ ಕಾರ್ಯ ಸುಗಮವಾಗಿ ಮತ್ತು ಸಾಕಷ್ಟು ಸಮಯ ಉಳಿತಾಯ ಮಾಡಿದಂತಾಗುತ್ತದೆ. ಮಾನವ ಶಕ್ತಿಯನ್ನು ಸಹ ಕಡಿಮೆ ಮಾಡಬಹುದು. ಇದರಿಂದಾಗಿ ಸಮಯ ಮತ್ತು ಹಣ ಎರಡು ಉಳಿತಾಯ ಮಾಡಿದಂತಾಗುತ್ತದೆ ಎಂದು ಹೇಳಿದೆ. ಸುಮಾರು 20 ವರ್ಷಗಳಿಂದ, ಇವಿಎಂ ವ್ಯವಸ್ಥೆಯನ್ನು ಜಾರಿ ಮಾಡಿದೆ ಇದನ್ನು ಮತದಾರರು ಒಪ್ಪಿಕೊಂಡಿದ್ದಾರೆ. ಆದರೆ ಅರ್ಜಿದಾರರಿಗೆ ಈಗೇಕೆ ಅನುಮಾನ ಬಂತು ತಿಳಿಯದು? –ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು




ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000


ಚಿಂತನೆ

# ಈಗಂತೂ ಒತ್ತುವರಿಯದ್ದೇ 'ವರಿ'

ಇತ್ತೀಚೆಗೆ ಮೈಸೂರಿಗೆ ಬಂದಿರುವ ಮಹಾನಗರಪಾಲಿಕೆಯ ಆಯುಕ್ತರು ಆದ್ಯತೆಯ ಮೇರೆಗೆ ದೇವರಾಜ ಮಾರುಕಟ್ಟೆ ಹಾಗೂ ಸುತ್ತಲಿನ ಪ್ರದೇಶಗಳ ಒತ್ತುವರಿಯನ್ನು ತೆರವುಗೊಳಿಸಿದ ಸುದ್ದಿ ಕೇಳಿ ಬಹಳ ಜನ ಸಂತಸ ವ್ಯಕ್ತಪಡಿಸಿದರು. ಅಲ್ಲದೆ ಇದು ಚುನಾವಣಾ ಸಮಯವಾದ್ದರಿಂದ ಅದನ್ನು ವಿರೋಧಿಸುವ ನಾಯಕರು ಚುನಾವಣೆಯಲ್ಲಿ 'ಬ್ಯುಸಿ'ಯಾಗಿರುವುದರಿಂದ ಅದನ್ನು ಯಾರೂ ತಡೆಯಲಿಲ್ಲ. ಬಹಳಷ್ಟು ಜನರು ಈ ಕೆಲಸವನ್ನು ಮೆಚ್ಚಿಕೊಂಡರು. ಅಲ್ಲದೆ ಹೀಗೆ ಒತ್ತುವರಿ ಆಗಿರುವ ಜಾಗಗಳ ತೆರವುಗೊಳಿಸಿದರೆ ಉತ್ತಮ ಎಂಬ ಉಚಿತ ಸಲಹೆಯನ್ನೂ ನೀಡಿದರು. ಇದಾದ ನಂತರ ಒಮ್ಮೆ ಮಾರುಕಟ್ಟೆಗೆ ಹೋಗಿ ನೋಡಿದರೆ ಯಥಾಸ್ಥಿತಿ. ಅಂಗಡಿಗಳೆಲ್ಲಾ ಫುಟ್‌ಪಾತಿನಲ್ಲೇ ವಿಜೃಂಭಿಸುತ್ತಿವೆ. ಬಹುಶಃ ಹಬ್ಬದ ಕಾರಣವಿರಬಹುದು. ನಂತರ ಸರಿಯಾಗಬಹುದು ಎಂಬ ನಿರೀಕ್ಷೆ ಹುಸಿಯಾಗಿದೆ.

ಕುತೂಹಲಕ್ಕಾಗಿ ಒಬ್ಬ ಅಂಗಡಿಯವರನ್ನು ಮಾತನಾಡಿಸಿ, ಅದೇಕೆ ಅಂಗಡಿಯೊಳಗೆ ಅಷ್ಟು ಜಾಗವಿದ್ದರೂ ಹೀಗೆ ಪಾದಚಾರಿಗಳು ಓಡಾಡುವ ಜಾಗದಲ್ಲಿ ಸಾಮಾನು ಜೋಡಿಸಿಕೊಂಡು ವ್ಯಾಪಾರ ಮಾಡುತ್ತೀರಿ? ಎಂದಾಗ ಅವರು ಇತರೆ ಅಂಗಡಿಗಳತ್ತ ಕೈದೋರಿದರು. ನಾನೊಬ್ಬ ಅಂಗಡಿಯೊಳಗೆ ಪದಾರ್ಥಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತೇನೆ ಎಂದಿಟ್ಟುಕೊಳ್ಳಿ, ಅಕ್ಕಪಕ್ಕದವರು ಫುಟ್‌ಪಾತಿನಲ್ಲಿ ಸಾಮಾನು ಜೋಡಿಸಿ ವ್ಯಾಪಾರ ಮಾಡುತ್ತಿದ್ದರೆ, ಜನರಿಗೆ ನನ್ನ ಅಂಗಡಿಯೇ ಕಾಣುವುದಿಲ್ಲ. ಹಾಗಾದಾಗ ನನ್ನ ಅಂಗಡಿಗೆ ವ್ಯಾಪಾರಕ್ಕಾಗಿ ಯಾರು ಬರುತ್ತಾರೆ ಹೇಳಿ?. ನಾನೂ ಅವರಂತೆಯೇ ಫುಟ್‌ಪಾತಿನಲ್ಲೆ ಅನಿವಾರ್ಯವಾಗಿ ವ್ಯಾಪಾರ ಮಾಡಬೇಕಾಗಿದೆ. ಎಲ್ಲರೂ ಅವರ ಅಂಗಡಿಗೆ ಸೀಮಿತವಾದರೆ ನಾನೂ ಹಾಗೇ ಮಾಡುತ್ತೇನೆ. ಇಲ್ಲದಿದ್ದರೆ ಇದು ಅನಿವಾರ್ಯ ಎಂದರು. ಒಮ್ಮೆ ಸುತ್ತಲೂ ಕಣ್ಣು ಹಾಯಿಸಿದಾಗ ಅವರ ಮಾತು ನಿಜವೆನಿಸಿತು. ಎಲ್ಲರೂ ಫುಟ್‌ಪಾತ್ ಆಕ್ರಮಣದಲ್ಲೇ ಇದ್ದವರು. ಅದೂ ಒಂದು ಬದಿಯಲ್ಲ, ಎರಡೂ ಬದಿಯಲ್ಲಿ. ವ್ಯಾಪಾರಕ್ಕಾಗಿ ಬರುವವನಿಗೆ ಓಡಾಡಲೇ ಸ್ಥಳವಿಲ್ಲ. ವ್ಯಾಪಾರ ಮಾಡುವವರು ಬಂದರೆ ತಾನೇ ವ್ಯಾಪಾರ? ಆದರೆ ಅವನಿಗೆ ಸಲೀಸಾಗಿ ಓಡಾಡಲೂ ಜಾಗವಿಲ್ಲ ಎಂದಾದಾಗ ವ್ಯಾಪಾರದ ಉದ್ದೇಶವೇ ಬದಿಗೆ ಸರಿದಿದೆ ಎನಿಸಿತು.

ಈ ಹಿಂದೆ ಮೈಸೂರಿನ ಹೃದಯ ಭಾಗದಲ್ಲಿ ವಾಹನಗಳ ನಿಲುಗಡೆಗೆ ಅವಕಾಶವಿತ್ತು. ಜನರು ತಮಗೆ ಬೇಕಾದ ಅಂಗಡಿಯ ಮುಂದೆ ತಮ್ಮ ವಾಹನ ನಿಲ್ಲಿಸಿ ಆ ಅಂಗಡಿಯಲ್ಲಿ ವ್ಯಾಪಾರ ಮಾಡಿಕೊಂಡು ಹೋಗುತ್ತಿದ್ದರು. ಹಾಗಾಗಿ ವ್ಯಾಪಾರ ಚೆನ್ನಾಗಿಯೇ ನಡೆಯುತ್ತಿತ್ತು. ಆದರೆ ಜನಸಂಖ್ಯೆ ಹಾಗೂ ವಾಹನ ಸಂಖ್ಯೆ ಜಾಸ್ತಿಯಾದ ಕಾರಣ ಅಲ್ಲಿ ಈಗ ವಾಹನ ನಿಲ್ಲಿಸಲು ಅವಕಾಶವಿಲ್ಲ. ಇದರಿಂದಾಗಿ ಆ ಅಂಗಡಿಗಳಿಗೆ ಬರುವ ಗ್ರಾಹಕರ ಸಂಖ್ಯೆ ಕಡಿಮೆಯಾಯಿತು. ಅಲ್ಲದೆ ಇಂದು ಬಹುತೇಕ ವಸ್ತುಗಳು ನಗರದ ಎಲ್ಲಾ ಬಡಾವಣೆಗಳಲ್ಲಿಯೇ ದೊರಕುವುದರಿಂದ 'ಸಿಟಿ'ಗೇ ಏಕೆ ಹೋಗಬೇಕು, ಹೋದರೂ ಅಲ್ಲಿ ವಾಹನ ನಿಲುಗಡೆ ಸಿಗುವುದಿಲ್ಲ. ಆದ್ದರಿಂದ ಸ್ವಲ್ಪ ಹಣ ವೆಚ್ಚವಾದರೂ ಇಲ್ಲೇ ಕೊಂಡುಕೊಳ್ಳೋಣ ಎಂದು ಬಹುತೇಕರು ನಗರದ ಹೃದಯ ಭಾಗಕ್ಕೆ ಬರುವುದಕ್ಕೆ ಇಷ್ಟಪಡುವುದಿಲ್ಲ. ಇದರಿಂದಾಗಿ ತೊಂದರೆಯಾದದ್ದು ಯಾರಿಗೇ? ಗ್ರಾಹಕರಿಲ್ಲದ ಮೇಲೆ ವ್ಯಾಪಾರ ಕಳೆಗಟ್ಟುವುದಾದರೂ ಹೇಗೆ? ಗ್ರಾಹಕನು ಸುಲಭವಾಗಿ ನಡೆದಾಡಲು ಅವಕಾಶವಿಲ್ಲದಿದ್ದಲ್ಲಿ ಜನರು ಅಲ್ಲಿಗೆ ಏಕೆ ಹೋಗಲು ಬಯಸುತ್ತಾರೆ? ಕ್ರಮೇಣ ಆ ಪ್ರದೇಶದಿಂದ ದೂರ ಸರಿಯುವುದಿಲ್ಲವೇ? ಇದನ್ನು ವ್ಯಾಪಾರಿಗಳು ಏಕೆ ಯೋಚಿಸುವುದಿಲ್ಲ ಎನಿಸಿತು.

ಈ ಒತ್ತುವರಿ ಕೇವಲ ಮಾರುಕಟ್ಟೆಯ ಸುತ್ತಮುತ್ತಲ ಸಮಸ್ಯೆ ಮಾತ್ರವಲ್ಲ. ಅದು ಬಹುತೇಕ ಎಲ್ಲ ಕಡೆಗೂ ಹಬ್ಬಿದೆ. ಅದು ವ್ಯಾಪಾರದ ವಲಯವನ್ನೂ ದಾಟಿ ಹೋಗಿದೆ. ಒತ್ತುವರಿಯ ಮುಖ್ಯ ಉದ್ದೇಶ ಹೆಚ್ಚು ಲಾಭ ಮಾಡಿಕೊಳ್ಳುವುದಕ್ಕಾಗಿದೆ. ಅದರಿಂದ ಯಾರಿಗೆ, ಎಷ್ಟರಮಟ್ಟಿಗೆ ತೊಂದರೆಯಾಗುತ್ತದೆ ಎಂಬುದಕ್ಕಿಂತ ನನಗೆ ಎಷ್ಟು ಲಾಭವಾಗುತ್ತದೆ ಎಂಬುದೇ ಯೋಚನಾ ಲಹರಿಯಾಗಿಬಿಟ್ಟಿದೆ. ಮುಂದೆ ಇದರ ಪರಿಣಾಮ ಅನುಭವಿಸಬೇಕಾಗುತ್ತದೆ ಎಂದು ತಿಳಿದಿದ್ದರೂ, ಆಗ ನೋಡಿಕೊಳ್ಳೋಣ ಎಂಬ ಆಲೋಚನೆ ಅವರದ್ದು.

ಹೊಸದಾಗಿ ರಚಿತವಾದ ಬಡಾವಣೆಗಳಲ್ಲಿ ಮನೆ ಕಟ್ಟುವವರೂ ಇಂತಹುದೇ ಒತ್ತುವರಿಗೆ ಧಾರಾಳವಾಗಿ ಇಳಿಯುತ್ತಾರೆ. ಅವರಿಗೆ ತಮ್ಮ ನಿವೇಶನ ಎಷ್ಟು ಅಳತೆಯದ್ದು ಎಂಬುದು ತಿಳಿದಿರುತ್ತದೆ. ಆದರೆ ಅವರು ಹೊಸದಾಗಿ ಮನೆ ಕಟ್ಟುತ್ತಿರುವುದರಿಂದ ಅಕ್ಕಪಕ್ಕದ ಜಾಗ ಖಾಲಿ ಇರುತ್ತದೆ. ಮುಂದೆ ನೋಡಿಕೊಳ್ಳೋಣ ಎಂದು ಒಂದೆರಡು ಅಡಿಗಳಷ್ಟು ಒತ್ತುವರಿ ಮಾಡಿಯೇ ಕಟ್ಟಡ ಕಟ್ಟುತ್ತಾರೆ. ಕೆಲವು ವರ್ಷಗಳವರೆಗೆ ಯಾವುದೇ ಸಮಸ್ಯೆ ಇರುವುದಿಲ್ಲ. ಆದರೆ ನಂತರ ಅಕ್ಕಪಕ್ಕದ ನಿವೇಶನದವರು ಮನೆ ಕಟ್ಟಲು ಬಂದಾಗ ಅಳತೆ ಮಾಡಿದಾಗ ಇವರು ಒತ್ತುವರಿ ಮಾಡಿ ಕಟ್ಟಡ ಕಟ್ಟಿರುವುದು ಗೊತ್ತಾಗುತ್ತದೆ. ಆಗ ಏನು ಮಾಡುವುದು? ಮೊದಲು ಕಟ್ಟಿದವರ 'ಬಾಯಿ'ಯ ಮೇಲೆ ಒತ್ತುವರಿ ತೀರ್ಮಾನವಾಗುತ್ತದೆ. ಇವರ ಬಾಯಿಗೆ ಹೆದರಿ ಅವರ ತಂಟೆಯೇ ಬೇಡ, ನಮಗೆ ಎಷ್ಟು ಜಾಗವಿದೆಯೋ ಅಷ್ಟರಲ್ಲಿಯೇ ಮನೆ ಕಟ್ಟೋಣ ಎಂದರೆ ಸಮಸ್ಯೆ ತಾತ್ಕಾಲಿಕವಾಗಿ ಶಮನವಾಗುತ್ತದೆ. ಆದರೆ ಮುಂದೆ ಈ ಅಕ್ಕಪಕ್ಕದವರ ಸಂಬಂಧ ಹೇಗಿರುತ್ತದೆ? ಪಕ್ಕದಲ್ಲೇ ಶತ್ರುವಿದ್ದರೆ ಯಾರಾದರೂ ನೆಮ್ಮದಿಯಾಗಿರಲು ಸಾಧ್ಯವೇ? ಮುಂದಿನ ದಿನಗಳು ಅವರ ನಡುವೆ ಸಂಬಂಧ ಹೇಗಿರಬಹುದು? ಹಿರಿಯರು ಸಹಿಸಿದರೂ ಮುಂದೆ ಯುವರಕ್ತ ಅದನ್ನು ಸಹಿಸುವುದೇ? ಈ ಕಾರಣದಿಂದಲೇ ಮುಂದೆ ಪ್ರಾಣಾಪಹರಣದವರೆಗೆ ದ್ವೇಷ ಮುಂದುವರೆಯಬಹುದು.

ಮೊದಲಿನಿಂದಲೂ ನಾವು ಅಕ್ಕಪಕ್ಕದವರೊಡನೆ ಉತ್ತಮ ಸಂಪರ್ಕ ಹೊಂದಿರಬೇಕೆಂದೇ ಹೇಳಿಕೊಂಡು ಬಂದಿದ್ದೇವೆ. ನೆರೆಯವರು ನಮಗೆ 'ಹೊರೆ' ಯಾಗಬಾರದು, ಬಂಧುಗಳಂತಿರಬೇಕು. ಅವರೊಡನೆ ಉತ್ತಮ ಸಂಬಂಧ ಹೊಂದಿರಬೇಕು. ಒಂದು ವೇಳೆ ನಾವು ನಾಲ್ಕಾರು ದಿನ ಮನೆಯಲ್ಲಿ ಇಲ್ಲದಿದ್ದರೂ ಪಕ್ಕದ ಮನೆಯವರು ನಮ್ಮ ಮನೆಯ ಕಡೆಗೆ ಗಮನ ಕೊಡುತ್ತಾರೆ. ಆದ್ದರಿಂದ ನಾವು ನೆಮ್ಮದಿಯಾಗಿ ಮನೆಬಿಟ್ಟು ಹೋಗಬಹುದು ಎಂದು ಅನೇಕರು ಹೇಳುವುದನ್ನು ಕೇಳುತ್ತೇವೆ. ಇದು ಪರಸ್ಪರ ಸಹಕಾರದ ಮನೋಭಾವ. ನೀವಿಲ್ಲದಿದ್ದರೂ ನಿಮ್ಮ ಮನೆಯ ಕಡೆ ನಾವು ಗಮನಹರಿಸುತ್ತೇವೆ, ಹಾಗೆ ನಾವಿಲ್ಲದಿದ್ದಾಗ ನೀವು ಗಮನಹರಿಸಬೇಕು ಎಂಬ ಅಲಿಖಿತ ಒಪ್ಪಂದ ಇದು. ಇಂದು ನಗರಗಳಲ್ಲಿ ಇದರ ಅವಶ್ಯಕತೆ ಹೆಚ್ಚಾಗಿ ಕಂಡುಬರುತ್ತದೆ. ಗ್ರಾಮಗಳಲ್ಲಿ ಸಾಮಾನ್ಯವಾಗಿ ಇಂತಹ ಸಮಸ್ಯೆ ಇರುವುದಿಲ್ಲ. ಅಲ್ಲಿ ಪರಸ್ಪರ ನಂಬಿಕೆಗಳು ಇರುತ್ತವೆ. ಸಮಸ್ಯೆ ನಗರ ಪ್ರದೇಶದಲ್ಲೇ ಜಾಸ್ತಿ, ಅದೂ ಈ ಒತ್ತುವರಿಯ ಕಾರಣದಿಂದ.

ಈ ಹಿಂದೆ ಕಂಡ ಒಂದೆರಡು ಘಟನೆ ನೆನಪಿಗೆ ಬರುತ್ತಿವೆ. ಇದು ಮನೆ ನಿರ್ಮಾಣದ ಸಮಯದಲ್ಲಿ ಕಂಡುಬಂದಂತಹುದು. ಎರಡೂ ಘಟನೆಯಲ್ಲಿ ಒಬ್ಬರು ಈಗಾಗಲೇ ಮನೆ ಕಟ್ಟಿ ವಾಸವಾಗಿದ್ದಾರೆ. ಕೆಲವು ವರ್ಷದ ನಂತರ ಪಕ್ಕದ ಜಾಗದಲ್ಲಿ ಮನೆ ಕಟ್ಟಲು ಮತ್ತೊಬ್ಬರು ಆರಂಭಿಸುತ್ತಾರೆ. ಹೀಗೆ ಮನೆ ಕಟ್ಟುವಾಗ ಸಹಜವಾಗಿ ಈಗಾಗಲೇ ನಿರ್ಮಿಸಿರುವ ಮನೆಯ ಕಡೆಗೆ ಧೂಳು, ಕಸ, ಸೀಮೆಂಟ್ ಇತ್ಯಾದಿಗಳು ಬೀಳುತ್ತವೆ. ಈಗಾಗಲೇ ವಾಸವಿರುವ ಮನೆಯವರು ಇದನ್ನು ವಿರೋಧಿಸುತ್ತಾರೆ. ನಿಮ್ಮ ಮನೆ ನಿರ್ಮಾಣ ಕಾರ್ಯ ನಮ್ಮ ನೆಮ್ಮದಿ ಹಾಳು ಮಾಡಿದೆ. ನಮಗೆ ನಿದ್ರೆ ಬರುತ್ತಿಲ್ಲ. ಅಲ್ಲದೆ ತ್ಯಾಜ್ಯವನ್ನು ನಮ್ಮ ಮನೆ ಕಡೆ ಬೀಳುತ್ತಿದೆ. ಇದು ಸರಿಯಲ್ಲ ಎಂದು ನಿತ್ಯವೂ ಜಗಳದ ವಾತಾವರಣ ನಿರ್ಮಾಣವಾಯಿತು. ಹೊಸದಾಗಿ ಮನೆ ಕಟ್ಟುವಾಗ ಇವೆಲ್ಲಾ ಆಗುವುದು ಸಹಜ. ಅದನ್ನು ಹೇಗೆ ಸರಿಪಡಿಸಿಕೊಳ್ಳಬಹುದು ಎಂದು ಯೋಚಿಸದೇ ದಿನ ಜಗಳವಾಗುತ್ತಿತ್ತು. ಕೊನೆಗೆ ಆ ಮನೆಯ ಮಾಲೀಕ ಜಾಗಕ್ಕೆ ಬರುವುದನ್ನು ನಿಲ್ಲಿಸಿ, ಕೆಲಸ ಮುಂದುವರೆಸಲು ಗುತ್ತಿಗೆದಾರನಿಗೆ ಸೂಚಿಸಿದರು. ಆ ಗುತ್ತಿಗೆದಾರ ಒಂದು ರೀತಿಯ ಜಗಳಗಂಟ. ನಾವು ಹೀಗೇ ಮಾಡುವುದು, ನೀವು ಏನು ಬೇಕಾದರೂ ಮಾಡಿಕೊಳ್ಳಿ ಎಂದು ತನ್ನ ಕೆಲಸ ಮುಂದುವರೆಸಿದ. ಅವನಿಗೆ ಬಾಯಿಕೊಡಲಾಗದೆ ಇವರು ಗೊಣಗಿಕೊಂಡು ಸುಮ್ಮನಾಗಬೇಕಾಯಿತು. ನಂತರ ಆ ಮನೆಯ ಗೃಹಪ್ರವೇಶದ ದಿನವೂ ಇವರ ಕಿರಿಕಿರಿ ಮುಂದುವರೆಯಿತು. ನಮ್ಮ ಮನೆಯ ಮುಂದೆ ಯಾವ ವಾಹನವೂ ನಿಲ್ಲಬಾರದು ಇತ್ಯಾದಿ. ಕೆಲ ದಿನಗಳ ನಂತರ ಹೊಸ ಮನೆಯವರು ವಾಸಕ್ಕೆ ಬಂದರು. ಇವರಿಬ್ಬರ ವೈಮನಸ್ಸೂ ಮುಂದುವರೆಯಿತು. ಇಬ್ಬರಿಗೂ ನೆಮ್ಮದಿ ಇಲ್ಲದಂತಹ ಪರಿಸ್ಥಿತಿ. ಕೊನೆಗೆ ಮೊದಲು ಮನೆ ಕಟ್ಟಿದ್ದವರು ಆ ಮನೆಯನ್ನು ಮಾರಿ ಬೇರೆ ಕಡೆಗೆ ಹೋಗಬೇಕು ಎಂಬಂತೆ ಆಗಿಹೋಗಿತ್ತು.

ಮತ್ತೊಂದು ಘಟನೆಯೂ ಇದಕ್ಕಿಂತ ಭಿನ್ನವಾದುದೇನಲ್ಲ. ಆದರೆ ಮೊದಲು ಮನೆ ಕಟ್ಟಿದ್ದವರು ಬುದ್ಧಿವಂತರು. ಅವರಿಗೂ ಇದೇ ರೀತಿಯ ಕಿರಿಕಿರಿಯಾಗುತ್ತಿದ್ದರೂ, ಅವರು ಪಕ್ಕದ ಮನೆಯವರೊಡನೆ ವೈಷಮ್ಯ ಕಟ್ಟಿಕೊಳ್ಳಬಾರದು ಎಂದು ತಾವಾಗಿಯೇ ಅವರನ್ನು ಪರಿಚಯ ಮಾಡಿಕೊಂಡು ಮಾತನಾಡಿಸುತ್ತಾ, ನೀವು ಒಳ್ಳೆಯ ಜನ. ನೀವು ಮನೆ ಕಟ್ಟುವಾಗ ನಮ್ಮ ಮನೆಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುತ್ತೀರಿ ಎಂಬುದು ನಮಗೆ ತಿಳಿದಿದೆ, ನಿಮ್ಮ ಮನೆ ಕಟ್ಟಿದ ನಂತರ ಅದಕ್ಕೆ ಬಣ್ಣ ಬಳಿಯುವಾಗ ನಮ್ಮ ಈ ಕಡೆಯ ಭಾಗಕ್ಕೂ ಬಣ್ಣ ಬಳಿಸುತ್ತೀರಿ ಅಲ್ವಾ! ನಾವು ಮುಂದೆ ಒಟ್ಟಾಗಿ ಇಲ್ಲಿ ವಾಸ ಮಾಡಬೇಕಾದವರಲ್ಲವೇ? ಹೀಗೆ ಹೇಳಿಕೊಂಡು ತಮ್ಮ ಮನೆಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಂಡರು. ಮುಂದೆ ಅವರ ಸ್ನೇಹ ಚೆನ್ನಾಗಿ ಮುಂದುವರೆಯಿತು. ಇದನ್ನು ಬುದ್ಧಿವಂತಿಕೆ ಎಂದು ಕರೆಯಲಾಗುತ್ತದೆ.



ಸಂಗ್ರಹ ಚಿತ್ರ

> “ ಒತ್ತುವರಿ ಕೇವಲ ಮಾರುಕಟ್ಟೆಯ ಸುತ್ತಮುತ್ತಲ ಸಮಸ್ಯೆ ಮಾತ್ರವಲ್ಲ. ಅದು ಬಹುತೇಕ ಎಲ್ಲ ಕಡೆಗೂ ಹಬ್ಬಿದೆ. ಅದು ವ್ಯಾಪಾರದ ವಲಯವನ್ನೂ ದಾಟಿ ಹೋಗಿದೆ. ಒತ್ತುವರಿಯ ಮುಖ್ಯ ಉದ್ದೇಶ ಹೆಚ್ಚು ಲಾಭ ಮಾಡಿಕೊಳ್ಳುವುದಕ್ಕಾಗಿದೆ. ಅದರಿಂದ ಯಾರಿಗೆ, ಎಷ್ಟರಮಟ್ಟಿಗೆ ತೊಂದರೆಯಾಗುತ್ತದೆ ಎಂಬುದಕ್ಕಿಂತ ನನಗೆ ಎಷ್ಟು ಲಾಭವಾಗುತ್ತದೆ ಎಂಬುದೇ ಯೋಚನಾ ಲಹರಿಯಾಗಿಬಿಟ್ಟಿದೆ. ಮುಂದೆ ಇದರ ಪರಿಣಾಮ ಅನುಭವಿಸಬೇಕಾಗುತ್ತದೆ ಎಂದು ತಿಳಿದಿದ್ದರೂ, ಆಗ ನೋಡಿಕೊಳ್ಳೋಣ ಎಂಬ ಆಲೋಚನೆ ಅವರದ್ದು. ”

# ಮೋದಿ ಪ್ರಧಾನಿಯಾಗಿ ಹ್ಯಾಟ್ರಿಕ್ ಸಾಧನೆ ತಡೆಯಲು ಯಾರಿಂದಲೂ ಸಾಧ್ಯವಿಲ್ಲ

● ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಬಲವಾದ ನಂಬಿಕೆ ● ದೇಶದಲ್ಲಿ ಕಾಂಗ್ರೆಸ್‌ಗೆ ಹೀನಾಯ ಸ್ಥಿತಿ ಬಂದಿದೆ ● ಮೂಲ ಕಾಂಗ್ರೆಸ್ಸಿಗರು ಮರೆಯಾಗಿದ್ದಾರೆ ● ಕಾಂಗ್ರೆಸ್ ಶಕ್ತಿ ಕಳೆದುಕೊಂಡಿದೆ ● ಕೃತಜ್ಞತೆ ಇಲ್ಲದ ಏಕೈಕ ರಾಜಕಾರಣಿ ಸಿದ್ದರಾಮಯ್ಯ ● ಡಿ.ಕೆ.ಶಿವಕುಮಾರ್ ಸಿಎಂ ಆಗಲೇಬೇಕು

ಮೈಸೂರು, ಏ.18(ಬಿಎಲ್‌ಯು)– ನರೇಂದ್ರ ಮೋದಿ ಮೂರನೇ ಬಾರಿಗೆ ಪ್ರಧಾನ ಮಂತ್ರಿ ಆಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಸಿದ್ಧಾರ್ಥ ಹೋಟೆಲ್‌ನಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಗಳಿಸಿ ಅಧಿಕಾರಕ್ಕೆ ಬರುತ್ತದೆ. ಈ ಮೂಲಕ ಮೋದಿ ಮತ್ತೊಮ್ಮೆ ಪ್ರಧಾನಿ ಆಗಲಿದ್ದಾರೆ ಎಂದರು.

ದೇಶದ ದೊಡ್ಡ ರಾಜ್ಯಗಳಲ್ಲಿ ಕಾಂಗ್ರೆಸ್ ಹೀನಾಯ ಸ್ಥಿತಿಗೆ ತಲುಪಿದೆ. ಪಶ್ಚಿಮ ಬಂಗಾಳದಲ್ಲಂತೂ ಅಲ್ಲಿನ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕಾಂಗ್ರೆಸ್ ಅನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಅಷ್ಟೇ ಅಲ್ಲದೆ ಈ ಬಾರಿ ಕಾಂಗ್ರೆಸ್ ಇತಿಹಾಸದಲ್ಲಿ ಮೊದಲ ಬಾರಿಗೆ ಅತ್ಯಂತ ಕಡಿಮೆ ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿದೆ. ಇದರಿಂದ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಪಕ್ಷದ ಪ್ರಮುಖ ಸ್ಥಾನ ಅಲಂಕರಿಸಿರುವ ಕೆಲವರು ಕಾಂಗ್ರೆಸ್ ಹಾಳು ಮಾಡುತ್ತಿದ್ದಾರೆ. ಇದರಿಂದ ಕಾಂಗ್ರೆಸ್ ತನ್ನ ಶಕ್ತಿ ಕಳೆದುಕೊಂಡಿದೆ. ಇಂತಹ ಪರಿಸ್ಥಿತಿಯಲ್ಲಿ ಬಿಜೆಪಿ ಜಯಭೇರಿ ಬಾರಿಸಲಿದ್ದು, ಮೋದಿ ಮತ್ತೊಮ್ಮೆ ಅಧಿಕಾರದ ಚುಕ್ಕಾಣಿ ಹಿಡಿಯಲಿದ್ದಾರೆ ಎಂದು ವಿಶ್ವನಾಥ್ ವಿಶ್ವಾಸ ವ್ಯಕ್ತಪಡಿಸಿದರು.

**ಸಿದ್ದರಾಮಯ್ಯ ವಚನಭ್ರಷ್ಟ:** ಕೃತಜ್ಞತೆ ಇಲ್ಲದ ವಚನ ಭ್ರಷ್ಟನಾದ ಯಾವುದಾದರೂ ನಾಯಕ ಇದ್ದರೆ ಅದು ಸಿದ್ದರಾಮಯ್ಯ ಮಾತ್ರ. ಜೆಡಿಎಸ್‌ನಿಂದ ಹೊರ ಹಾಕಿದ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ಪಕ್ಷ ಸೇರ್ಪಡೆ ಮಾಡಿಕೊಳ್ಳುತ್ತಿರಲಿಲ್ಲ. ನಾನು ಮತ್ತು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಇಬ್ಬರು ಸೋನಿಯಾಗಾಂಧಿ ಭೇಟಿ ಮಾಡಿ ಅವರ ಮನವೊಲಿಸಿ ಕಾಂಗ್ರೆಸ್ ಸೇರುವಂತೆ ಮಾಡಿದೆವು. ಆದರೆ ಈಗ ಮೂಲ ಕಾಂಗ್ರೆಸಿಗರು ಮರೆಯಾಗಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಚುನಾವಣೆಯಲ್ಲಿ ಸೋತು ರಾಜ್ಯಸಭೆ ಸದಸ್ಯರಾಗಿರುವವರು ಹೈಕಮಾಂಡ್ ಆಗಿದ್ದಾರೆ. ಅವರಿಗೆ ಪಕ್ಷದಲ್ಲಿ ಸಂಘಟನೆ ಮಾಡಿದವರು ಯಾರು, ಅವರಿಗೆ ಏನು ಸ್ಥಾನಮಾನ ನೀಡಬೇಕೆಂಬ ವಿವೇಚನೆ ಇರುವುದಿಲ್ಲ. ಇದರಿಂದ ಪಕ್ಷಕ್ಕಾಗಿ ದುಡಿಮೆ ಮಾಡಿದವರು ಮೂಲೆಗೆ ಸೇರುತ್ತಾರೆ. ದೆಹಲಿ ರಾಜಕಾರಣವೇ ಹೀಗೆ ಇದ್ದು, ಬಿಜೆಪಿಯಲ್ಲೂ ಇದೇ ಪರಿಸ್ಥಿತಿ ಎಂದು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈಗ ಪಕ್ಷ ರಾಜಕಾರಣ ಸತ್ತು ಹೋಗಿದೆ. ವ್ಯಕ್ತಿ ರಾಜಕಾರಣ ವಿಜೃಂಭಿಸುತ್ತಿದೆ. ಇದರಿಂದ ಪಕ್ಷಕ್ಕಾಗಿ ಶ್ರಮ ಹಾಕಿದವರಿಗೆ ಮನ್ನಣೆ ದೊರೆಯುತ್ತಿಲ್ಲ ಎಂದು ವಿಶ್ವನಾಥ್ ಆರೋಪಿಸಿದರು.

ಚಾಮುಂಡೇಶ್ವರಿ ಉಪ ಚುನಾವಣೆಯಲ್ಲಿ ಸಿದ್ದರಾಮಯ್ಯ ರಾಜಕೀಯ ಭವಿಷ್ಯ ಅಡಗಿತ್ತು. ಆ ಸಂದರ್ಭದಲ್ಲಿ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಖಲೀಂವುಲ್ಲಾ ಖಾನ್ ನಾಮಪತ್ರ ಸಲ್ಲಿಸಿದ್ದರು. ಸಿದ್ದರಾಮಯ್ಯ ಸೋಲಿಸಲು ನೀವು ಸ್ಪರ್ಧೆ ಮಾಡುವಂತೆ ಅಂದಿನ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಖಲೀಂವುಲ್ಲಾ ಖಾನ್ ಬಳಿ ಮನವಿ ಮಾಡಿದ್ದರು. ಆದರೆ ನಾನು ಮತ್ತು ಸಿದ್ದರಾಮಯ್ಯ ಖಲೀಂವುಲ್ಲಾ ಖಾನ್ ಮನೆಗೆ ಹೋಗಿ ನಾಮಪತ್ರ ವಾಪಾಸು ಪಡೆಯುವಂತೆ ಮನವೊಲಿಸುವಲ್ಲಿ ಯಶಸ್ವಿಯಾದೆವು. ಅಂದು ಖಲೀಂವುಲ್ಲಾ ಖಾನ್‌ಗೆ ರಾಜಕೀಯ ಸ್ಥಾನಮಾನ ಕೊಡಿಸುವುದಾಗಿ ಭರವಸೆ ನೀಡಿದ್ದ ಸಿದ್ದರಾಮಯ್ಯ, ಈ ತನಕ ಅದನ್ನು ಈಡೇರಿಸದೆ ವಚನ ಭ್ರಷ್ಟರಾಗಿದ್ದಾರೆ ಎಂದು ಕಿಡಿಕಾರಿದರು.

ಈ ವೇಳೆ ಮಾತನಾಡಿದ ಖಲೀಂವುಲ್ಲಾ ಖಾನ್, ನಾನು ಅಪ್ಪಟ ಕಾಂಗ್ರೆಸ್ಸಿಗ. ಆದರೆ ಸಿದ್ದರಾಮಯ್ಯ ಅವರಿಂದ ನನಗೆ ಮೋಸವಾಗಿದೆ. ಈ ಹಿನ್ನೆಲೆಯಲ್ಲಿ ಲೋಕಸಭಾ ಚುನಾವಣೆಯಲ್ಲಿ ಯಾರನ್ನು ಬೆಂಬಲಿಸಬೇಕೆಂಬ ಬಗ್ಗೆ ಬೆಂಬಲಿಗರ ಸಭೆಯಲ್ಲಿ ತೀರ್ಮಾನ ಮಾಡುತ್ತೇನೆ ಎಂದು ತಿಳಿಸಿದರು.



ಮೈಸೂರಿನ ಸಿದ್ಧಾರ್ಥ ಹೋಟೆಲ್‌ನಲ್ಲಿ ಗುರುವಾರ ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

### ಕಾಂಗ್ರೆಸ್ ಗ್ಯಾರಂಟಿ ಮನೆಗಳಲ್ಲಿ ಜಗಳ ಗ್ಯಾರಂಟಿ

ರಾಜ್ಯ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಮನೆಗಳಲ್ಲಿ ಜಗಳ ಗ್ಯಾರಂಟಿಯಾಗಿದೆ ಎಂದು ವಿಶ್ವನಾಥ್ ಲೇವಡಿ ಮಾಡಿದರು.

ಗ್ಯಾರಂಟಿ ಯೋಜನೆಯಲ್ಲಿ ಮನೆಯಲ್ಲಿ ಒಬ್ಬರಿಗೆ ಒಂದು ಸವಲತ್ತು ಕೊಟ್ಟು, ಅದೇ ಕುಟುಂಬದ ಮತ್ತೊಬ್ಬರಿಂದ ಅಷ್ಟೇ ಹಣ ಸುಲಿಗೆ ಮಾಡುತ್ತಿದ್ದಾರೆ. ಗೃಹಲಕ್ಷ್ಮಿ ಯೋಜನೆಯಲ್ಲಿ ಬಹಳಷ್ಟು ಮಹಿಳೆಯರಿಗೆ 2 ಸಾವಿರ ರೂಪಾಯಿ ಬಂದಿಲ್ಲ ಇದರಿಂದ ಹಣ ಬಂದಿದೆ, ಬಂದಿಲ್ಲ ಎಂಬ ವಿಚಾರವಾಗಿ ಅತ್ತೆ, ಸೊಸೆ ನಡುವೆ ಪ್ರತಿದಿನ ಗಲಾಟೆ ನಡೆಯುತ್ತಿದ್ದು, ಸರ್ಕಾರದ ಗ್ಯಾರಂಟಿ ಜಗಳ ಗ್ಯಾರಂಟಿಯಾಗಿದೆ ಎಂದು ಕಿಡಿಕಾರಿದರು.

ಆದ ಕಾರಣ ರಾಜ್ಯದಲ್ಲಿ ಗೃಹಲಕ್ಷ್ಮಿ ಯೋಜನೆಯಲ್ಲಿ ಎಷ್ಟು ಮಹಿಳೆಯರಿಗೆ ಹಣ ಬಂದಿಲ್ಲ, ಉಳಿದ ಎಷ್ಟು ಮಹಿಳೆಯರಿಗೆ ಹಣ ಬರಬೇಕು ಎಂಬ ವಿವರವಿರುವ ಶ್ವೇತಪತ್ರ ಹೊರಡಿಸಬೇಕು ಎಂದು ಆಗ್ರಹಿಸಿದರು.

ಮಹಿಳೆಯರಿಗೆ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಫ್ರೀ ಕೊಟ್ಟಿದ್ದಾರೆ. ಆದರೆ ಪುರುಷರ ಟಿಕೆಟ್ ದರ ಏರಿಕೆ ಮಾಡಿದ್ದು, 10 ರೂಪಾಯಿ ಇದ್ದ ಟಿಕೆಟ್ ದರ ಈಗ 25 ರೂಪಾಯಿಗೆ ಹೆಚ್ಚಳ ಮಾಡಿದ್ದಾರೆ. ಹೆಂಡತಿಗೆ ಟಿಕೆಟ್ ಫ್ರೀ ಕೊಟ್ಟು, ಗಂಡನ ದುಬಾರಿ ಟಿಕೆಟ್‌ನಿಂದ ಹಣ ಸಂಗ್ರಹಿಸುತ್ತಿದ್ದಾರೆ. ಇದಲ್ಲದೆ ಒಂದು ಬಿಯರ್ ಬೆಲೆ 250 ರೂಪಾಯಿ ಆಗಿದೆ. ಈ ಮೊದಲು ಅಬಕಾರಿ ಆದಾಯ 28 ಸಾವಿರ ಕೋಟಿ ರೂಪಾಯಿ ಬರುತ್ತಿತ್ತು. ಆದರೆ ಈಗ 40 ಸಾವಿರ ಕೋಟಿ ರೂಪಾಯಿಗೆ ಆದಾಯ ಹೆಚ್ಚಳವಾಗಿದೆ ಎಂದು ತಿಳಿಸಿದರು.

ಹೆಂಡತಿಗೆ ಫ್ರೀ ಕೊಟ್ಟು ಗಂಡನ ಸುಲಿಗೆ ಮಾಡುತ್ತಿರುವ ಸರ್ಕಾರದ ಗ್ಯಾರಂಟಿ ಯೋಜನೆಯಿಂದ ಗಂಡಸರಿಗೆ ಮನೆ ನಿರ್ವಹಣೆ ಮಾಡುವುದು ಹೊರೆಯಾಗಿದೆ. ಮನೆ ಸರಿದೂಗಿಸಲು ಸಾಧ್ಯವಾಗದೆ ಸಂಕಷ್ಟಪಡುತ್ತಿದ್ದಾರೆ ಎಂದು ಆರೋಪಿಸಿದರು.

**ಆದಾಯದ ಶೇ.60 ಸಾಲ, ಬಡ್ಡಿ, ಸಂಬಳಕ್ಕೆ:** ಕರ್ನಾಟಕದ ಬಜೆಟ್ 3.75 ಲಕ್ಷ ಕೋಟಿ ಆಗಿದ್ದು, ಇದರಲ್ಲಿ ಶೇಕಡ 60 ರಷ್ಟು ಹಣ ಸಾಲ, ಬಡ್ಡಿ, ಸಂಬಳಕ್ಕೆ ಪಾವತಿಯಾಗುತ್ತಿದೆ. ಉಳಿದ 40 ರಷ್ಟು ಹಣ ಗ್ಯಾರಂಟಿಗೆ ಕೊಟ್ಟರೆ ಅಭಿವೃದ್ಧಿ ಹೇಗೆ ಸಾಧ್ಯ ಎಂದು ವಿಶ್ವನಾಥ್ ಪ್ರಶ್ನಿಸಿದರು.

ಇಂತಹ ವಾಸ್ತವ ಅಂಶಗಳನ್ನು ಮರೆಮಾಚಿ ಜನರ ಕಣ್ಣಿಗೆ ಬಟ್ಟೆ ಕಟ್ಟಿದ್ದಾರೆ. ಹೀಗೆ ಆದರೆ ರಾಜ್ಯ ಹಾಗೂ ದೇಶವನ್ನು ಅಡಮಾನ ಇಡುವ ಪರಿಸ್ಥಿತಿ ಬರುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಲೋಕಸಭಾ ಚುನಾವಣೆಯಲ್ಲಿ ಬಹಳಷ್ಟು ಅಭ್ಯರ್ಥಿಗಳು ನೂರಾರು ಕೋಟಿ ಆಸ್ತಿ ಘೋಷಣೆ ಮಾಡಿದ್ದಾರೆ. ನಾಮಪತ್ರದಲ್ಲಿ ಅಪ್ಪ ಮಗನಿಗೆ, ಹೆಂಡತಿ ಗಂಡನಿಗೆ ಸಾಲ ಕೊಟ್ಟಂತೆ ಲೆಕ್ಕ ತೋರಿಸಿ ದ್ದಾರೆ. ಇವರೆಲ್ಲರೂ ತಮ್ಮ ಹಣ ಕೊಡಲಿ. ಆಗ ಆರ್ಥಿಕ ಪರಿಸ್ಥಿತಿ ಸರಿದೂಗಿಸಬಹುದು ಎಂದು ಅಭಿಪ್ರಾಯಪಟ್ಟರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com*

# ನರೇಂದ್ರ ಮೋದಿ ಆಳ್ವಿಕೆ ವಿರುದ್ಧ ಜನತಾ ಆರೋಪ ಪಟ್ಟಿ ಕಿರುಹೊತ್ತಿಗೆ ಬಿಡುಗಡೆ

ಮೈಸೂರು,ಏ.18(ಜಿಎ)–ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಜನಾಂದೋಲನಗಳ ಮಹಾಮೈತ್ರಿ, ಜನತಂತ್ರ ಪ್ರಯೋಗ ಶಾಲೆ, ರಾಜ್ಯ ರೈತ ಸಂಘ ಮೊದಲಾದವುಗಳು ಮೋದಿ ಆಳ್ವಿಕೆ ವಿರುದ್ಧದ ಜನತಾ ಆರೋಪಗಳ ಪಟ್ಟಿಯ ಕಿರುಹೊತ್ತಿಗೆಯನ್ನು ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಬಿಡುಗಡೆಗೊಳಿಸಿದವು

ನಂತರ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಪ್ರತಿನಿಧಿ ಉಗ್ರ ನರಸಿಂಹೇಗೌಡ ಮಾತನಾಡಿ, ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಪ್ರಧಾನಿ ಮೋದಿ ಅವರು ನೀಡಿದ ಭರವಸೆ, ಹೇಳಿಕೆಗಳನ್ನು ಈ ಕಿರುಹೊತ್ತಿಗೆ ಒಳಗೊಂಡಿದೆ. ಜೊತೆಗೆ ಅವನ್ನು ಏಕೆ ಈಡೇರಿಸಲಿಲ್ಲ ಎಂಬುದನ್ನು ಸಹಾ ವಿವರಿಸಲಾಗಿದೆ. ಕರಾಳ ಕೃಷಿ ಕಾಯ್ದೆ, ಜಾನುವಾರು ಹತ್ಯೆ ನಿಷೇಧ, ಕಾರ್ಮಿಕರ ಹಕ್ಕು ನಿರಾಕರಿಸುವಂತೆ ನಾಲ್ಕು ಸಂಹಿತೆಗಳನ್ನಾಗಿ ಮಾಡಿದ್ದು, ಎಪಿಎಂಸಿ ಕಾಯ್ದೆ ತಿದ್ದುಪಡಿಯಂತಹ ಜನ, ರೈತ, ಕಾರ್ಮಿಕ ವಿರೋಧಿ ನೀತಿಗಳನ್ನು ವಿವರಿಸಲಾಗಿದೆ. ಇನ್ನು, ನಗರದಲ್ಲಿ ನಡೆದ ಬಿಜೆಪಿ ಪ್ರಚಾರ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಸನಾತನ ಧರ್ಮ ರಕ್ಷಣೆಯೇ ಮೋದಿ ಗ್ಯಾರಂಟಿ ಎಂದಿದ್ದಾರೆ. ಅಂದರೆ ವರ್ಣಾಶ್ರಮ ಇವರ ಗುರಿಯೇ, ಈ ಹೇಳಿಕೆಯಿಂದಾಗಿ ಇವರು ಭಾರತವನ್ನು ಯಾವ ದಿಕ್ಕಿನತ್ತ ಕೊಂಡೊಯ್ಯುತ್ತಿದ್ದಾರೆ ಎಂಬುದನ್ನು ಅರಿಯಬಹುದಾಗಿದೆ. ಆರ್‌ಎಸ್‌ಎಸ್ ಆಶಯದಂತೆ ನವ ಮನುವಾದ ನಿರ್ಮಾಣ ಇವರ ಗುರಿಯಾಗಿದೆಯೇ ಹೊರತು ಸಂವಿಧಾನ ಆಶಯ ಜಾರಿಯಲ್ಲ ಎಂದು ಟೀಕಿಸಿದರು.

ಹಿರಿಯ ಪತ್ರಕರ್ತ ಜಿ.ಪಿ. ಬಸವರಾಜು ಮಾತನಾಡಿ, ಸುಮಾರು 23 ಆರೋಪಗಳನ್ನು ಕಿರುಹೊತ್ತಿಗೆ ಒಳಗೊಂಡಿದೆ. ಇವು ಕೇವಲ ಆರೋಪಗಳಲ್ಲ, ಇವುಗಳ ಹಿಂದೆ ಅಂಕಿ ಅಂಶಗಳಿವೆ. ನಮ್ಮ ಆರ್ಥಿಕ ಪರಿಸ್ಥಿತಿ ಎಷ್ಟು ದುರ್ಬಲವಾಗಿದೆ, ನ್ಯಾಯಾಂಗದ ಮೇಲೆ ಹೇಗೆ ಪ್ರಭಾವ ಬೀರಲಾಗುತ್ತಿದೆ. ಕಾರ್ಪೊರೇಟ್ ಸಂಸ್ಥೆಗಳ ಕೈಗೆ ಹೇಗೆ ಆಡಳಿತ ಹೋಗುತ್ತಿದೆ ಎಂಬಿವೇ ಮೊದಲಾದವನ್ನು ವಿವರಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಹೊಸಕೋಟೆ ಬಸವರಾಜು, ಪ್ರೊ. ಕಾಳಚನ್ನೇಗೌಡ ಮತ್ತಿತರರು ಉಪಸ್ಥಿತರಿದ್ದರು.

# ಮೈಸೂರು ನಗರದಲ್ಲಿ ಯದುವೀರ್ ಭರ್ಜರಿ ರೋಡ್ ಶೋ

## ಅಶೋಕಪುರಂನಲ್ಲಿ ಹೃದಯಸ್ಪರ್ಶಿ ಸ್ವಾಗತ, ಆರತಿ ಬೆಳಗಿ ಸ್ವಾಗತಿಸಿದ ಮಹಿಳೆಯರು



ಮೈಸೂರು, ಏ.18(ಬಿಎಲ್‌ಯು)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮೈಸೂರು ನಗರದಲ್ಲಿ ಇಂದು ಭರ್ಜರಿ ರೋಡ್ ಶೋ ನಡೆಸಿದರು. ಅಶೋಕ ಪುರಂನಲ್ಲಿ ಯದುವೀರ್‌ಗೆ ಆರತಿ ಬೆಳಗಿ ಪುಷ್ಪಾರ್ಚನೆ ಮಾಡಿದರೆ, ಸುಣ್ಣದ ಕೇರಿಯಲ್ಲಿ ಪಾದ ತೊಳೆದು ಸ್ವಾಗತಿಸಿದರು.

ನಗರದ ಅಶೋಕಪುರಂನ ಅಂಬೇಡ್ಕರ್ ಪಾರ್ಕ್‌ನಲ್ಲಿರುವ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಯದುವೀರ್ ಪ್ರಚಾರ ಆರಂಭಿಸಿದರು. ಅಶೋಕಪುರಂನ ಪ್ರತಿ ರಸ್ತೆಯಲ್ಲಿ ರೋಡ್ ಶೋ ನಡೆಸಿದ ಯದುವೀರ್‌ಗೆ ಅಭೂತಪೂರ್ವ ಸ್ವಾಗತ ಕೋರಲಾಯಿತು. ಮಹಿಳೆಯರು ತಮಗೆ ಆರತಿ ಎತ್ತಲು ಮನೆ ಮುಂದೆ ನಿಂತಿರುವುದನ್ನು ಗಮನಿಸಿದ ಯದುವೀರ್ ವಾಹನದಿಂದ ಇಳಿದು ಪಾದಯಾತ್ರೆ ಮೂಲಕ ಹೊರಟರು. ಬಹಳಷ್ಟು ಮನೆ ಗಳಲ್ಲಿ ಯದುವೀರ್‌ಗೆ ಆರತಿ ಬೆಳಗಿ, ತಿಲಕವಿಟ್ಟು ಚುನಾವಣೆಯಲ್ಲಿ ಜಯಶಾಲಿಯಾಗುವಂತೆ ಮಹಿಳೆಯರು ಆಶಿಸಿದರು.

ಈ ವೇಳೆ ಶಿವನ ಆರಾಧಕರಾದ ಅಘೋರಿಗಳು ಯದುವೀರ್ ಭೇಟಿ ಮಾಡಿ ಚುನಾವಣೆಯಲ್ಲಿ ಗೆಲುವು ಸಾಧಿಸುವಂತೆ ಆಶೀರ್ವದಿಸಿದರು.

ಸುಮಾರು ಎರಡು ಗಂಟೆಗಳ ಕಾಲ ಅಶೋಕಪುರಂ ಬಡಾವಣೆಯಲ್ಲಿ ಬಿರುಸಿನ ಪ್ರಚಾರ ಮಾಡಿದ ಯದುವೀರ್‌ಗೆ ಪ್ರತಿ ರಸ್ತೆಯಲ್ಲಿ ಪುಷ್ಪಾರ್ಚನೆ ಮಾಡಿ ಸ್ವಾಗತ ಕೋರಲಾಯಿತು. ಈ ವೇಳೆ ಮಾತನಾಡಿದ ಯದುವೀರ್, ಮೈಸೂರು ಅರಮನೆಗೂ ಅಶೋಕಪುರಂಗೂ ಭಾವನಾತ್ಮಕ ಸಂಬಂಧವಿದೆ. ಮರದ ಅರ ಮನೆ ಬೆಂಕಿಗಾವುತಿಯಾದಾಗ ಅಶೋಕ ಪುರಂ ನಿವಾಸಿಗಳೆಲ್ಲಾ ಬಂದು ಬೆಂಕಿ ನಂದಿಸಲು ಯತ್ನಿಸಿದ್ದು ಎಂದು ಸ್ಮರಿಸಿದರು.

ಮೈಸೂರು ಮಹಾರಾಜರೂ ಅಶೋಕಪುರಂ ನಿವಾಸಿಗಳನ್ನು ಅತ್ಯಂತ ಪ್ರೀತಿ–ವಿಶ್ವಾಸದಿಂದ ಕಾಣುತ್ತಿದ್ದರು. ಈ ಚುನಾವಣೆಯಲ್ಲಿ ನನ್ನನ್ನು ಬೆಂಬಲಿಸಿ ಎಂದು ಮನವಿ ಮಾಡಿದರು.

ತುವಾಯ ಬಲ್ಲಾಳ್ ವೃತ್ತದ ಶ್ರೀ ರಾಘವೇಂದ್ರ ಸ್ವಾಮಿ ಮಠಕ್ಕೆ ಭೇಟಿ ನೀಡಿ ದೇವರ ದರ್ಶನ ಮಾಡಿದ ಯದುವೀರ್ ಲಕ್ಷ್ಮಿಪುರಂನಲ್ಲಿ ರೋಡ್ ಶೋ ನಡೆಸಿ ಮತಯಾಚನೆ ಮಾಡಿದರು. ಈ ಸಂದರ್ಭದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಮೇಯರ್ ಶಿವಕುಮಾರ್, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್ ಕುಮಾರ್ ಗೌಡ ಸೇರಿದಂತೆ ಹಲವರು ಅವರ ಜೊತೆಗಿದ್ದರು.

## ಯದುವೀರ್‌ಗೆ ಪುಷ್ಪವೃಷ್ಟಿಗೈಯ್ದ ಜನರು

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ ವೇಳೆ ಪ್ರಚಾರಕ್ಕೆ ಬಂದಾಗ ತೋರಿದ ಪ್ರೀತಿಯನ್ನು ಇಂದು ಯದುವೀರ್‌ಗೂ ತೋರಿಸಿ, ಪುಷ್ಪವೃಷ್ಟಿಗರೆದು ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಯದುವೀರ್, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರವನ್ನು ನಿರುದ್ಯೋಗ ಮುಕ್ತ ಮಾಡುವುದು ನನ್ನ ಮೊದಲ ಆದ್ಯತೆ ಎಂದು ಭರವಸೆ ನೀಡಿದರು. ವಿಕಸಿತ ಭಾರತ ಪರಿಕಲ್ಪನೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮೇಕ್ ಇನ್ ಇಂಡಿಯಾ, ಡಿಜಿಟಲ್ ಇಂಡಿಯಾ, ಸುಸ್ಥಿರ ಆರ್ಥಿಕತೆಯ ನಿರ್ಮಾಣ ಸೇರಿದಂತೆ ಹಲವು ಯೋಜನೆಗಳ ಮೂಲಕ ಭಾರತವನ್ನು ವಿಶ್ವದಲ್ಲೇ ಅಗ್ರಮಾನ್ಯ ದೇಶವನ್ನಾಗಿ ಮಾಡಲು ಮುಂದಾಗಿದೆ. ಈ ಮೂಲಕ ಜಾಗತಿಕ ಮಟ್ಟದಲ್ಲಿ ಭಾರತದ ಕೀರ್ತಿ ಹೆಚ್ಚಾಗುತ್ತಿದೆ. ಈಗ ಬಿಜೆಪಿ ಸರ್ಕಾರ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಮಹತ್ವದ ವಿಶಿಷ್ಟ ಯೋಜನೆಗಳು ಅನುಷ್ಠಾನಗೊಳ್ಳುತ್ತದೆ ಎಂದು ತಿಳಿಸಿದರು.

ಕರ್ನಾಟಕ ಐಟಿ ಹಬ್ ಆಗಿ ಗುರುತಿಸಿ ಕೊಂಡಿದ್ದು, ಕರ್ನಾಟಕದ ಅಭಿವೃದ್ಧಿಗೆ ಮತ್ತಷ್ಟು ಉತ್ತೇಜನ ನೀಡುವುದಾಗಿ ನರೇಂದ್ರ ಮೋದಿ ಹೇಳಿದ್ದಾರೆ. ಈ ಮೂಲಕ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ನವ ಕೈಗಾರಿಕೆಗಳ ಸ್ಥಾಪನೆಗೆ ಪ್ರಯತ್ನಿಸಿ, ನಿರುದ್ಯೋಗ ಮುಕ್ತ ಮಾಡಲು ನಾನು ಶ್ರಮಿಸುತ್ತೇನೆ ಎಂದು ಯದುವೀರ್ ಆಶ್ವಾಸನೆ ನೀಡಿದರು. ನಂಜುಮಳಿಗೆ, ವಿವೇಕಾನಂದನಗರ, ಬನುಮಯ್ಯ ವೃತ್ತ, ರಾಮಾನುಜ ರಸ್ತೆ ಕಂಸಾಳೆ ಮಹದೇವಯ್ಯ ವೃತ್ತ ಸೇರಿದಂತೆ ಹಲವು ಕಡೆ ರೋಡ್ ಶೋ ನಡೆಸಿ ಯದುವೀರ್ ಮತಯಾಚಿಸಿದರು.

# ಅಳಿವಿನಂಚಿನಲ್ಲಿರುವ ಜಲಮೂಲ ಸಂರಕ್ಷಣೆ ಅಗತ್ಯ

## ಪರಿಸರ ಉಳಿಸಿ ಸಮಿತಿ ಸಂಚಾಲಕ ಕಿರಣ್ ಆಗ್ರಹ

ಮೈಸೂರು, ಏ.18(ಜಿಎ)–ಪಟ್ಟಭದ್ರರ ಪ್ರಭಾವ, ಅನುದಾನಗಳ ದುರ್ಬಳಕೆ, ಭ್ರಷ್ಟಾಚಾರದಿಂದ ಅಳಿವಿನ ಅಂಚಿನಲ್ಲಿರುವ ಕೆರೆಗಳು ಹಾಗೂ ಜಲಮೂಲಗಳನ್ನು ರಕ್ಷಿಸಬೇಕಿದೆ ಎಂದು ಪರಿಸರ ಉಳಿಸಿ ಸಮಿತಿ ಸಂಚಾಲಕ ಕಿರಣ್ ಆಗ್ರಹಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆರೆ ಅಭಿವೃದ್ಧಿಗಾಗಿ ಕೋಟಿಗಟ್ಟಲೆ ಅನುದಾನ ಅನ್ಯ ಉದ್ದೇಶಕ್ಕೆ ಬಳಕೆ ಆಗುತ್ತಿದೆ. ಇದರಿಂದಾಗಿ ಕೆರೆ ಕಟ್ಟೆ, ಕಲ್ಯಾಣಿ ಮೊದಲಾದ ಜಲಮೂಲಗಳ ಸಂರಕ್ಷಣೆ ಆಗುತ್ತಿಲ್ಲ. ಇದೇ ವೇಳೆ ಅಂತರ್ಜಲ ಬತ್ತುತ್ತಾ ಕಲುಷಿತ ನೀರು ಸಹಾ ಅದನ್ನು ಸೇರುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಶಾಲಾ ಕಾಲೇಜುಗಳಲ್ಲಿ ಪರಸರ ಕುರಿತ ಪಠ್ಯದ ವಿಷಯ ಇರಬೇಕು, ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಹೆಚ್ಚು ಹೆಚ್ಚಾಗಿ ಗಿಡಮರ ಬೆಳೆಸಬೇಕು, ಇಂಗುಗುಂಡಿ ನಿರ್ಮಿಸಬೇಕು, ನಗರ ಮೊದಲಾದ ಕಡೆ ಗುಡಿ ಗೋಪುರ ನಿರ್ಮಾಣ ಬದಲು ಇರುವ ಕೆರೆ ಕಟ್ಟೆ ಸಂರಕ್ಷಿಸಲು ಹಣ ಬಳಕೆ ಮಾಡಬೇಕು, ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಗಳಲ್ಲಿ ಪರಿಸರ ಸಂರಕ್ಷಣೆ ವಿಷಯ ಸೇರಿಸಬೇಕು, ಸರ್ಕಾರ ಬೋರ್‌ವೆಲ್‌ಗಳನ್ನು ವಶಕ್ಕೆ ಪಡೆಯುವ ಬದಲು ಕೆರೆ ಕಟ್ಟೆಗಳನ್ನೂ ವಶಕ್ಕೆ ಪಡೆದು, ಭೂಗಳ್ಳರಿಂದ ಸಂರಕ್ಷಿಸಬೇಕೆಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಸತೀಶ್, ಅರ್ಚನಾ, ಸೈಯ್ಯದ್ ಇಸಾಕ್ ಉಪಸ್ಥಿತರಿದ್ದರು.



ಮೈಸೂರು ವಿಶ್ವವಿದ್ಯಾನಿಲಯದ 104ನೇ ಘಟಿಕೋತ್ಸವದಲ್ಲಿ ಸ್ನಾತಕೋತ್ತರ ಪದವಿಯಲ್ಲಿ 19 ಚಿನ್ನದ ಪದಕ ಪಡೆದ ಕುಮಾರಿ ತೇಜಸ್ವಿನಿ ಅವರ ಮುಂದಿನ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಹಾಗೂ ಕಾಂಗ್ರೆಸ್ ಮುಖಂಡ ಲೋಕೇಶ್ ಪಿಯಾ 50 ಸಾವಿರ ರೂ. ಆರ್ಥಿಕ ನೆರವು ನೀಡಿದರು. ಈ ಸಂದರ್ಭದಲ್ಲಿ ನಾಯಕರ ಯುವ ಸೇನೆ ರಾಜ್ಯಾಧ್ಯಕ್ಷ ದೇವರಾಜ್ ಟಿ.ಕಾಟೂರು, ಸುಣ್ಣದಕೇರಿ ನಾಯಕ ಸಂಘದ ಅಧ್ಯಕ್ಷ ಸತೀಶ, ನಾಲಾಬೀದಿ ರವಿ, ಹರೀಶ್, ಸ್ಮರಣ್, ಉದ್ಬೂರು ಸೋಮಣ್ಣ, ಎಸ್.ಎಂ.ಪಿ ಪರಶಿವಮೂರ್ತಿ, ಶೇಖರನಾಯಕ, ಇಲವಾಲ ಕೃಷ್ಣ, ರಂಗಸ್ವಾಮಿ, ಕಣೆಯನಹುಂಡಿ ಸಿದ್ದರಾಜು ಇತರ ಮುಖಂಡರು ಹಾಜರಿದ್ದರು.

# ಸರ್ಕಾರಿ ಪಿಯು ಕಾಲೇಜಿಗೆ ಉತ್ತಮ ಫಲಿತಾಂಶ



ಮೈಸೂರು,ಏ.18–ಮೈಸೂರು ತಾಲೂಕು ಸಿದ್ದರಾಮನಹುಂಡಿಯಲ್ಲಿರುವ ಸರ್ಕಾರಿ ಪದವಿಪೂರ್ವ ಕಾಲೇಜು ದ್ವಿತೀಯ ಪಿಯುಸಿಯಲ್ಲಿ ಉತ್ತಮ ಫಲಿತಾಂಶ ಪಡೆದಿದೆ.

6 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ, 26 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ, 6 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ, ಮೂವರು ವಿದ್ಯಾರ್ಥಿಗಳು ತೃತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ.

ಇವರಲ್ಲಿ ಆರ್.ಮೇಘನಾ(578), ಕೆ.ಎನ್.ಸತ್ಯಶ್ರೀ (563), ಹರ್ಷಿತ (558), ಎಂ.ಶಂಕರ್ (525), ಸಿದ್ದಾಚಾರಿ (516), ಎಸ್.ಅಭಿಜಿತ್ 513 ಅಂಕ ಪಡೆದಿದ್ದಾರೆ. ವಿದ್ಯಾರ್ಥಿಗಳನ್ನು ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು, ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಅಭಿನಂದಿಸಿದ್ದಾರೆ.

### ಬೆಂಗಳೂರು ಅರಮನೆ ಆವರಣದ ಜಾಗ ರಸ್ತೆ ಅಗಲೀಕರಣ, ಅಭಿವೃದ್ಧಿಗೆ ಸ್ವಾಧೀನ

# ಮೈಸೂರು ರಾಜವಂಶಸ್ಥರಿಗೆ 1,400 ಕೋಟಿ ಮೌಲ್ಯದ ಟಿಡಿಆರ್ ನೀಡಲು ಸರ್ಕಾರ ನಿರ್ಧಾರ

ಬೆಂಗಳೂರು, ಏ.18(ಕೆಎಂಶಿ)– ಮೈಸೂರು ರಾಜವಂಶಸ್ಥರಿಗೆ 1,400 ಕೋಟಿ ರೂ. ಮೌಲ್ಯದ ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕುಗಳ (ಟಿಡಿಆರ್) ನೀಡಲು ರಾಜ್ಯ ಸರ್ಕಾರ ಹಸಿರು ನಿಶಾನೆ ತೋರಿದೆ.

ಈ ಬೃಹತ್ ಮೊತ್ತದ ಹಕ್ಕುಗಳನ್ನು ಮೇ 17ರೊಳಗೆ ನೀಡುವಂತೆ ನಗರಾಭಿವೃದ್ಧಿ ಇಲಾಖೆಗೆ ಲೋಕಸಭಾ ಚುನಾವಣಾ ವೇಳಾಪಟ್ಟಿ ಪ್ರಕಟಣೆಗೂ ಮುನ್ನವೇ ಸರ್ಕಾರ ಆದೇಶ ಮಾಡಿದೆ ಈ ಸರ್ಕಾರಿ ಆದೇಶ ಹೊರಬೀಳುತ್ತಿದ್ದಂತೆ ಆಡಳಿತದಲ್ಲಿರುವ ಇಬ್ಬರು ಪ್ರಭಾವಿಗಳು ಈ ಹಕ್ಕುಗಳನ್ನು ಖರೀದಿಸಲು ತೆರೆಮರೆಯಲ್ಲಿ ಒಪ್ಪಂದ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.

ರಾಜಧಾನಿಯ ಹೃದಯ ಭಾಗದಲ್ಲಿರುವ ಬೆಂಗಳೂರು ಅರಮನೆ ಆವರಣದ ಸುತ್ತಲಿನ 15.31 ಎಕರೆ ಭೂಮಿಯನ್ನು ರಸ್ತೆ ಅಗಲೀಕರಣ, ಅಭಿವೃದ್ಧಿಗಾಗಿ ಸ್ವಾಧೀನಪಡಿಸಿಕೊಂಡು, ಈ ಜಾಗಕ್ಕೆ ಬೇಲಿ ಹಾಕಿದೆ.

ಸರ್ಕಾರ ವಶಪಡಿಸಿಕೊಂಡ ನಂತರ ಭೂಮಿಯ ಮಾರುಕಟ್ಟೆ ಮೌಲ್ಯದಂತೆ ಹಣ ನೀಡಬೇಕೆಂದು ರಾಜವಂಶಸ್ಥರು ನ್ಯಾಯಾಲಯದ ಮೊರೆ ಹೋಗಿದ್ದರು. 1996ರಲ್ಲಿ ಕಾಯಿದೆ ಅನುಷ್ಠಾನಕ್ಕೆ ತಂದು ಅರಮನೆಯ ಜಾಗವನ್ನು ವಶಪಡಿಸಿಕೊಳ್ಳಲು ಸರ್ಕಾರ ತೀರ್ಮಾನಿಸಿದ್ದು, ಈ ವಿಚಾರ ನ್ಯಾಯಾಲಯದ ಮೆಟ್ಟಿಲೇರಿತು.

ಇಂತಹ ಸನ್ನಿವೇಶದಲ್ಲಿ ಸರ್ಕಾರ ವಶಪಡಿಸಿಕೊಂಡ ಜಾಗಕ್ಕೆ ಪರಿಹಾರ ನೀಡಿದರೆ ಅರಮನೆಯ ಹಕ್ಕು ರಾಜವಂಶಸ್ಥರಿಗೆ ಹೋಗುತ್ತದೆ ಎಂದು ಇದುವರೆಗೂ ಪರಿಹಾರ ನೀಡಿರಲಿಲ್ಲ. ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ರಾಜ



ವಂಶಸ್ಥರು ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು.

ನ್ಯಾಯಾಲಯ ಎರಡು ಹಂತಗಳಲ್ಲಿ ತೀರ್ಪು ನೀಡಿ, ಪರಿಹಾರ ನೀಡುವಂತೆ ಆದೇಶ ಮಾಡಿತ್ತು. ಜೆಡಿಎಸ್–ಕಾಂಗ್ರೆಸ್ ಆಡಳಿತದಲ್ಲಿ ಪರಿಹಾರ ನೀಡಲು ತೀರ್ಮಾನ ಕೈಗೊಂಡಿತ್ತು. ನಂತರ ಬಂದ ಬೊಮ್ಮಾಯಿ ಸರ್ಕಾರ 1996ರ ಕಾಯಿದೆಯಂತೆ ಹಕ್ಕುಗಳನ್ನು ರಾಜವಂಶಸ್ಥರಿಗೆ ನೀಡಲಾಗುವುದಿಲ್ಲ ಎಂಬ ತೀರ್ಮಾನ ಕೈಗೊಂಡಿತ್ತು.

ನಂತರ ಬಂದ ಸಿದ್ದರಾಮಯ್ಯ ಸರ್ಕಾರ ಸುಪ್ರೀಂ ಕೋರ್ಟ್ ತೀರ್ಪನ್ನು ಆಧರಿಸಿ ಪರಿಹಾರ ನೀಡಲು ಮಾರ್ಚ್ 15, 2024 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಂಡಿದ್ದಲ್ಲದೆ, ಒಂದು ಗಡುವಿನೊಳಗೆ 1,400 ಕೋಟಿ ರೂ. ಮೌಲ್ಯದ ಟಿಡಿಆರ್ ಹಕ್ಕು ನೀಡುವಂತೆ ಸಭೆ ನಿರ್ಣಯಿಸಿತು.

ಚುನಾವಣಾ ವೇಳಾಪಟ್ಟಿ ಪ್ರಕಟಕ್ಕೂ ಮುನ್ನವೇ ನಗರಾಭಿವೃದ್ಧಿ ಇಲಾಖೆ ತರಾತುರಿಯಲ್ಲಿ ಸಂಪುಟದ ತೀರ್ಮಾನವನ್ನು ಆದೇಶದ ರೂಪದಲ್ಲಿ ಜಾರಿಗೊಳಿಸಿದೆ.

ಅಂದಿನ ಕುಮಾರಸ್ವಾಮಿ ಸರ್ಕಾರದಲ್ಲಿ, ಯಾರು ಪ್ರಭಾವ ಬೀರಿ ಪರಿಹಾರ ಕೊಡಿಸಲು ಮುಂದಾಗಿದ್ದರೋ ಅವರೇ ಹಾಲಿ ಸರ್ಕಾರದಲ್ಲಿ ಪ್ರಭಾವ ಬೀರಿ ಸುಪ್ರೀಂ ಕೋರ್ಟ್ ತೀರ್ಪು ಮುಂದಿಟ್ಟು ರಾಜವಂಶಸ್ಥರಿಗೆ 1,400 ಕೋಟಿ ರೂ. ಮೌಲ್ಯದ ಟಿಡಿಆರ್ ನೀಡಲು ಯಶಸ್ವಿಯಾಗಿದ್ದಾರೆ. ರಾಜವಂಶಸ್ಥರಿಗೆ ಈ ದೊಡ್ಡ ಪ್ರಮಾಣದ ಟಿಡಿಆರ್ ನೀಡಿರುವುದರಿಂದ ಅವರಾಗಲೀ ಅಥವಾ ಅವರು ಬೇರೆಯವರಿಗೆ ಈ ಹಕ್ಕನ್ನು ನೀಡಿದರೆ, ಅಂಥವರು 13.91 ಲಕ್ಷ ಚದರಡಿ ವಿಸ್ತೀರ್ಣದ ವಾಣಿಜ್ಯ ಕಟ್ಟಡವನ್ನು ಬೇರೆಡೆ ನಿರ್ಮಿಸಿಕೊಳ್ಳಬಹುದಾಗಿದೆ.

ಇಂತಹ ಟಿಡಿಆರ್‌ಗಳಿಗೆ ಭಾರಿ ಬೇಡಿಕೆ ಇದೆ. ಬಿಲ್ಡರ್‌ಗಳು ಇದನ್ನು ಖರೀದಿ ಮಾಡಿ, ನಗರದ ಕೇಂದ್ರ ಭಾಗಗಳಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ ಬಳಕೆ ಮಾಡಿಕೊಳ್ಳುತ್ತಾರೆ. ಜೆ.ಎಚ್.ಪಟೇಲ್ ಸರ್ಕಾರದಲ್ಲಿ ಅಂದಿನ ಉಪಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಹಾಗೂ ಕಾನೂನು ಸಚಿವ ಎಂ.ಸಿ.ನಾಣಯ್ಯ, ರಾಜವಂಶಸ್ಥರ ಆಸ್ತಿಯನ್ನು ಸರ್ಕಾರದ ವಶಕ್ಕೆ ಪಡೆಯಲು ಉಭಯ ಸದನಗಳ ಅನುಮತಿ ಪಡೆದು 1996ರಲ್ಲಿ ಕಾಯಿದೆ ರೂಪಿಸಿದ್ದರು. ಈ ಕಾಯಿದೆ ಪ್ರಶ್ನಿಸಿ ರಾಜವಂಶಸ್ಥರು ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು, ಅದು ಇನ್ನೂ ಇತ್ಯರ್ಥವಾಗಿಲ್ಲ.

ಇದರ ನಡುವೆ ಅಂದು ಕಾಯಿದೆ ರೂಪಿಸಿದವರು ಇಂದು ಮುಖ್ಯಮಂತ್ರಿ ಆಗಿದ್ದಾರೆ. ಅವರ ಆಡಳಿತದಲ್ಲೇ ಸುಪ್ರೀಂಕೋರ್ಟ್ ನೀಡಿರುವ ಆದೇಶವನ್ನು ಪಾಲನೆ ಮಾಡುವ ಮೂಲಕ ರಾಜವಂಶಸ್ಥರಿಗೆ ಈ ದೊಡ್ಡ ಮೊತ್ತದ ಟಿಡಿಆರ್ ನೀಡುತ್ತಿದ್ದಾರೆ.

## ಇಂದು ತ್ರಿವಿಧ–ರಾಜ್ಯಮಟ್ಟದ ಮ್ಯಾನೇಜ್ಮೆಂಟ್ ಫೆಸ್ಟ್

ಮೈಸೂರು, ಏ.18(ಜಿಎ)–ಮೈಸೂರಿನ ವಿಜಯನಗರ ಎರಡನೇ ಹಂತದಲ್ಲಿರುವ ಟ್ರಿನಿಟಿ ಕಾಲೇಜಿನಲ್ಲಿ ಏ.19ರಂದು ತ್ರಿವಿಧ–ರಾಜ್ಯಮಟ್ಟದ ಮ್ಯಾನೇಜ್ಮೆಂಟ್ ಫೆಸ್ಟ್ ಆಯೋಜಿಸಲಾಗಿದೆ ಎಂದು ಪ್ರಾಂಶುಪಾಲೆ ಶಮಾ ಮಿಲ್ಟನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಲೇಜಿನ ಸಭಾಂಗಣದಲ್ಲಿ ಬೆಳಗ್ಗೆ 9.30ಕ್ಕೆ ಕಾರ್ಯಕ್ರಮ ಉದ್ಘಾಟಿಸಲಾಗುವುದು. ಭಾರತೀಯ ಅಂಧರ ಕ್ರಿಕೆಟ್ ಮಾಜಿ ನಾಯಕ ಶೇಖರ್ ನಾಯ್ಕ್, ಇನ್ಫೋ ಫಿನ್ ಮಂಡಳಿ ಅಧ್ಯಕ್ಷ ಅಚ್ಯುತ ಬಿ.ಕೃಷ್ಣಮೂರ್ತಿ ಅತಿಥಿಗಳಾಗಿ ಆಗಮಿಸಲಿದ್ದಾರೆ. ಉತ್ಕರ್ಷ್, ನವ ಸೃಜನ್, ಪ್ರಾಹರತಿ ಮತ್ತು ಸಾಂಸ್ಕೃತಿಕ ಎಂಬ ಹೆಸರಿನ ಸ್ಪರ್ಧೆಗಳು ನಡೆಯಲಿವೆ. ಆ ದಿನ ಸಂಜೆ 5ಕ್ಕೆ ನಾರ್ಥ್ ಅವೆನ್ಯೂ ಹೋಟೆಲ್‌ನಲ್ಲಿ ಸಾಂಸ್ಕೃತಿಕ ಉತ್ಸವ ನಡೆಯಲಿದ್ದು, ಮೈಸೂರು ಎಕ್ಸ್‌ಪ್ರೆಸ್ ಬ್ಯಾಂಡ್‌ನಿಂದ ಸಂಗೀತ ಪ್ರದರ್ಶನ, ನಿಖಿಲ್ ಭಾರದ್ವಾಜ್ ಅವರಿಂದ ಡಿಜೆ ಕಾರ್ಯಕ್ರಮ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರೊ.ಮಂಜು, ವಿದ್ಯಾರ್ಥಿ ಪ್ರಮುಖರಾದ ಆನ್ಲಿಲಾ, ಪ್ರಶಾಂತ್ ಉಪಸ್ಥಿತರಿದ್ದರು.



ಜಯಪುರ ಹೋಬಳಿ ಹಾರೋಹಳ್ಳಿ ಗ್ರಾಮದಲ್ಲಿ ಮೈಸೂರು–ಕೊಡಗು ಬಿಜೆಪಿ ಅಭ್ಯರ್ಥಿ ಯದುವೀರ್ ಪರ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ನಿಕಟಪೂರ್ವ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್ ನೇತೃತ್ವದಲ್ಲಿ ಮನೆ ಮನೆಗೆ ತೆರಳಿ ಮತಯಾಚನೆ ಮಾಡಲಾಯಿತು. ನಿಕಟಪೂರ್ವ ಜಿಲ್ಲಾ ಕಾರ್ಯದರ್ಶಿ ಭಾಗ್ಯಶ್ರೀ ಭಟ್, ಮೈಸೂರು ಮಹಾ ನಗರದ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಈರಪ್ಪ, ಕ್ಷೇತ್ರದ ಉಪಾಧ್ಯಕ್ಷ ಶ್ರೀಕಂಠಸ್ವಾಮಿ, ಕಾರ್ಯದರ್ಶಿ ಮಧುಕುಮಾರ್, ಜಯಪುರ ಮಹಾಶಕ್ತಿ ಕೇಂದ್ರದ ನಿಕಟಪೂರ್ವ ಅಧ್ಯಕ್ಷ ಸತೀಶ್, ಕಡಕೊಳ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಮಲ್ಲೇಶ್, ಗ್ರಾಮದ ಯಜಮಾನರು, ಮುಖಂಡರು ಉಪಸ್ಥಿತರಿದ್ದರು.

## ಚುನಾವಣೆಯಲ್ಲಿ ತಮ್ಮನ್ನು ಬೆಂಬಲಿಸುವಂತೆ ಡಾ.ಹೆಚ್.ಎಂ.ನಂಜುಂಡಸ್ವಾಮಿ ಮನವಿ

ಮೈಸೂರು, ಏ.18(ಜಿಎ)–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ತಾವು ಸಮಾಜವಾದಿ ಜನತಾ ಪಕ್ಷ– ಕರ್ನಾಟಕದಿಂದ ಸ್ಪರ್ಧಿಸಿದ್ದು, ರೈತನ ಮಗನಾಗಿರುವ ಕಾರಣ ಎಲ್ಲರ ಕಷ್ಟದ ಅರಿವಿದೆ. ಹೀಗಾಗಿ ಮತದಾರರು ತಮ್ಮನ್ನು ಚುನಾಯಿಸಬೇಕೆಂದು ಡಾ.ಎಚ್.ಎಂ. ನಂಜುಂಡಸ್ವಾಮಿ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಬಹುತೇಕ ಜಿಲ್ಲೆಗಳು, ಅದರಲ್ಲಿಯೂ ಮೈಸೂರು– ಕೊಡಗಿನ ಜನರು ಆರ್ಥಿಕವಾಗಿ ದುರ್ಬಲರು, ಶೈಕ್ಷಣಿಕವಾಗಿ ಹಿಂದುಳಿದವರಾಗಿದ್ದಾರೆ. ಇವರ ಮಕ್ಕಳಿಗೆ ಮೂಲಸೌಕರ್ಯ ದೊರಕುತ್ತಿಲ್ಲ. ಹೀಗಾಗಿ ತಾವು ಆಯ್ಕೆಯಾದಲ್ಲಿ ಈ ಸಮಸ್ಯೆ ಹೋಗಲಾಡಿಸಲು ಶ್ರಮಿಸುವುದಾಗಿ ಭರವಸೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ಮುಖಂಡರಾದ ಆಲಂಬೂರು ನಂಜುಂಡಸ್ವಾಮಿ, ದಿವಾಕರ್ ಉಪಸ್ಥಿತರಿದ್ದರು.

# ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ದಿನೇ ದಿನೆ ಕುಸಿಯುತ್ತಿದೆ; ಜನರಲ್ಲಿ ಆತಂಕ ಹೆಚ್ಚುತ್ತಿದೆ



ರಾಜ್ಯ ಸರ್ಕಾರ ಕಾವೇರಿ ನದಿ ವ್ಯಾಪ್ತಿಯ ಅಣೆಕಟ್ಟೆಗಳಲ್ಲಿ ನೀರು ಉಳಿಸಿಕೊಳ್ಳದ ಪರಿಣಾಮ ಈಗ ಪರದಾಡುವಂತಾಗಿದೆ. ನಾಲೆಗಳಿಗೆ ನೀರು ಹರಿಸದಿದ್ದರಿಂದ ಅಂತರ್ಜಲ ಕುಸಿದಿದೆ. ಮುಂಗಾರು ಕೈಕೊಟ್ಟರೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಸಮರ್ಪಕ ಮಾಹಿತಿ ಕೊಡದೆ ತಮಿಳುನಾಡಿಗೆ ನೀರು ಹರಿಸಿದರು. ಮೇಕೆದಾಟು ಹೆಸರು ಹೇಳಿ ಅಧಿಕಾರ ಪಡೆದ ಜಲಸಂಪನ್ಮೂಲ ಸಚಿವರು ರಾಜಕೀಯಕ್ಕಾಗಿ ನೀರು ಹರಿಸಿದ್ದು ದೊಡ್ಡ ಸಾಧನೆ.

– ಕೆ.ಎಸ್.ನಂಜುಂಡೇಗೌಡ ರೈತ ಹೋರಾಟಗಾರ

ಸದ್ಯದ ಪರಿಸ್ಥಿತಿಯಲ್ಲಿ ಅಣೆಕಟ್ಟೆಯಲ್ಲಿ ಸಂಗ್ರಹವಾಗಿರುವ ನೀರಿನ ಲಭ್ಯತೆ ನೋಡಿದರೆ ಮಂಡ್ಯ, ಮೈಸೂರು, ರಾಮನಗರ, ಬೆಂಗಳೂರು ಸೇರಿದಂತೆ ಇತರೆ ಜಿಲ್ಲೆಗಳಿಗೆ ಕುಡಿಯುವ ನೀರಿಗೆ ಮಾತ್ರ ನಮ್ಮಲ್ಲಿ ಇರುವ ನೀರನ್ನು ಬಳಸಿಕೊಳ್ಳಬಹುದಾಗಿದೆ ಇದನ್ನು ಹೊರತು ಪಡಿಸಿ ವ್ಯವಸಾಯಕ್ಕೆ ಸದ್ಯ ಇರುವ ನೀರು ಬಿಡಲು ಸಾಧ್ಯವಿಲ್ಲ ಮುಂದಿನ ದಿನಗಳಲ್ಲಿ ಮಳೆಯಾಗಿ ಅಣೆಕಟ್ಟೆಗೆ ಸಾಕಷ್ಟು ಒಳ ಹರಿವು ಬಂದರೆ ವ್ಯವಸಾಯಕ್ಕೆ ನೀರು ಬಿಡಬಹುದು

– ಕೆ.ರಘುರಾಂ, ಅಧೀಕ್ಷಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ, ಮಂಡ್ಯ ವೃತ್ತ

ಕಳೆದ 11 ವರ್ಷದಲ್ಲಿ ನೀರಿನ ಮಟ್ಟ (ಏ.11ಕ್ಕೆ)

| ವರ್ಷ | ಅಡಿ | ಒಳಹರಿವು (ಕ್ಯೂಸೆಕ್) | ಹೊರಹರಿವು (ಕ್ಯೂಸೆಕ್) |
|---|---|---|---|
| 2012 | 92.52 | 638 | 4581 |
| 2013 | 71.08 | 319 | 670 |
| 2014 | 95.67 | 121 | 612 |
| 2015 | 95.70 | 273 | 462 |
| 2016 | 81.39 | 137 | 2.121 |
| 2017 | 75.24 | 251 | 873 |
| 2018 | 78.44 | 75 | 4.491 |
| 2019 | 92.65 | 107 | 332 |
| 2020 | 103.84 | 698 | 708 |
| 2021 | 100.02 | 81 | 458 |
| 2022 | 104.65 | 449 | 1.223 |
| 2023 | 93.88 | 426 | 1.043 |
| 2024 | 83.91 | 95 | 1.258 |

ಶ್ರೀರಂಗಪಟ್ಟಣ,ಏ.18(ವಿನಯ್ ಕಾರೇಕುರ)–ರಾಜ್ಯದಲ್ಲಿ ಹಿಂದೆಂದೂ ಕಂಡಿರದಷ್ಟು ಭೀಕರ ಬರಗಾಲ ತಾಂಡವವಾಡುತ್ತಿದ್ದು ಕೋಟ್ಯಂತರ ಜನರ ಬದುಕಿಗೆ ಆಧಾರವಾಗಿರುವ ಕೃಷ್ಣರಾಜಸಾಗರ ಅಣೆಕಟ್ಟೆಯ ನೀರಿನ ಮಟ್ಟ ತೀವ್ರ ಕುಸಿದಿದ್ದು, ಕುಡಿಯುವ ನೀರಿಗೂ ಆತಂಕ ಪರಿಸ್ಥಿತಿ ಉಂಟಾಗಿದೆ. ಗುರುವಾರ ಬೆಳಿಗ್ಗೆ ಕೆಆರ್‌ಎಸ್ ನೀರಿನ ಮಟ್ಟ 82.94 ಅಡಿಗೆ ಕುಸಿದಿದ್ದು ಕಳೆದ ಏಳು ವರ್ಷದ ನಂತರ ಜಲಕ್ಷಾಮದ ಭೀಕರತೆಯನ್ನು ತೋರುತ್ತಿದೆ.

ಕಳೆದ ವರ್ಷ ಪೂರ್ವ ಮುಂಗಾರು ಹಾಗೂ ಮುಂಗಾರು ಕೈಕೊಟ್ಟ ಕಾರಣ 124.80 ಅಡಿ ಗರಿಷ್ಠ ಸಂಗ್ರಹದ ಅಣೆಕಟ್ಟೆಯಲ್ಲಿ 113 ಅಡಿ ನೀರು ಮಾತ್ರ ಸಂಗ್ರಹವಾಗಲು ಸಾಧ್ಯವಾಯಿತು. ಇನ್ನು 2023 ಏ.11ಕ್ಕೆ ಹೋಲಿಸಿದರೆ ಸುಮಾರು 10 ಅಡಿ ನೀರಿನ ಸಂಗ್ರಹ ಕಡಿಮೆ ಇದೆ. ಪ್ರಸ್ತುತ ಒಳಹರಿವು ಕೇವಲ 87 ಕ್ಯೂಸೆಕ್ ಇದ್ದರೆ, ಡ್ಯಾಂನಿಂದ 774 ಕ್ಯೂಸೆಕ್ ನೀರನ್ನು ಹೊರ ಬಿಡಲಾಗುತ್ತಿದೆ.

ಸದ್ಯದ ಪರಿಸ್ಥಿತಿಯಲ್ಲಿ ಅಣೆಕಟ್ಟೆಯಲ್ಲಿ ಸಂಗ್ರಹವಾಗಿರುವ ನೀರನ್ನು ಕುಡಿಯಲು ಮಾತ್ರ ಬಳಸಿಕೊಳ್ಳಬಹುದಾಗಿದೆ. ಆದಾಗ್ಯೂ ಮಂಡ್ಯ, ಮೈಸೂರು, ರಾಮನಗರ, ಬೆಂಗಳೂರು ಜನರು ಕುಡಿಯುವ ನೀರಿಗೆ ಈಗಾಗಲೇ ಪರಿತಪಿಸುವಂತಾಗಿದೆ. ಮುಂದಿನ ದಿನಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಮಳೆ ಬಾರದಿದ್ದರೆ ಕುಡಿಯುವ ನೀರಿಗೆ ಮತ್ತಷ್ಟು ಹಾಹಾಕಾರ ಉಂಟಾಗುವ ಸಾಧ್ಯತೆ ಇದೆ. ಅಣೆಕಟ್ಟೆಯಲ್ಲಿರುವ ನೀರನ್ನು 60 ಅಡಿವರೆಗೆ ಮಾತ್ರ ಬಳಸಲು ಅವಕಾಶ ಇದೆ. ಅಂದರೆ ಇನ್ನು ಕೇವಲ 8 ಟಿಎಂಸಿ ನೀರನ್ನು ಬಳಸಬಹುದು.

ಅಣೆಕಟ್ಟೆಯಲ್ಲಿ ನೀರು ಕುಸಿದಿರುವ ಕಾರಣ ನಾಲೆಗಳಿಗೆ ನೀರು ಹರಿಸಲು ಸಾಧ್ಯವಾಗದಿರುವುದರಿಂದ ಕೆ.ಆರ್.ಸಾಗರ ಅಣೆಕಟ್ಟೆ ವ್ಯಾಪ್ತಿಯ ರೈತರು ಬೆಳೆ ಬೆಳೆಯದಂತೆ ರಾಜ್ಯ ಸರ್ಕಾರ ಸೂಚಿಸಿದೆ. ಆದರೆ ನಾಲೆಗೆ ನೀರು ಹರಿಸದ ಪರಿಣಾಮ ನಾಲಾ ವ್ಯಾಪ್ತಿಯಲ್ಲಿ ಅಂತರ್ಜಲ ಕುಸಿತಗೊಂಡಿದೆ. ಪರಿಣಾಮ ಬೋರ್‌ವೆಲ್‌ಗಳು ಬತ್ತಿ ಹೋಗಿವೆ. ಪ್ರತಿ ಗ್ರಾಮದಲ್ಲಿ ಹತ್ತು ಬೋರ್‌ವೆಲ್ ಕೊರೆಸಿದರೆ ಎಂಟರಲ್ಲಿ ನೀರೇ ಬರುತ್ತಿಲ್ಲ. ಇದು ಜಲಕ್ಷಾಮದ ಭೀಕರತೆಯನ್ನು ಸೂಚಿಸುತ್ತದೆ. ಜಾನುವಾರುಗಳಿಗೆ ನೀರು ಹಾಗೂ ಮೇವಿಗಾಗಿ ರೈತರು ಪರದಾಡುತ್ತಿದ್ದಾರೆ. ಡ್ಯಾಂನ ಇತಿಹಾಸ ಗಮನಿಸಿದರೆ 2003 ಎಪ್ರಿಲ್‌ನಲ್ಲಿ ನೀರಿನ ಮಟ್ಟ 65.90 ಅಡಿ ತಲುಪಿದ್ದೇ ಕನಿಷ್ಠ ಮಟ್ಟದ ದಾಖಲೆಯಾಗಿದೆ.

ಕೆ.ಆರ್.ಸಾಗರ ಅಣೆಕಟ್ಟು ವ್ಯಾಪ್ತಿಯಲ್ಲಿರುವ ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣ ಕಾಮಗಾರಿ ಪ್ರಗತಿಯ ಹಂತದಲ್ಲಿದ್ದು, ಹಲವಾರು ತಿಂಗಳಿನಿಂದ ನೀರು ಹರಿದಿಲ್ಲ. ಇದರಿಂದ ರೈತರು ಚಿಂತಾಕ್ರಾಂತರಾಗಿದ್ದಾರೆ. ಈ ವ್ಯಾಪ್ತಿಯಲ್ಲಿ ಹೆಚ್ಚು ಕಬ್ಬು ಬೆಳೆಯಲಾಗುತ್ತಿದ್ದು, ಅಣೆಕಟ್ಟೆಯಲ್ಲಿ ನೀರಿನ ಕೊರತೆ ಮತ್ತು ಆಧುನೀಕರಣ ಕಾಮಗಾರಿ ಹಿನ್ನೆಲೆಯಲ್ಲಿ ರೈತರಿಗೆ ಅಪಾರ ನಷ್ಟ ಉಂಟಾಗಿದೆ. ಬರದ ಭೀಕರತೆ ಉಂಟಾಗಿದ್ದರೂ ಕೂಡ ಸರ್ಕಾರ ಬರ ಪರಿಹಾರ ಘೋಷಣೆ ಮಾಡಿಲ್ಲ. ಇತ್ತ ಕಬ್ಬು ಬೆಳೆ ಇಲ್ಲದೆ ಜಿಲ್ಲೆಯಲ್ಲಿನ ಸಕ್ಕರೆ ಕಾರ್ಖಾನೆಗಳು ಮತ್ತೆ ಮುಚ್ಚುವ ಆತಂಕ ಮನೆ ಮಾಡಿದೆ.

# ಸ್ಟಾರ್ ಚಂದ್ರು ಪರ ಮಳವಳ್ಳಿಯಲ್ಲಿ ನಟ ದರ್ಶನ್ ಭರ್ಜರಿ ರೋಡ್ ಶೋ

## ನಾನು ಯಾವುದೇ ಪಕ್ಷದ ಪರ ಅಲ್ಲ, ವ್ಯಕ್ತಿಯ ಪರ ಪ್ರಚಾರ; ಮಂಡ್ಯ ಜನರು ಸ್ಟಾರ್ ಚಂದ್ರು ಬೆಂಬಲಿಸಬೇಕು: ಮನವಿ

ಮಳವಳ್ಳಿ,ಏ.18– ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್‌ಚಂದ್ರು) ಪರ ನಟ ಚಾಲೆಂಜಿಂಗ್ ಸ್ಟಾರ್ ದರ್ಶನ್ ಮಳವಳ್ಳಿ ತಾಲ್ಲೂಕಿನಲ್ಲಿ ಭರ್ಜರಿ ರೋಡ್‌ಶೋ ನಡೆಸಿದರು.

ಗುರುವಾರ ಬೆಳಿಗ್ಗೆ 11 ಗಂಟೆ ವೇಳೆಗೆ ಮಳವಳ್ಳಿ ತಾಲೂಕಿನ ಹಲಗೂರಿಗೆ ಆಗಮಿಸಿದ ನಟ ದರ್ಶನ್‌ರನ್ನು ಕ್ಷೇತ್ರದ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಬರಮಾಡಿಕೊಂಡರು. ಹಲಗೂರಿನಲ್ಲಿ ನೆರೆದಿದ್ದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ದರ್ಶನ್‌ರನ್ನು ಆತ್ಮೀಯವಾಗಿ ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ಮತದಾರರನ್ನುದ್ದೇಶಿಸಿ ಮಾತನಾಡಿದ ನಟ ದರ್ಶನ್, ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಟಾರ್‌ಚಂದ್ರು ಸ್ಪರ್ಧಿಸಿದ್ದು, ಅವರನ್ನು ಗೆಲ್ಲಿಸಿಕೊಡಿ. ಮಂಡ್ಯ ಜಿಲ್ಲೆಯ ಅಭಿವೃದ್ಧಿಗೆ ಸ್ಟಾರ್‌ಚಂದ್ರು ಶ್ರಮಿಸಲಿದ್ದಾರೆ. ಚಂದ್ರು ಗೆದ್ದರೆ ಈ ಭಾಗದ ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ ಹಾಗೂ ಕೆ.ಎಂ.ಉದಯ್‌ಗೌಡ ಅವರ ಕೈಬಲಪಡಿಸಿದಂತಾಗುತ್ತದೆ ಎಂದು ಹೇಳಿದರು.

ಮಂಡ್ಯ ಲೋಕಸಭಾ ಕ್ಷೇತ್ರದಿಂದ ಸ್ಟಾರ್ ಚಂದ್ರು ಸಂಸದರಾಗಿ ಆಯ್ಕೆಯಾದರೆ ಉತ್ತಮ ಕೆಲಸ ಮಾಡುವ ವಿಶ್ವಾಸವಿದೆ. ನನಗೆ ಆತ್ಮೀಯರಾದ ಚಂದ್ರು ನನ್ನ ಪರ ಚುನಾವಣಾ ಪ್ರಚಾರಕ್ಕೆ ಬರುವಂತೆ ಮನವಿ ಮಾಡಿದ್ದರು. ಆದರೆ ಸುಮಲತಾ ಅಂಬರೀಷ್ ಸ್ಪರ್ಧೆ ಮಾಡಿದರೆ ಚಂದ್ರು ಪರ ಚುನಾವಣಾ ಪ್ರಚಾರಕ್ಕೆ ನಾನು ಬರುತ್ತಿರಲಿಲ್ಲ. ಆದರೆ ಸುಮಲತಾ ಅವರು ಈ ಬಾರಿ ಚುನಾವಣಾ ಕಣದಿಂದ ಹಿಂದೆ ಸರಿದಿರುವುದರಿಂದ ನಾನು ಸ್ಟಾರ್ ಚಂದ್ರು ಪರ ಚುನಾವಣಾ ಪ್ರಚಾರಕ್ಕೆ ಬಂದಿದ್ದೇನೆ ಎಂದರು.

ಕಳೆದ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿದ್ದ ಸುಮಲತಾ ಪರ ಕ್ಷೇತ್ರದ ಪ್ರತಿ ಗ್ರಾಮಗಳಿಗೂ ಭೇಟಿ ಕೊಟ್ಟಿದ್ದೆ. ಅದರಂತೆ ಈ ಬಾರಿಯೂ ಸಹ ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಚಂದ್ರು ಪರ ಚುನಾವಣಾ ಪ್ರಚಾರಕ್ಕೆ ಆಗಮಿಸಿದ್ದೇನೆ. ನಾನು ಯಾವುದೇ ಪಕ್ಷವನ್ನು ನೋಡಿ ಚುನಾವಣಾ ಪ್ರಚಾರಕ್ಕೆ ಹೋಗುವುದಿಲ್ಲ. ಬದಲಾಗಿ ಸ್ನೇಹಿತರು ಅಥವಾ ಪ್ರಚಾರಕ್ಕೆ ನನಗೆ ಮೊದಲು ಯಾರು ಆಹ್ವಾನಿಸುತ್ತಾರೋ ಅವರಿಗೆ ಮೊದಲ ಆದ್ಯತೆ ಕೊಡುತ್ತೇನೆ ಎಂದು ಸ್ಪಷ್ಟಪಡಿಸಿದರು.

ನಾನು ಯಾವುದೇ ಪಕ್ಷದ ಪರ ಎಂದೂ ಪ್ರಚಾರ ನಡೆಸಿಲ್ಲ. ಜೊತೆಗೆ ಯಾವುದೇ ಪಕ್ಷದ ಶಾಲನ್ನು ಸಹ ನಾನು ಇದುವರೆಗೂ ಹಾಕಿಕೊಂಡಿಲ್ಲ. ಸ್ಟಾರ್ ಚಂದ್ರು ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ಒಳ್ಳೆಯ ಅಭ್ಯರ್ಥಿಯಾದ ಕಾರಣ ಅವರ ಆಹ್ವಾನದ ಮೇಲೆ ನಾನು ಪ್ರಚಾರಕ್ಕೆ ಬಂದಿದ್ದೇನೆ. ಸುಮಲತಾ ಸ್ಪರ್ಧಿಸದಿದ್ದರೆ ನನ್ನ ಪರ ಚುನಾವಣಾ ಪ್ರಚಾರಕ್ಕೆ ಬರುವಂತೆ ಹಲವು ಬಾರಿ ಮನವಿ ಮಾಡಿದ್ದರು. ಅವರ ಮನವಿಗೆ ಪುರಸ್ಕರಿಸಿ ಇಂದು ಪ್ರಚಾರಕ್ಕೆ ಬಂದಿದ್ದು, ಮಂಡ್ಯ ಕ್ಷೇತ್ರದ ಉಳಿದ ತಾಲೂಕುಗಳಿಗೆ ಪ್ರಚಾರಕ್ಕೆ ಬರುವ ಕುರಿತು ಶೀಘ್ರದಲ್ಲೇ ಇಲ್ಲಿನ ಶಾಸಕರುಗಳು ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದು ತಿಳಿಸಿದರು.





ನಟ ದರ್ಶನ್ ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್‌ಚಂದ್ರು ಪರ ಮಳವಳ್ಳಿಯ ವಿವಿಧೆಡೆ ಭರ್ಜರಿ ರೋಡ್‌ಷೋ ನಡೆಸಿದರು. ಈ ಸಂದರ್ಭದಲ್ಲಿ ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಕೆ.ಎಂ.ಉದಯ್‌ಗೌಡ ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು. ಮತ್ತೊಂದು ಚಿತ್ರದಲ್ಲಿ ನಟ ದರ್ಶನ್ ರೋಡ್‌ಶೋ ವೇಳೆ ಸೇರಿದ್ದ ಜನಸಾಗರವನ್ನು ಕಾಣಬಹುದು.

ಶಾಸಕ ಪಿ.ಎಂ.ನರೇಂದ್ರಸ್ವಾಮಿ ಮಾತನಾಡಿ, ಸ್ಟಾರ್ ಚಂದ್ರು ಅವರನ್ನು ಗೆಲ್ಲಿಸುವ ಮೂಲಕ ಮಳವಳ್ಳಿ ಕ್ಷೇತ್ರದ ಅಭಿವೃದ್ಧಿಗೆ ನಾಂದಿ ಹಾಡಬೇಕಿದೆ. ತಾಲೂಕಿನ ಅಭಿವೃದ್ಧಿಗಾಗಿ ನಾವೆಲ್ಲಾ ಒಗ್ಗೂಡಿ ಶ್ರಮಿಸಬೇಕಿದೆ. ಹಾಗಾಗಿ ಮಂಡ್ಯ ಜಿಲ್ಲೆಯ ಮಣ್ಣಿನ ಮಗ ಹಾಗೂ ಸ್ವಾಭಿಮಾನಿ ವ್ಯಕ್ತಿತ್ವದ ಚಂದ್ರು ಅವರನ್ನು ಗೆಲ್ಲಿಸುವುದು ನಮ್ಮ ಆದ್ಯ ಕರ್ತವ್ಯ ಎಂದರು.

ಮಂಡ್ಯ ಜಿಲ್ಲೆಯ ಮತದಾರರು ಸ್ವಾಭಿಮಾನಿಗಳು ಎಂಬುದು ಹಲವು ಬಾರಿ ಸಾಬೀತಾಗಿದೆ. ಈ ಬಾರಿಯೂ ಮಂಡ್ಯ ಜಿಲ್ಲೆಯ ಸ್ವಾಭಿಮಾನ ಮರುಕಳಿಸಬೇಕು. ಜಿಲ್ಲೆಯವರೇ ಆದ ಚಂದ್ರು ಅವರಿಗೆ ನಿಮ್ಮ ಮತ ನೀಡಿ ಮಂಡ್ಯ ಜಿಲ್ಲೆಯ ಹೊರಗಿನವರಿಗೆ ಯಾವುದೇ ಕಾರಣಕ್ಕೂ ಆದ್ಯತೆ ಕೊಡಬಾರದು. ಕಾಂಗ್ರೆಸ್ ಪಕ್ಷದ ಹಲವು ಗ್ಯಾರಂಟಿಗಳು ಈಗಾಗಲೇ ಜನರ ಮನೆ ಬಾಗಿಲಿಗೆ ತಲುಪಿದೆ. ಸ್ಟಾರ್‌ಚಂದ್ರು ಗೆಲುವಿನ ಮೂಲಕ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಇನ್ನಷ್ಟು ಗ್ಯಾರಂಟಿಗಳು ನಿಮ್ಮ ಕೈ ಬಲಪಡಿಸಲಿವೆ. ಹಾಗಾಗಿ ನಿಮ್ಮ ಕೈಬಲಪಡಿಸಲು ಮತದಾರರು ನಮ್ಮ ಕೈಗಳಿಗೆ ಮತ ನೀಡುವ ಮೂಲಕ ಶಕ್ತಿ ತುಂಬಿ ಎಂದು ಮನವಿ ಮಾಡಿದರು.

ತನ್ನದೇ ಆದ ಅಭಿಮಾನಿಗಳ ಪಡೆಯನ್ನು ಹೊಂದಿರುವ ನಟ ದರ್ಶನ್ ಅವರು ಕಳೆದ ಬಾರಿಯೂ ಸಹ ಮಂಡ್ಯದಲ್ಲಿ ಚುನಾವಣಾ ಪ್ರಚಾರ ಮಾಡಿ ಸುಮಲತಾ ಅಂಬರೀಷ್‌ರನ್ನು ಗೆಲ್ಲಿಸಿದ್ದಾರೆ. ಹಾಗೆಯೇ ಈ ಬಾರಿಯೂ ಸಹ ಸ್ವಾಭಿಮಾನದ ಮತ ಕೇಳಲು ಮಂಡ್ಯದಲ್ಲಿ ಚಂದ್ರು ಪರ ಪ್ರಚಾರ ಮಾಡುತ್ತಿದ್ದು, ಕಳೆದ ಬಾರಿ ಗೆಲ್ಲಿಸಿದಂತೆ ದರ್ಶನ್ ಅವರ ಬೆಂಬಲದಿಂದ ಚಂದ್ರು ಗೆದ್ದೇ ಗೆಲ್ಲುವರು ಎಂದು ಹೇಳಿದರು.

**ಇಡೀ ದಿನ ಭರ್ಜರಿ ರೋಡ್‌ಶೋ:** ಹಲಗೂರಿನಿಂದ ರೋಡ್‌ಶೋ ಮೂಲಕ ತೊರೆಕಾಡನಹಳ್ಳಿ, ಹುಸ್ಕೂರು, ಹಾಡ್ಲಿ ಗೇಟ್ ಬಳಿ ಭರ್ಜರಿ ಮತಬೇಟೆ ನಡೆಸಿದ ದರ್ಶನ್, ಆ ಬಳಿಕ ಬೆಳಕವಾಡಿ, ಬಿ.ಜಿ.ಪುರ, ಸರಗೂರು ಹ್ಯಾಂಡ್‌ಪೋಸ್ಟ್, ಪೂರಿಗಾಲಿಯಲ್ಲಿ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ ದರ್ಶನ್ ಭರ್ಜರಿ ಮತಬೇಟೆ ನಡೆಸಿದರು.

ಪೂರಿಗಾಲಿಯಲ್ಲಿ ಶಾಸಕ ನರೇಂದ್ರಸ್ವಾಮಿ ನಿವಾಸದಲ್ಲಿ ಮಧ್ಯಾಹ್ನದ ಊಟ ಮುಗಿಸಿ ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಂಡ ನಂತರ ಟಿ.ಕಾಗೇಪುರದಿಂದ ಮತ್ತೆ ದರ್ಶನ್ ರೋಡ್‌ಶೋ ಆರಂಭಿಸಿದರು. ದುಗ್ಗನಹಳ್ಳಿ, ಬಂಡೂರು ಹಿಟ್ಟನಹಳ್ಳಿ ಕೊಪ್ಪಲು, ಮಿಕ್ಕೆರೆ, ಕಿರುಗಾವಲು ಸಂತೆಮಾಳ, ಚನ್ನಪಿಳ್ಳೆ ಕೊಪ್ಪಲಿನಲ್ಲಿ ಭರ್ಜರಿ ರೋಡ್ ಶೋ ನಡೆಸಿದ ಬಳಿಕ ಸಂಜೆ ವೇಳೆಗೆ ಮಳವಳ್ಳಿ ಪಟ್ಟಣಕ್ಕೆ ಆಗಮಿಸಿದ ದರ್ಶನ್, ನೆರೆದಿದ್ದ ಸಾವಿರಾರು ಜನರನ್ನುದ್ದೇಶಿಸಿ ಮಾತನಾಡಿ, ಸ್ಟಾರ್‌ಚಂದ್ರು ಅವರನ್ನು ಬೆಂಬಲಿಸುವಂತೆ ಕರೆ ನೀಡಿದರು.

ರೋಡ್‌ಶೋನಲ್ಲಿ ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಕೆ.ಎಂ.ಉದಯ್‌ಗೌಡ, ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ, ಜಿ.ಪಂ. ಮಾಜಿ ಸದಸ್ಯ ವಿಶ್ವಾಸ್, ಹಲಗೂರು ಗ್ರಾ.ಪಂ. ಅಧ್ಯಕ್ಷೆ ರಕ್ಷಿತಾ ಜೀವನ್ ಕುಮಾರ್, ಮಳವಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಪಿ.ರಾಜು, ಮಾಜಿ ಗ್ರಾ.ಪಂ. ಅಧ್ಯಕ್ಷರಾದ ನಿಟ್ಟೂರು ಮರಿಸ್ವಾಮಿ, ಹೆಚ್.ವಿ.ರಾಜು, ಮಂಡ್ಯ ಡಿಸಿಸಿ ಬ್ಯಾಂಕ್ ನಿರ್ದೇಶಕ ಅಶ್ವಿನ್‌ಕುಮಾರ್, ಹಲಗೂರು ಗ್ರಾ.ಪಂ. ಉಪಾಧ್ಯಕ್ಷೆ ಲತಾ ಮಹದೇವ್, ಜಿ.ಪಂ. ಮಾಜಿ ಸದಸ್ಯ ಚಂದ್ರಕುಮಾರ್ ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು.

## ಇಂದು, ನಾಳೆ ನೀರಿಲ್ಲ

ಮಂಡ್ಯ,ಏ.18– ನೀರು ಸೋರುವಿಕೆ ಕೊಳವೆ ಮಾರ್ಗದ ದುರಸ್ತಿ ಕಾಮಗಾರಿಯನ್ನು ಕೈಗೊಳ್ಳಬೇಕಾಗಿರುವುದರಿಂದ ಏಪ್ರಿಲ್ 19 ಹಾಗೂ 20 ರಂದು ಮಂಡ್ಯ ನಗರದಾದ್ಯಂತ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ನೀರು ಸರಬರಾಜು ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.



ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಪರ ಚುನಾವಣಾ ಪ್ರಚಾರಕ್ಕಾಗಿ ಆಗಮಿಸಿದ್ದ ಕಾಂಗ್ರೆಸ್ ಅಧಿನಾಯಕ ರಾಹುಲ್‌ಗಾಂಧಿ ಸ್ಟಾರ್‌ಚಂದ್ರು ಕೈ ಮೇಲೆತ್ತುವ ಮೂಲಕ ಕಾಂಗ್ರೆಸ್‌ಗೆ ಆಶೀರ್ವದಿಸಿ ಎಂದು ಮನವಿ ಮಾಡಿಕೊಂಡರು. ಈ ಸಂದರ್ಭದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ನರೇಂದ್ರಸ್ವಾಮಿ, ಉದಯ್‌ಗೌಡ, ತನ್ವೀರ್‌ಸೇಠ್, ರವಿಶಂಕರ್ ಹಾಗೂ ತಾ.ಪಂ. ಮಾಜಿ ಅಧ್ಯಕ್ಷ ತ್ಯಾಗರಾಜು ಉಪಸ್ಥಿತರಿದ್ದರು.

## ಕಾವೇರಿ ಉಳಿವಿಗಾಗಿ ಕುಮಾರಸ್ವಾಮಿಗೆ ಮತನೀಡಿ

**ಚಿನಕುರಳಿ:** ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಚುನಾವಣೆಯಲ್ಲಿ ಗೆದ್ದು ಮಂತ್ರಿಯಾದರೆ ಕಾವೇರಿ ಸಮಸ್ಯೆ ಬಗೆಹರಿಯಲಿದೆ. ಕಾವೇರಿಗಾಗಿ ಎಚ್.ಡಿ. ಕುಮಾರಸ್ವಾಮಿಗೆ ಮತನೀಡಿ ಎಂದು ಜಿಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ.ಅಶೋಕ್ ಮನವಿ ಮಾಡಿದರು.



ಸಮೀಪದ ಹೊನಗಾನಹಳ್ಳಿ, ಬೇಬಿ, ಕಣಿವೆಕೊಪ್ಪಲು, ಶಿಂಢಬೋಗನಹಳ್ಳಿ ಹಾಗೂ ಅಲ್ಪಳ್ಳಿ ಸೇರಿದಂತೆ ವಿವಿಧ ಗ್ರಾಮದಲ್ಲಿ ಎನ್‌ಡಿಎ ಅಭ್ಯರ್ಥಿ ಎಚ್.ಡಿ. ಕುಮಾರಸ್ವಾಮಿ ಅವರ ಪರ ಬಿರುಸಿನ ಪ್ರಚಾರ ನಡೆಸಿ ಎಚ್.ಡಿ.ಕುಮಾರಸ್ವಾಮಿ ಅವರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಸಾರಾಯಿ, ಒಂದಂಕಿ ಲಾಟರಿ ನಿಷೇಧ ಮಾಡುವ ಮೂಲಕ ಗ್ರಾಮೀಣದ ಪ್ರದೇಶದ ಮಹಿಳೆಯರು ನೆಮ್ಮದಿಯಿಂದ ಜೀವನ ನಡೆಸುವಂತೆ ಮಾಡಿದರು. ಸುಮಾರು 26 ಸಾವಿರ ಕೋಟಿ ಸಾಲಮನ್ನಾ ಮಾಡಿ ರೈತರಿಗೆ ನೆರವಾದರು. ಕುಮಾರಸ್ವಾಮಿ ಅವರು ಅಧಿಕಾರ ನಡೆಸಿದ ಅಷ್ಟು ದಿನವು ರೈತಪರ, ಜನಪರ, ದಲಿತ ಪರವಾದ ಆಡಳಿತ ನೀಡಿದ್ದಾರೆ ಎಂದರು. ಸಂದರ್ಭದಲ್ಲಿ ತಾಪಂ ಮಾಜಿ ಸದಸ್ಯ ಸಿ.ಎಸ್.ಗೋಪಾಲಗೌಡ, ಸಿ.ಕೆ.ಅಂಕೇಗೌಡ, ಕೆ.ಎಸ್.ಜಯರಾಮು, ಗ್ರಾಪಂ ಮಾಜಿ ಅಧ್ಯಕ್ಷರಾದ ಶಿಂಢಭೋಗನಹಳ್ಳಿ ನಾಗಣ್ಣ, ಸಿ.ಎಂ.ಕಾಳೇಗೌಡ, ಚಂದ್ರಶೇಖರಯ್ಯ, ತಮ್ಮಯ್ಯ, ನರಸಿಂಹೇಗೌಡ, ಅಲ್ಪಳ್ಳಿ ಗೋವಿಂದಯ್ಯ, ರಾಜೇಗೌಡ, ಸ್ವಾಮೀಗೌಡ, ಮಂಜು, ಚಿಕ್ಕಪಾಪಣ್ಣ ಮಂಜೇಶ್, ಮಂಗಳಮ್ಮ ಲೋಕೇಶ್, ಮಹದೇವಪ್ಪ, ಮೈಕ್‌ಮಹದೇವು, ಸ್ವಾಮಿ ಸೇರಿದಂತೆ ಹಲವರು ಹಾಜರಿದ್ದರು.

## ಮಂಡ್ಯದಲ್ಲಿ ತಂಪೆರೆದ ವರುಷದ ಮೊದಲ ಮಳೆ



**ಮಂಡ್ಯ:** ಕಳೆದ ಎರಡು ತಿಂಗಳಿನಿಂದ ಬೇಸಿಗೆಯ ಬವಣೆಯಿಂದ ಕಂಗೆಟ್ಟಿದ್ದ ಮಂಡ್ಯ ಜಿಲ್ಲೆಯ ಜನಕ್ಕೆ ವರ್ಷದ ಮೊದಲ ಮಳೆ ತಂಪೆರೆದಿದೆ. ಮಂಡ್ಯ ನಗರ, ಪಾಂಡವಪುರ, ಕೆ.ಆರ್.ಪೇಟೆ, ಶ್ರೀರಂಗಪಟ್ಟಣ ಸೇರಿದಂತೆ ಹಲವು ಭಾಗದಲ್ಲಿ 15 ನಿಮಿಷಗಳ ಕಾಲ ಮಿಂಚಿನಂತೆ ಸಂಜೆ 5ಗಂಟೆ ವೇಳೆಯಲ್ಲಿ ಮಳೆ ಸುರಿದಿದೆ. ಇದರಿಂದ ಬಿಸಿಲಿನ ಬವಣೆಯಿಂದ ಕಂಗೆಟ್ಟಿದ್ದ ಜನತೆಗೆ ಮಳೆ ಖುಷಿ ತರಿಸಿದೆ.

ಒಂದನೇ ಪುಟದಿಂದ

## ಮಗು ಅಪಹರಣ: ಪತ್ರಕರ್ತ ಸೇರಿ ಐವರ ಬಂಧನ

ಈ ತಂಡವು ಮಕ್ಕಳನ್ನು ಮಾರಾಟ ಮಾಡುವ ಜಾಲದ ಸಂಪರ್ಕ ಹೊಂದಿರುವುದು ಬಂಧಿತರ ಮೊಬೈಲ್ ವಶಪಡಿಸಿಕೊಂಡು ಪರಿಶೀಲಿಸಿದಾಗ ತಿಳಿದು ಬಂದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

**ವಿವರ:** ಬಿಹಾರದ ಗಜಾರಿಯಾ ಜಿಲ್ಲೆಯ ಅಲೆಮಾರಿ ಜನಾಂಗದ ಜೀತೆ ಮಂಡಲ್ ಮತ್ತು ರಾಮಡಲ್ಲಿ ದೇವಿ ದಂಪತಿ ಬಿಹಾರದಿಂದ ಬೆಂಗಳೂರಿನ ಥಣಿಸಂದ್ರಕ್ಕೆ ಬಂದು ನೆಲೆಸಿ ಜೇನು ಮಾರಾಟ ಮಾಡುತ್ತಿದ್ದರು. ಇವರ ಸಂಬಂಧಿಕರು ಮೈಸೂರಿನಲ್ಲಿದ್ದ ಕಾರಣದಿಂದ ಕಳೆದ 10 ದಿನದ ಹಿಂದೆ ತಿಂಗಳ ಹಸುಗೂಸಿನೊಂದಿಗೆ ಮೈಸೂರಿಗೆ ಆಗಮಿಸಿ ಹಿನಕಲ್ ಬಳಿ ರಿಂಗ್ ರಸ್ತೆ ಬದಿಯಲ್ಲಿ ಟೆಂಟ್ ನಿರ್ಮಿಸಿಕೊಂಡು ವಾಸಿಸುತ್ತಿದ್ದು, ಗ್ರಾಮಾಂತರ ಪ್ರದೇಶಕ್ಕೆ ತೆರಳಿ ಜೇನು ಇಳಿಸಿ ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದರು. ಕಳೆದ 40 ದಿನದ ಹಿಂದೆ ರಾಮಡಲ್ಲಿ ದೇವಿ ಅವರಿಗೆ ಗಂಡು ಮಗು ಜನಿಸಿತ್ತು ಈ ದಂಪತಿ ರಾತ್ರಿ ವೇಳೆ ಮಗುವಿನೊಂದಿಗೆ ಟೆಂಟ್‌ನಲ್ಲಿ ನೆಲೆಸಿದ್ದರು.

ಕೆಲ ದಿನಗಳ ಹಿಂದೆ ಹೂಟಗಳ್ಳಿಯ ನಿವಾಸಿ ಮಂಜುನಾಥ ಮತ್ತು ಆತನ ಸಂಬಂಧಿ ಕುಮಾರ್ ಈ ದಂಪತಿಯನ್ನು ಸಂಪರ್ಕಿಸಿ, ಮಗುವನ್ನು ಕೊಟ್ಟರೆ ನಾವು ಮುದ್ದಾಗಿ ಸಾಕಿ ಬೆಳೆಸುತ್ತೇವೆ ಎಂದು ಕೇಳಿದ್ದರು. ಆದರೆ ದಂಪತಿ ಮಗು ಕೊಡಲು ಒಪ್ಪಿರಲಿಲ್ಲ. ಆದರೆ ಏ.17ರಂದು ಮುಂಜಾನೆ ದಂಪತಿ ಮಗುವಿನೊಂದಿಗೆ ಟೆಂಟ್‌ನಲ್ಲಿ ನಿದ್ರಿಸುತ್ತಿದ್ದ ವೇಳೆ ಸಯ್ಯದ್, ಆತನ ಪತ್ನಿ ಸಲ್ಲು ಮತ್ತು ಕಿರಣ್ ಎಂಬಾತನೊಂದಿಗೆ ಸ್ಥಳಕ್ಕೆ ಬಂದಿದ್ದ ಮಂಜುನಾಥ್ ಮತ್ತು ಕುಮಾರ್ ಮಗುವನ್ನು ಅಪಹರಿಸಿದ್ದರು. ಮಗುವಿನ ತಾಯಿ ಮುಂಜಾನೆ 3ಗಂಟೆ ಸುಮಾರಿನಲ್ಲಿ ಎಚ್ಚರವಾದಾಗ ಮಗು ಇರಲಿಲ್ಲ. ಈ ಬಗ್ಗೆ ತಮ್ಮ ಟೆಂಟ್‌ನ ಪಕ್ಕದ ಟೆಂಟ್‌ನಲ್ಲಿದ್ದ ಚಿಕ್ಕಪ್ಪನ ಮಗನನ್ನು ವಿಚಾರಿಸಿದಾಗ ಆತ, ಒಬ್ಬ ಮಹಿಳೆ ಟೆಂಟ್‌ನಿಂದ ಮಗುವನ್ನು ಎತ್ತಿಕೊಂಡು ಹೋಗಿ ಸ್ವಲ್ಪ ದೂರದಲ್ಲಿ ಬೈಕ್‌ನಲ್ಲಿ ನಿಂತಿದ್ದವನೊಂದಿಗೆ ಹೋದಳು. ನಾನು ಕರೆಯುತ್ತಿದ್ದರೂ ಕೇರ್ ಮಾಡದೇ ಅವರ ಮಗುವನ್ನು ಎತ್ತಿಕೊಂಡು ಹೋಗಿದ್ದಾರೆ ಎಂದು ತಿಳಿಸಿದ್ದಾನೆ.

ಮಗು ಕಳೆದುಕೊಂಡ ದಂಪತಿ, ಅಂದು ಬೆಳಗ್ಗೆ 8 ಗಂಟೆಗೆ ದೂರು ಸಲ್ಲಿಸಿದ ಹಿನ್ನೆಲೆಯಲ್ಲಿ ವಿಜಯನಗರ ಠಾಣೆಯ ಇನ್ಸ್‌ಪೆಕ್ಟರ್ ಪ್ರದೀಪ್, ಸಬ್ ಇನ್ಸ್‌ಪೆಕ್ಟರ್‌ಗಳಾದ ವಿಶ್ವನಾಥ್, ನಾರಾಯಣ, ಮೀನಾಕ್ಷಿ, ಸಿಬ್ಬಂದಿಗಳಾದ ಶಿವಕುಮಾರ್, ಲಿಖಿತ, ಮುರಳಿಗೌಡ, ಸಂಜಯ್, ಅಣ್ಣಪ್ಪ ದೇವಾಡಿಗ, ನಂದೀಶ್, ಶ್ರೀನಿವಾಸ ಮೂರ್ತಿ, ಪ್ರಭಾಕರ ಹಾಗೂ ಸಿಡಿಆರ್ ವಿಭಾಗದ ಕುಮಾರ್ ಅವರನ್ನು ಒಳಗೊಂಡ ತಂಡ ಕ್ಷಿಪ್ರ ಕಾರ್ಯಾಚರಣೆ ನಡೆಸಿ ಅದೇ ದಿನ ಸಂಜೆ ವೇಳೆಗೆ ಹುಣಸೂರಿನ ಮೋದೂರು ಗ್ರಾಮದಲ್ಲಿ ಐವರನ್ನು ಬಂಧಿಸಿ, ಮಗುವನ್ನು ರಕ್ಷಿಸಿ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಮಾರಾಟ ಮಾಡುವ ಸಲುವಾಗಿಯೇ ಈ ತಂಡ ಮಗುವನ್ನು ಅಪಹರಿಸಿತ್ತು ಎಂದು ಹೇಳಲಾಗಿದ್ದು, ಮಗುವನ್ನು ಅಪಹರಿಸಿದ ನಂತರ ಬೇರೆ ರಾಜ್ಯದವರನ್ನು ಮೊಬೈಲ್ ಮೂಲಕ ಸಂಪರ್ಕಿಸಿ ಮಗುವಿನ ಮಾರಾಟದ ಬಗ್ಗೆ ವ್ಯವಹಾರ ಕುದುರಿಸಿದ್ದರು ಎಂದು ಹೇಳಲಾಗಿದೆ. ಪೊಲೀಸರ ಬಲೆಗೆ ಈ ತಂಡ ಸಿಕ್ಕಿ ಬೀಳದಿದ್ದಲ್ಲಿ ಕೆಲವೇ ಗಂಟೆಗಳಲ್ಲಿ ಬೇರೆಡೆಗೆ ಪಲಾಯನ ಮಾಡುವ ತಯಾರಿಯಲ್ಲಿತ್ತು ಎಂದು ಪೊಲೀಸ್ ಮೂಲಗಳು ತಿಳಿಸಿದೆ.

## ವಿಷವುಣಿಸಿ ಕಂದಮ್ಮಗಳ ಸಾವು

ಇಂದು ಬೆಳಗ್ಗೆ ಈತ ತನ್ನ ತಂದೆ ಸ್ವಾಮಿಯೊಂದಿಗೆ ಸಲೂನ್‌ನಲ್ಲಿ ಕೆಲಸ ಮಾಡುತ್ತಿದ್ದ. ಬೆಳಗ್ಗೆ 11 ಗಂಟೆ ಸುಮಾರಿನಲ್ಲಿ ತಿಂಡಿ ತಿಂದು ಬರುತ್ತೇನೆಂದು ತಂದೆಗೆ ತಿಳಿಸಿ ಮನೆಗೆ ಹೋದಾಗ ಪರಸ್ತ್ರೀ ವಿಚಾರದಲ್ಲಿ ಪತಿ ಮತ್ತು ಪತ್ನಿ ನಡುವೆ ಗಲಾಟೆ ನಡೆದಿದೆ ಎಂದು ಹೇಳಲಾಗಿದೆ. ಈ ವೇಳೆ ಈತ ಪತ್ನಿಯ ಕೈಕಾಲುಗಳನ್ನು ಕಟ್ಟಿ ಆಕೆಗೆ ವಿಷವುಣಿಸಿ ಕೊಂದ ನಂತರ ಮಕ್ಕಳಿಗೂ ವಿಷವುಣಿಸಿದ್ದಾನೆ. ಬಳಿಕ ತಾನೂ ವಿಷ ಸೇವಿಸಿದ್ದಾನೆ. ಮಧ್ಯಾಹ್ನವಾದರೂ ಮನೆಗೆ ಹೋದ ಮಗ ಬರಲಿಲ್ಲವಲ್ಲಾ ಎಂದು ತಂದೆ ಸ್ವಾಮಿ ಮನೆಗೆ ಬಂದು ನೋಡಿದಾಗ ಸೊಸೆ ಮತ್ತು ಮಕ್ಕಳು ಸತ್ತು ಬಿದ್ದಿದ್ದು, ಮಗ ನರಸಿಂಹ ತೀವ್ರ ಅಸ್ವಸ್ಥನಾಗಿ ನರಳುತ್ತಿದ್ದ ಎಂದು ಹೇಳಲಾಗಿದೆ. ತಕ್ಷಣವೇ ಅವರು ನೆರೆಹೊರೆಯವರ ಸಹಾಯದೊಂದಿಗೆ ಮಗನನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಸಂಬಂಧ ನಾಗಮಂಗಲ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಶ್ರೀರಂಗಪಟ್ಟಣ ವರದಿ:** ಕೌಟುಂಬಿಕ ಕಲಹದಿಂದ ಬೇಸತ್ತಿದ್ದ ತಾಲೂಕಿನ ಬೆಟ್ಟಹಳ್ಳಿ ಗ್ರಾಮದ ಗೃಹಿಣಿ ಪೂಜಾ ತನ್ನ ಒಂದೂವರೆ ವರ್ಷದ ಅವಳಿ ಮಕ್ಕಳು ಹಾಗೂ 3 ವರ್ಷದ ಮಗಳಿಗೆ ಐಸ್‌ಕ್ರೀಂನಲ್ಲಿ ವಿಷ ಬೆರೆಸಿ ಕೊಟ್ಟು, ತಾನೂ ಸೇವಿಸಿದ್ದಾಳೆ. ಗ್ರಾಮದಲ್ಲಿ ಬುಧವಾರ ಸಂಜೆ ವ್ಯಕ್ತಿಯೋರ್ವ ಐಸ್‌ಕ್ರೀಂ ಮಾರಾಟ ಮಾಡಿಕೊಂಡು ಬಂದಾಗ ಆತನಿಂದ ಐಸ್‌ಕ್ರೀಂ ಖರೀದಿಸಿದ್ದ ಪೂಜಾ, ಅದಕ್ಕೆ ಲಕ್ಷ್ಮಣ ರೇಖೆ ಜಿರಲೆ ಔಷಧಿಯನ್ನು ಬೆರೆಸಿ ಮಕ್ಕಳಿಗೆ ಕೊಟ್ಟಿದ್ದಲ್ಲದೇ ತಾನೂ ಸೇವಿಸಿದ್ದಾಳೆ. ಇದರ ಪರಿಣಾಮವಾಗಿ ಅವಳಿ ಮಕ್ಕಳಾದ ತ್ರಿಶೂಲ್ ಮತ್ತು ತ್ರಿಶಾ ಸಾವನಪ್ಪಿದರೆ, ಮೂರು ವರ್ಷದ ಬೃಂದಾ ಮತ್ತು ಪೂಜಾ ಅಸ್ವಸ್ಥರಾಗಿ ನರಳಾಡುತ್ತಿದ್ದರು ಎಂದು ಹೇಳಲಾಗಿದೆ. ಇದನ್ನು ಕಂಡ ಗ್ರಾಮಸ್ಥರು ಪೂಜಾ ಮತ್ತು ಬೃಂದಾಳನ್ನು ಮಂಡ್ಯ ಜಿಲ್ಲಾಸ್ಪತ್ರೆಗೆ ಸಾಗಿಸಿದ್ದಾರೆ.

ಇದೇ ವೇಳೆ ಐಸ್‌ಕ್ರೀಂ ತಿಂದು ಮಕ್ಕಳು ಸಾವನ್ನಪ್ಪಿದ್ದಾರೆ ಎಂಬ ವದಂತಿ ಗ್ರಾಮದಲ್ಲಿ ಹರಡಿತ್ತು ಆದರೆ ಪೂಜಾ ಮಾತ್ರವಲ್ಲದೆ ಇದೇ ಗ್ರಾಮದ ಹಲವರು ಅದೇ ವ್ಯಕ್ತಿಯಿಂದ ಐಸ್‌ಕ್ರೀಂ ಖರೀದಿಸಿ ತಿಂದಿದ್ದರೂ ಯಾವುದೇ ಆರೋಗ್ಯ ಸಮಸ್ಯೆ ತಲೆದೋರದ ಹಿನ್ನೆಲೆಯಲ್ಲಿ ಸಂಶಯಗೊಂಡ ಪೊಲೀಸರು, ವಿಚಾರಣೆ ನಡೆಸಿದಾಗ ಪೂಜಾ, ತಾನೇ ತನ್ನ ಮಕ್ಕಳಿಗೆ ಐಸ್‌ಕ್ರೀಂನಲ್ಲಿ ಜಿರಲೆ ಔಷಧಿ ಬೆರೆಸಿ ಕೊಟ್ಟು ನಂತರ ತಾನೂ ಸೇವಿಸಿದ್ದಾಗಿ ತಿಳಿಸಿದ್ದಾಳೆ ಎನ್ನಲಾಗಿದೆ. ಈ ಸಂಬಂಧ ಅರಕೆರೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

## ಸಿಂಚನ; ಜನರಲ್ಲಿ ಸಂಭ್ರಮ

ಪಾರಾಗಿದ್ದಾರೆ. ಸ್ಕೂಟರ್‌ನಲ್ಲಿ ತೆರಳುತ್ತಿದ್ದ ವೃದ್ಧರೊಬ್ಬರು ಬಿದ್ದು, ಅವರ ಮುಖಕ್ಕೆ ಪೆಟ್ಟಾಗಿದೆ. ಸ್ಥಳೀಯರು ಆರೈಕೆ ಮಾಡಿ ಅವರನ್ನು ಮನೆಗೆ ಕಳುಹಿಸಿಕೊಟ್ಟಿದ್ದಾರೆ. ದ್ವಿಚಕ್ರ ವಾಹನ ಗಳು ಸ್ಕಿಡ್ ಆದ ವೇಳೆ ಅದೃಷ್ಟವಶಾತ್ ಬಸ್ಸು ಇನ್ನಿತರ ಭಾರೀ ವಾಹನಗಳು ಸಂಚರಿ ಸದ ಕಾರಣ ಗಂಭೀರ ಅಪಘಾತಗಳು ಸಂಭವಿಸಿಲ್ಲ. ಒಂದರ ಹಿಂದೊಂದು ದ್ವಿಚಕ್ರ ವಾಹನಗಳು ಸ್ಕಿಡ್ ಆಗಿದ್ದರಿಂದ ಅಲ್ಲಿನ ಸಾರ್ವಜನಿಕರು ಡಿವೈಡರ್ ಹಾಗೂ ಮರದ ಪಕ್ಕದಲ್ಲಿ ಮಣ್ಣು ತೆಗೆದುಕೊಂಡು ಸ್ಕಿಡ್ ಆದ ಸ್ಥಳಗಳಲ್ಲಿ ಹರಡಿದ್ದಾರೆ.

**ರಸ್ತೆಯಲ್ಲಿ ಉಕ್ಕಿದ ನೊರೆ:** ಐದಾರು ನಿಮಿಷ ಸುರಿದ ಮಳೆಯಿಂದ ಕೆಲವು ರಸ್ತೆಯಲ್ಲಿ ನೊರೆ ಉಕ್ಕಿ ರಸ್ತೆ ಬದಿಯಲ್ಲಿ ಹರಿಯುತ್ತಿತ್ತು. ಒಂಟಿಕೊಪ್ಪಲು ಟೆಂಪಲ್ ರಸ್ತೆ, ಸರಸ್ವತಿಪುರಂ ರಸ್ತೆ ಸೇರಿದಂತೆ ಹಲವೆಡೆ ಈ ದೃಶ್ಯ ಕಂಡು ಬಂದಿತು. ನೀರಿನೊಂದಿಗೆ ರಸ್ತೆ ಬದಿ ಹರಿಯುತ್ತಿದ್ದ ನೊರೆಯನ್ನು ನೋಡಿ ಸಾರ್ವಜನಿಕರು ಆಶ್ಚರ್ಯಗೊಂಡರು. ಕೆಲವರು ಇದೇನೆಂದು ಆತಂಕ ವ್ಯಕ್ತಪಡಿಸಿದರು.

ರಸ್ತೆಯಲ್ಲಿ ಬಿದ್ದಿರುವ ಕಾರ್ಕ್ ಬೀಜದ ಕಾಯಿಗಳ ಮೇಲೆ ವಾಹನಗಳು ಸಂಚರಿಸಿದ್ದರಿಂದ ಶ್ಯಾಂಪೂ ಮಾದರಿಯಲ್ಲಿ ನೊರೆ ಉಂಟಾಗಿದೆ. ಇದರಿಂದಲೇ ವಾಹನಗಳು ಸ್ಕಿಡ್ ಆಗುತ್ತವೆ ಎಂದು ಕೆಲವರು ಅಭಿಪ್ರಾಯಿಸಿದರು. ಮಳೆಯಲ್ಲಿ ರಸ್ತೆ ಮೇಲಿನ ತೈಲ, ಕೊಳಕು ಇತರೆ ಮಾಲಿನ್ಯ ಕಾರಕ ಮಿಶ್ರಣ ವಾಹನಗಳ ಸಂಚಾರದ ಒತ್ತಡದಿಂದ ಗುಳ್ಳೆ ರಚನೆಯಾಗಿ ಈ ರೀತಿಯ ನೊರೆ ಉತ್ಪತ್ತಿಯಾಗುತ್ತದೆ ಎಂದು ಹೇಳಲಾಗುತ್ತಿದೆ. ಈ ಬಗ್ಗೆ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯವರು ಪರಿಶೀಲಿಸಿದರೆ ನಿಖರ ಕಾರಣ ತಿಳಿಯಬಹುದು. ಸದ್ಯ ಮಂಡಳಿ ಅಧಿಕಾರಿಗಳ ಸಂಪರ್ಕ ಸಾಧ್ಯವಾಗಲಿಲ್ಲ.

ರಾತ್ರಿವರೆಗೂ ಮಳೆ ವಾತಾವರಣವಿತ್ತಾದರೂ ಭಾರೀ ಮಳೆಯಾಗಿರುವ ಬಗ್ಗೆ ವರದಿಯಾಗಿಲ್ಲ. ಎರಡು ದಿನ ರಾಜ್ಯದಲ್ಲಿ ಮಳೆಯಾಗುವ ಸಾಧ್ಯತೆ ಬಗ್ಗೆ ಹವಾಮಾನ ಇಲಾಖೆ ಸೂಚನೆ ನೀಡಿದ್ದು, ಮೈಸೂರಿನಲ್ಲೂ ಮಳೆಯಾಗಬಹುದು ಎಂದು ಅಂದಾಜಿಸಲಾಗಿದೆ.

# ಮೈಸೂರು ಬಿವಿಬಿಯಲ್ಲಿ ನಾಳೆ ಚಿಲ್ಕುಂದ ಸಹೋದರಿಯರ ಕರ್ನಾಟಕ ಶಾಸ್ತ್ರೀಯ ಸಂಗೀತ




ಚಿಲ್ಕುಂದ ಸಹೋದರಿಯರು



ಜನಾರ್ಧನ್ ಶ್ರೀನಾಥ್



ಕೇಶವದತ್ತ



ಸುಮಿತ್

ಮೈಸೂರು, ಏ. 18– ಇನ್ಫೋಸಿಸ್ ಪ್ರತಿಷ್ಠಾನ, ಬೆಂಗಳೂರು ಮತ್ತು ಭಾರತೀಯ ವಿದ್ಯಾಭವನ, ಬೆಂಗಳೂರು–ಮೈಸೂರು ಸಂಯುಕ್ತ ಆಶ್ರಯದಲ್ಲಿ 127ನೇ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಏ.20 (ಶನಿವಾರ) ರಂದು ಸಂಜೆ 6 ಗಂಟೆಗೆ ವಿಜಯನಗರ 1ನೇ ಹಂತದಲ್ಲಿರುವ ಭಾರತೀಯ ವಿದ್ಯಾಭವನದಲ್ಲಿ ಚಿಲ್ಕುಂದ ಸಹೋದರಿಯರಾದ ವಿದುಷಿ ಇಂದೂ ನಾಗರಾಜ್ ಮತ್ತು ವಿದುಷಿ ಲಕ್ಷ್ಮೀನಾಗರಾಜ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ. ಪಕ್ಕ ವಾದ್ಯದಲ್ಲಿ ವಿದ್ವಾನ್ ಜನಾರ್ಧನ್ ಶ್ರೀನಾಥ್–ಪಿಟೀಲು, ವಿದ್ವಾನ್ ಕೇಶವದತ್ತ–ಮೃದಂಗ ಮತ್ತು ವಿದ್ವಾನ್ ಸುಮಿತ್ ಎಸ್. ಗೌಡ–ಘಟಂ ಸಹಕಾರ ನೀಡಲಿದ್ದಾರೆ.

**ಕಿರು ಪರಿಚಯ:** ವಿದುಷಿ ಲಕ್ಷ್ಮೀ ನಾಗರಾಜ್ ಮತ್ತು ವಿದುಷಿ ಇಂದೂ ನಾಗರಾಜ್ ಅವರು ಕರ್ನಾಟಕ ಸಂಗೀತ ಹಿನ್ನೆಲೆಯ ಕುಟುಂಬದಿಂದ ಬಂದವರು. ಇವರ ತಂದೆ ಸಿ.ಎ.ನಾಗರಾಜ್ ಅವರು ಸಂಗೀತ ಮತ್ತು ಕೊಳಲು ಪ್ರವೀಣರು. ತಾಯಿ ಹೆಚ್.ಎಸ್. ರಾಧಾ ಅವರು ಸಹ ಸಂಗೀತಗಾರರು. ಲಕ್ಷ್ಮಿ ನಾಗರಾಜ್ ಮತ್ತು ಇಂದೂ ನಾಗರಾಜ್ ಅವರು ಚಿಲ್ಕುಂದ ಸಹೋದರಿಯರು ಎಂದು ಪ್ರಸಿದ್ಧರಾಗಿದ್ದಾರೆ. ಇವರು ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ದೊಡ್ಡಮ್ಮ ಸಿ.ಎಸ್. ಸತ್ಯಲಕ್ಷ್ಮಿ ಅವರಿಂದ ಸಂಗೀತ ಅಭ್ಯಾಸ ಆರಂಭಿಸಿದರು. ಇವರು 9 ವರ್ಷದವರಾಗಿದ್ದಾಗಲೇ ಹಲವಾರು ಸಂಗೀತ ಕಛೇರಿಗಳು ಅಲ್ಲದೆ ಟಿವಿ ಕಾರ್ಯಕ್ರಮ ನೀಡಿದ್ದಾರೆ. ವಿದುಷಿ ಲಕ್ಷ್ಮಿ ನಾಗರಾಜ್ ಅವರು ಆಕಾಶವಾಣಿಯಲ್ಲಿ ಎ ದರ್ಜೆ ಕರ್ನಾಟಕ ಸಂಗೀತಗಾರರಾಗಿದ್ದಾರೆ. ಹಿಂದೂಸ್ಥಾನಿ ಸಂಗೀತವನ್ನು ಪಂಡಿತ್ ಪರಮೇಶ್ವರ ಹೆಗ್ಡೆ ಅವರ ಬಳಿ ಕಲಿತಿದ್ದಾರೆ. ಇವರು ರಾಷ್ಟ್ರ ಮಟ್ಟದ ಸಂಗೀತ ಸ್ಪರ್ಧೆಯಲ್ಲಿ ಬಹುಮಾನ ಹಾಗೂ ಸ್ವರ ಸಾಮ್ರಾಟ್ ಬಸವರಾಜ್ ರಾಜ್‌ಗುರು ಪ್ರಶಸ್ತಿ ಪಡೆದುಕೊಂಡಿದ್ದಾರೆ.

ವಿದುಷಿ ಇಂದೂ ನಾಗರಾಜ್ ಅವರು ಹಲವಾರು ಫಿಲಂಫೇರ್ ಪ್ರಶಸ್ತಿ, ರೇಡಿಯೋ ಮಿರ್ಚಿ ಪ್ರಶಸ್ತಿ, ಬಿಗ್ ಎಫ್‌ಎಂ ಪ್ರಶಸ್ತಿ ಹಾಗೂ ಸುಮಾರು 500 ಚಲನಚಿತ್ರಗಳಲ್ಲಿ ಹಿನ್ನೆಲೆ ಗಾಯಕರಾಗಿ ಕೆಲಸ ನಿರ್ವಹಿಸಿದ್ದಾರೆ.



ಮೈಸೂರು ಅಶೋಕಪುರಂನ ಡಾ. ಬಿ.ಆರ್.ಅಂಬೇಡ್ಕರ್ ಉದ್ಯಾನವನದಲ್ಲಿ ಡಾ.ಅಂಬೇಡ್ಕರ್ ಪ್ರತಿಮೆಗೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಯದುವೀರ್ ಮಾಲಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಮಾಜಿ ಸಚಿವ ಎಸ್.ಎ. ರಾಮದಾಸ್, ನಗರ ಎಸ್‌ಸಿ ಮೋರ್ಚಾ ಅಧ್ಯಕ್ಷ ವಿ.ಶೈಲೇಂದ್ರ, ಬಿಜೆಪಿ ಅಲ್ಪಸಂಖ್ಯಾತರ ವಿಭಾಗದ ರಾಜ್ಯಾಧ್ಯಕ್ಷ ಅನಿಲ್ ಥಾಮಸ್, ಮುದ್ದುಕೃಷ್ಣ, ಧರ್ಮರಾಜ್, ನಿಂಗರಾಜ್, ರಾಜು, ಚಂದ್ರು, ಕೃಷ್ಣ, ಬಾಲು, ಬಡಾವಣೆಯ ಪ್ರಮುಖ ಮುಖಂಡರು ಉಪಸ್ಥಿತರಿದ್ದರು

## ಹುಬ್ಬಳ್ಳಿ ಕಾಲೇಜು ಕ್ಯಾಂಪಸ್‌ನಲ್ಲಿ ಕಾರ್ಪೋರೇಟರ್ ಪುತ್ರಿಯ ಭೀಕರ ಕೊಲೆ, ಆರೋಪಿ ಬಂಧನ

ಹುಬ್ಬಳ್ಳಿ, ಏ.18– ಹುಬ್ಬಳ್ಳಿಯ ಬಿವಿಬಿ ಕಾಲೇಜಿನಲ್ಲಿ ಓದುತ್ತಿದ್ದ 24ರ ಹರೆಯದ ಯುವತಿಯೊಬ್ಬಳನ್ನು ಕಾಲೇಜು ಕ್ಯಾಂಪಸ್‌ನಲ್ಲಿ ಇಂದು ಭೀಕರವಾಗಿ ಹತ್ಯೆ ಮಾಡಿರುವ ಆಘಾತಕಾರಿ ಘಟನೆ ನಡೆದಿದೆ.


ಯುವಕನೋರ್ವ ಕಾಲೇಜಿನಿಂದ ಯುವತಿ ಹೊರಬರುವುದನ್ನೇ ಕಾಯುತ್ತಿದ್ದು ಆಕೆಯ ಮೇಲೆ ಅನೇಕ ಬಾರಿ ಚಾಕುವಿನಿಂದ ಇರಿದಿದ್ದಾನೆ. ಸಂತ್ರಸ್ತೆ ನೇಹಾ ಹಿರೇಮಠ ಹುಬ್ಬಳ್ಳಿಯ ಕಾಂಗ್ರೆಸ್ ಕಾರ್ಪೋರೇಟರ್ ನಿರಂಜನ ಹಿರೇಮಠ ಪುತ್ರಿ.

ಕೊಲೆಯ ನಂತರ ತನಿಖೆ ಆರಂಭಿಸಿದ ಪೊಲೀಸರು ಆರೋಪಿ ಫಯಾಜ್ ಎಂಬಾತನನ್ನು ಬೆಳಗಾವಿ ಜಿಲ್ಲೆಯ ಸೌದತ್ತಿಯಿಂದ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಗಾಯಗೊಂಡಿದ್ದ ನೇಹಾಳನ್ನು ಸಹಪಾಠಿಗಳು ಮತ್ತು ಅಧ್ಯಾಪಕರು ಕೂಡಲೇ ಕಿಮ್ಸ್ ಆಸ್ಪತ್ರೆಗೆ ಸ್ಥಳಾಂತರಿಸಿದರು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾಳೆ. ಶಾಸಕ ಪ್ರಸಾದ್ ಅಬ್ಬಯ್ಯ ಸೇರಿದಂತೆ ಕಾಂಗ್ರೆಸ್ ಮುಖಂಡರು ಕಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ ದುಃಖತಪ್ತ ಪೋಷಕರಿಗೆ ಸಾಂತ್ವನ ಹೇಳಿದರು.



ನೇಹಾ ಬಿವಿಬಿಯಲ್ಲಿ ಎಂಸಿಎ 1ನೇ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದು, ಹಲವು ತಿಂಗಳಿಂದ ಆರೋಪಿ ಪ್ರೀತಿಸುವಂತೆ ಕಿರುಕುಳ ನೀಡುತ್ತಿದ್ದ. ಇತ್ತೀಚೆಗೆ ಆಕೆಗೆ ಪ್ರಪೋಸ್ ಮಾಡಿದ್ದನ್ನು ಸಂತ್ರಸ್ತೆ ತಿರಸ್ಕರಿಸಿದ್ದಳು. ಆಕೆಯ ನಡೆಯಿಂದ ಕುಪಿತಗೊಂಡ ಆರೋಪಿ ನೇಹಾಳನ್ನು ಕೊಲೆ ಮಾಡಲು ಮುಂದಾಗಿದ್ದ. ತನ್ನ ಪ್ರಸ್ತಾಪವನ್ನು ತಿರಸ್ಕರಿಸಿದ ಹುಡುಗಿಯನ್ನು ಕೊಲೆ ಮಾಡುವುದಾಗಿ ಆರೋಪಿ ತನ್ನ ಸ್ನೇಹಿತರ ಬಳಿ ಹೇಳಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಸದ್ಯ ಆರೋಪಿಯನ್ನು ಬಂಧಿಸಲಾಗಿದ್ದು, ಮುಂದಿನ ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಇದು ಪ್ರೇಮ ನಿರಾಕರಣೆ ಪ್ರಕರಣದಂತೆ ತೋರುತ್ತಿದೆ. ಕೊಲೆಯ ಉದ್ದೇಶದ ಕುರಿತು ಹೆಚ್ಚಿನ ವಿವರಗಳನ್ನು ಪಡೆಯಲು ನಾವು ನೇಹಾಳ ಸ್ನೇಹಿತರು ಮತ್ತು ಸಂಬಂಧಿಕರ ವಿಚಾರಣೆ ನಡೆಸುತ್ತಿದ್ದೇವೆ ಎಂದು ತನಿಖಾಧಿಕಾರಿಯೊಬ್ಬರು ತಿಳಿಸಿದ್ದಾರೆ. ಏತನ್ಮಧ್ಯೆ, ಆರೋಪಿಗಳ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿ ಎಬಿವಿಪಿಯ ನಗರ ಘಟಕ, ಬಿಜೆಪಿ ವಿದ್ಯಾರ್ಥಿ ಘಟಕ ಕಾಲೇಜು ಎದುರು ಪ್ರತಿಭಟನೆ ನಡೆಸಲು ನಿರ್ಧರಿಸಿದೆ.




## ಲೋಕಸಭಾ ಚುನಾವಣೆ: ಏ.26, ಕೈಗಾರಿಕೆಗಳಿಗೆ ವೇತನ ಸಹಿತ ರಜೆ

ಮೈಸೂರು, ಏ. 18– ಏ. 26ರಂದು ನಡೆಯಲಿರುವ ಲೋಕಸಭಾ ಚುನಾವಣೆ ಅಂಗವಾಗಿ ಮೈಸೂರು ಭಾಗದ ಎಲ್ಲಾ ಕೈಗಾರಿಕೆಗಳು, ಅಂಗಡಿ, ವಾಣಿಜ್ಯ ಹಾಗೂ ಇತರೆ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು, ಸಿಬ್ಬಂದಿ ವರ್ಗದವರಿಗೆ ಭಾರತದ ಸಂವಿಧಾನ್ಮಕ ಹಕ್ಕಾದ ಮತ ಚಲಾಯಿಸಲು ಅನುಕೂಲವಾಗುವಂತೆ ಪ್ರಜಾಪ್ರತಿನಿಧಿ ಕಾಯಿದೆ 1951 ಕಲಂ 135 ಬಿ ಅಡಿಯಲ್ಲಿನ ಎಲ್ಲಾ ಉಪಬಂಧಗಳಿಗೆ ಒಳಪಟ್ಟು ವೇತನ ಸಹಿತ ರಜೆ ನೀಡುವಂತೆ ಚುನಾವಣಾ ಆಯೋಗ ಹಾಗೂ ಕಾರ್ಮಿಕ ಇಲಾಖೆ ನಿರ್ದೇಶಿಸಿದೆ. ಈ ಹಿನ್ನೆಲೆಯಲ್ಲಿ ಲೋಕಸಭಾ ಚುನಾವಣೆ ನಡೆಯಲಿರುವ ರಾಜ್ಯದ ಎಲ್ಲಾ ಕೈಗಾರಿಕೆಗಳು, ಅಂಗಡಿ, ವಾಣಿಜ್ಯ ಹಾಗೂ ಇತರೆ ಸಂಸ್ಥೆಗಳು ಏಪ್ರಿಲ್ 26 ನೇ ಶುಕ್ರವಾರ ವೇತನ ಸಹಿತ ರಜೆ ಪ್ರಕಟಿಸುವುದರ ಮೂಲಕ ಆಯೋಗದ ಆದೇಶವನ್ನು ಪಾಲಿಸಬೇಕೆಂದು ಮೈಸೂರು ಕೈಗಾರಿಕೆಗಳ ಸಂಘ ವಿನಂತಿಸಿದೆ.

# ಪಾಲಿಕೆ ವಾರ್ಡ್ ನಂ.50ರಲ್ಲಿ ಯದುವೀರ್ ಬಿರುಸಿನ ಪ್ರಚಾರ

ಮೈಸೂರು, ಏ. 18– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ವಾರ್ಡ್ ನಂ.50ರಲ್ಲಿ ಬೃಹತ್ ರ್‍ಯಾಲಿ ನಡೆಸುವ ಮೂಲಕ ಮತಯಾಚಿಸಿದರು.

ಈ ವೇಳೆ ಶಾಸಕ ಶ್ರೀವತ್ಸ, ಮಾಜಿ ಮೇಯರ್ ಶಿವಕುಮಾರ್, ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯಾದರ್ಶನ್ ಹಾಗೂ ಜೆ.ಡಿ.ಎಸ್ ಮತ್ತು ಬಿಜೆಪಿ ಮುಖಂಡರು ಕಾರ್ಯಕರ್ತರು ಅಭಿಮಾನಿಗಳು ಬೃಹತ್ ಸಂಖ್ಯೆಯಲ್ಲಿ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು. ವಿಶೇಷ ಎಂದರೆ ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್ ಪ್ರಕಾಶ್ ಪ್ರಿಯ ದರ್ಶನ್ ದಂಪತಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹಸೆಮಣೆಯ ಮೇಲೆ ನಿಲ್ಲಿಸಿ ಅವರ ಪಾದವನ್ನು ತೊಳೆದು ಮಲ್ಲಿಗೆ ಹೂವಿನ ಮಳೆಗರೆದರು. ಮಹಿಳೆಯರು ಆರತಿ ಬೆಳಗಿದರು. ಈ ವೇಳೆ ಶಾಸಕ ಶ್ರೀವತ್ಸ ಮಾಜಿ ಮೇಯರ್ ಶಿವಕುಮಾರ್ ಅವರನ್ನು ಗೌರವಿಸಿದ್ದು, ವಿಶೇಷವಾಗಿತ್ತು.



## ಕಟ್ಟಡ ಕಾರ್ಮಿಕರ ಸಂಘ ಕಾಂಗ್ರೆಸ್‌ಗೆ ಬೆಂಬಲ

ಮೈಸೂರು, ಏ.18(ಜಿಎ)–ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲು ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಸಂಘ ನಿರ್ಧರಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ರಾಜ್ಯ ಅಧ್ಯಕ್ಷ ಪಿ.ರಾಜು ಈ ವಿಷಯ ತಿಳಿಸಿ, ಕಾಂಗ್ರೆಸ್ ಪಕ್ಷ ಕೇಂದ್ರದಲ್ಲಿದ್ದಾಗ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಕಾರ್ಮಿಕರಿಗೆ ಬಹಳಷ್ಟು ಕೆಲಸ ಮಾಡಲಾಗಿದೆ. ಆದರೆ ಬಿಜೆಪಿ ಸರ್ಕಾರ ಕಾರ್ಮಿಕರ ಕಷ್ಟಗಳಿಗೆ ಸ್ಪಂದಿಸಿಲ್ಲ ಲಾಕ್ ಡೌನ್, ನೋಟು ಅಮಾನ್ಯೀಕರಣ ಮೂಲಕ ಕಾರ್ಮಿಕರಿಗೆ ಮತ್ತಷ್ಟು ಸಂಕಷ್ಟ ನೀಡಿತು ಎಂದು ಆಕ್ರೋಶ ವ್ಯಕ್ತಪಡಿಸಿ, ಕಾರ್ಮಿಕ ಸ್ನೇಹಿ ಕಾಂಗ್ರೆಸ್ ಪಕ್ಷಕ್ಕೆ ಎಲ್ಲರೂ ಬೆಂಬಲ ನೀಡಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ರಾಜ್ಯ ಕಾರ್ಯದರ್ಶಿ ಅಂತೋಣಿ ಜಾನ್ಸನ್, ಜಿಲ್ಲಾಧ್ಯಕ್ಷ ನಂಜುಂಡಸ್ವಾಮಿ, ಚಾಮರಾಜನಗರ ಜಿಲ್ಲಾಧ್ಯಕ್ಷ ಡಿ.ಎಲ್.ಕುಮಾರ್, ತಿ.ನರಸೀಪುರ ತಾಲೂಕು ಅಧ್ಯಕ್ಷ ಸೋಮಶೇಖರ್ ಉಪಸ್ಥಿತರಿದ್ದರು.

## ಮೋದಿಯವರ ವಿಕಸಿತ ಭಾರತ ಪರಿಕಲ್ಪನೆ ಮಾಯಾಪೆಟ್ಟಿಗೆಯಲ್ಲಿ ಚಿತ್ರ ತೋರಿಸಿದಂತಿದೆ

### ಹಿರಿಯ ಸಾಹಿತಿ ದೇವನೂರು ಮಹಾದೇವ



ಮೈಸೂರು,ಏ.18(ಜಿಎ)–ಮೈಸೂರಿನಲ್ಲಿ ನಡೆದ ಬಿಜೆಪಿ ಚುನಾವಣಾ ಪ್ರಚಾರ ಸಭೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ ವಿಕಸಿತ ಭಾರತದ ಪರಿಕಲ್ಪನೆ ಕೇವಲ ಜಾತ್ರೆ ವೇಳೆ ಮಾಯಾ ಪೆಟ್ಟಿಯಲ್ಲಿ ಬಾಂಬೆ ನೋಡು, ಕೋಲ್ಕತಾ ನೋಡು, ಮದ್ರಾಸ್ ನೋಡು ಎಂಬ ಚಿತ್ರ ತೋರಿಸಿದಂತಿದೆ ಎಂದು ಹಿರಿಯ ಸಾಹಿತಿ ದೇವನೂರು ಮಹಾದೇವ ಲೇವಡಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪ್ರಗತಿಪರ ಸಂಘಟನೆಗಳು ಈ ಬಾರಿಯ ಲೋಕಸಭಾ ಚುನಾವಣೆ ವೇಳೆ ಬಿಜೆಪಿ– ಜೆಡಿಎಸ್ ಮೈತ್ರಿಕೂಟವನ್ನು ಸೋಲಿಸಲೆಂದು ಹಮ್ಮಿಕೊಂಡಿರುವ ಅಭಿಯಾನದ ಅಂಗವಾಗಿ ಕರಪತ್ರ ಬಿಡುಗಡೆಗೊಳಿಸಿ ಮಾತನಾಡಿ, ಕಳೆದ ಹತ್ತು ವರ್ಷಗಳಲ್ಲಿ ಪ್ರಧಾನಿಗೆ ರೈತರ ಆರ್ತನಾದ ಕೇಳಿಸಿಲ್ಲ. ನೀಡಿದ್ದ ಭರವಸೆಯಂತೆ ಸ್ವಾಮಿನಾಥನ್ ವರದಿ ಜಾರಿಗೊಳಿಸಿದ್ದರೆ ರೈತರು ಜಮೀನು ಮಾರಿ ನಗರಗಳಿಗೆ ಕೂಲಿ ಕೆಲಸಕ್ಕಾಗಿ ಗುಳೇ ಬರುವ ಪರಿಸ್ಥಿತಿ ಎದುರಾಗುತ್ತಿರಲಿಲ್ಲ. ಇದೇ ವೇಳೆ ಮೋದಿ ಅವರ ಪರಮಾಪ್ತರ ಆಸ್ತಿ ಮೌಲ್ಯ ಏರಿದವು. ಇನ್ನು, ಕಾಂಗ್ರೆಸ್ ತಾನು ಅಧಿಕಾರಕ್ಕೆ ಬಂದಲ್ಲಿ ಸ್ವಾಮಿನಾಥನ್ ವರದಿ ಜಾರಿ ಭರವಸೆ ನೀಡಿದೆ. ಈ ಬಗ್ಗೆ ಗಮನ ಹರಿಸಬೇಕಾಗಿದೆ ಎಂದು ಹೇಳಿದರು.

ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಡಾ. ಮಂಜುನಾಥ್ ಇಬ್ಬರೂ ಸಭ್ಯರು. ಆದರೆ, ಈ ಬಾರಿಯ ಚುನಾವಣೆಯಲ್ಲಿ ಈ ಸಭ್ಯ ಅಭ್ಯರ್ಥಿಗಳನ್ನು ರಾಜಕೀಯಕ್ಕೆ ತಳ್ಳಲ್ಪಟ್ಟಿರುವುದನ್ನು ನೋಡಿದಲ್ಲಿ ಸಂಕಟವಾಗುತ್ತದೆ. ಈ ಇಬ್ಬರು ಹಿಂದುತ್ವದ ಖೆಡ್ಡಾಕ್ಕೆ ಬೀಳಬಾರದಾಗಿತ್ತು, ಅದರಲ್ಲಿ ಪಳಗಬಾರದಾಗಿತ್ತು. ಹೀಗಾಗಿ ಇವರು ಸೋತಾದರೂ ಈ ಖೆಡ್ಡಾದಿಂದ ಹೊರ ಬರಲಿ ಎಂದು ಪ್ರಾರ್ಥಿಸುವುದಾಗಿ ವ್ಯಂಗ್ಯವಾಡಿದರು.

ಪ್ರೊ.ಎಂ.ಡಿ.ನಂಜುಂಡಸ್ವಾಮಿ ಅವರು ಹೇಳಿದಂತೆ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ನಮ್ಮ ಮತದಾರರು ನಿಷ್ಠುರವಾಗಿ ಬಿಜೆಪಿಯನ್ನು ನಿರಾಕರಣೆ ಮಾಡಿದಲ್ಲಿ ಮತದಾರರು ಮಾತ್ರವಲ್ಲದೆ, ದೇಶವೂ ಉಳಿಯುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡ ಬಡಗಲಪುರ ನಾಗೇಂದ್ರ, ಚಾಮರಸ ಮಾಲಿ ಪಾಟೀಲ್, ಹೊಸೂರು ಕುಮಾರ್, ರವಿಕಿರಣ್, ವಿಜೇಂದ್ರ ಉಪಸ್ಥಿತರಿದ್ದರು.



ಮೈಸೂರಿನ ಹೂಟಗಳ್ಳಿಯ ಕೆಎಚ್‌ಬಿ ಕಾಲೋನಿಯಲ್ಲಿ ಮೈಸೂರು–ಕೊಡಗು ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಎಂ. ಲಕ್ಷ್ಮಣ್ ಅವರ ಪರ ಜಿಪಂ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಾದೇವ್ ನೇತೃತ್ವದಲ್ಲಿ ಮತಯಾಚನೆ ಮಾಡಲಾಯಿತು. ಚಿತ್ರದಲ್ಲಿ ಕೂರ್ಗಳ್ಳಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರು ಹಾಗೂ ಹೂಟಗಳ್ಳಿ ಗ್ರಾಮದ ಮುಖಂಡರುಗಳು ಹಾಜರಿದ್ದರು.



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಜೆಡಿಎಸ್ ಬೆಂಬಲಿತ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಪರ ಗೋಕುಲಂ ಹಾಗೂ ಬೃಂದಾವನ ಬಡಾವಣೆಯಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ನೇತೃತ್ವದಲ್ಲಿ ಮನೆ ಮನೆಗೆ ತೆರಳಿ ಮತಯಾಚಿಸಿದರು. ಈ ಸಂದರ್ಭದಲ್ಲಿ ಹನುಮೇಗೌಡ, ಹನುಮಂತು, ಮೋಹನ್, ರಘು, ರಾಮಕೃಷ್ಣ, ಕೃಷ್ಣಪ್ಪ, ಮಹದೇವ ಇನ್ನಿತರರು ಉಪಸ್ಥಿತರಿದ್ದರು

## ಕಾಂಗ್ರೆಸ್ ಅಭ್ಯರ್ಥಿ ಬೆಂಬಲಿಸಲು ಒಕ್ಕಲಿಗರ ಸಂಘ ನಿರ್ಣಯ

ಮೈಸೂರು, ಏ.18(ಜಿಎ)–ಲೋಕಸಭಾ ಚುನಾವಣೆಯಲ್ಲಿ ಮೈಸೂರು–ಕೊಡಗು ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ ಒಕ್ಕಲಿಗ ಸಮುದಾಯದ ಅಭ್ಯರ್ಥಿಯಾದ ಎಂ.ಲಕ್ಷ್ಮಣ್‌ಗೆ ಮೈಸೂರು ಜಿಲ್ಲೆ (ಚಾಮರಾಜನಗರ ಜಿಲ್ಲೆ ಒಳಗೊಂಡು) ಒಕ್ಕಲಿಗರ ಸಂಘ ಬೆಂಬಲ ಸೂಚಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ ಈ ವಿಷಯ ತಿಳಿಸಿ, ಸಂಘದ ನಿರ್ದೇಶಕರು ಏ.16ರಂದು ವಿಶೇಷ ಸಭೆ ನಡೆಸಿ, ಸಂಘದ ಆಶಯದಂತೆ ಒಕ್ಕಲಿಗರ ಹಿತ ಕಾಯುವ ದೃಷ್ಟಿಯಿಂದ ನಮ್ಮ ಸಮುದಾಯದ ಲಕ್ಷ್ಮಣ್ ಅವರಿಗೆ ಬೆಂಬಲ ಸೂಚಿಸಲು ನಿರ್ಧರಿಸಿದೆ ಎಂದರು.

ಎಂ.ಲಕ್ಷ್ಮಣ್ ಒಕ್ಕಲಿಗರ ಚುನಾವಣೆಯಲ್ಲಿ ಸ್ಪರ್ಧಿಸಿ, ಪರಾಭವಗೊಂಡಿದ್ದಾರೆ. ಅದರ ದಾಖಲೆಯೂ ಇದೆ. ಆದರೆ, ಅವರು ಒಕ್ಕಲಿಗರ ಎಂದು ಪ್ರಶ್ನಿಸುತ್ತಿರುವುದು ತಪ್ಪು. ಸಂಸದ ಪ್ರತಾಪ್ ಸಿಂಹ ಕಳೆದ 10 ವರ್ಷದಲ್ಲಿ ಮೈಸೂರಿನ ಅಭಿವೃದ್ಧಿಗೆ ಶ್ರಮಿಸಿ, ಉತ್ತಮ ಕಾರ್ಯಗಳನ್ನು ಮಾಡಿದ್ದಾರೆ. ಒಕ್ಕಲಿಗ ಎಂಬ ಕಾರಣಕ್ಕೆ ಬಿಜೆಪಿ ಈ ಬಾರಿ ಸ್ಪರ್ಧಿಸಲು ಅವಕಾಶ ನೀಡದಿರುವುದು ಸಮುದಾಯಕ್ಕೆ ಬೇಸರವಾಗಿದೆ. ಅದರಂತೆ ಈ ಹಿಂದೆ ಎರಡು ಬಾರಿ ಪ್ರತಾಪ್‌ಸಿಂಹ ಅವರ ಪರವಾಗಿ ಶ್ರಮಿಸಿ ಗೆಲ್ಲಿಸಿದಂತೆ ಎಂ.ಲಕ್ಷ್ಮಣ್ ಗೆಲುವಿಗೆ ಶ್ರಮಿಸುತ್ತೇವೆ ಎಂದರು.

ಮಂಡ್ಯದಲ್ಲಿ ನಮ್ಮ ಸಮುದಾಯದವರೇ ಇಬ್ಬರು ಅಭ್ಯರ್ಥಿಗಳಾಗಿರುವುದರಿಂದ ಅಲ್ಲಿ ಯಾರೇ ಗೆದ್ದರೂ ನಮ್ಮ ಸಮುದಾಯಕ್ಕೆ ಸಂತಸವೇ ಆಗಲಿದೆ. ಚಾಮರಾಜನಗರ ಲೋಕಸಭಾ ಮೀಸಲು ಕ್ಷೇತ್ರ ಆಗಿರುವುದರಿಂದ ಯಾವುದೇ ಬೆಂಬಲ ಸೂಚಿಸುತ್ತಿಲ್ಲ. ನಮ್ಮ ಸಮುದಾಯದ ಹಿತರಕ್ಷಣೆಗಾಗಿ ಒಕ್ಕಲಿಗ ಅಭ್ಯರ್ಥಿಗೆ ಬೆಂಬಲ ನೀಡುತ್ತಿದ್ದೇವೆ. ಹಾಗೇ ಅವರ ಪರ ಪ್ರಚಾರ ಮಾಡುತ್ತೇವೆ ಎಂದರು. ಸುದ್ದಿಗೋಷ್ಠಿಯಲ್ಲಿ ಆಲತ್ತೂರು ಜಯರಾಂ, ಬೋರೇಗೌಡ, ರವಿರಾಜಕೀಯ, ಕುಮಾರ್, ಲಕ್ಷ್ಮಣ್, ಉಮೇಶ್, ಸುಶೀಲಾ ನಂಜಪ್ಪ ಮತ್ತಿತರರಿದ್ದರು.

## ಚುನಾವಣೆಯಲ್ಲಿ ಮತ ಚಲಾವಣೆ ಪ್ರತಿಯೊಬ್ಬರ ನೈತಿಕ ನಡಾವಳಿ

### ಮಹಾಜನ ಕಾನೂನು ಕಾಲೇಜು ಪ್ರಾಂಶುಪಾಲರಾದ ಸೌಮ್ಯ ಅಭಿಮತ



ಮೈಸೂರು, ಏ. 18– ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ (ಸ್ವಾಯತ್ತ) ಹಾಗೂ ಐಕ್ಯೂಎಸಿ ವತಿಯಿಂದ ಆಯೋಜಿಸಿದ್ದ, "ಚುನಾವಣೆ ಹಾಗೂ ನೈತಿಕ ನಡಾವಳಿ" ವಿಷಯ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ವೇಳೆ ಮಹಾಜನ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಸೌಮ್ಯ ಮಾತನಾಡಿ, ಚುನಾವಣೆಯ ಮಹತ್ವ, ಚುನಾವಣೆಯಿಂದ ಸಮಾಜಕ್ಕೆ ಆಗುವ ಉಪಯುಕ್ತತೆ ಹಾಗೂ ಇಂದು ನಮ್ಮ ಭಾರತ ದೇಶ ಪ್ರಪಂಚದಾದ್ಯಂತ ಗುರುತಿಸಿಕೊಳ್ಳಲು ಮುಖ್ಯ ಕಾರಣ ನಮ್ಮ ಸಂವಿಧಾನ. ಈ ಸಂವಿಧಾನದಲ್ಲಿ ಮತದಾನ ಒಂದು ಮೂಲಭೂತ ಹಕ್ಕು ಹಾಗೂ ರಾಜ್ಯದ ಪ್ರತಿಯೊಬ್ಬ ನಾಗರಿಕನಿಗೆ ನೀಡಿರುವ ಕರ್ತವ್ಯ. ಆ ಕರ್ತವ್ಯವನ್ನು ಚಲಾಯಿಸುವಾಗ ಪ್ರಜ್ಞಾವಂತ ನಾಗರಿಕರಾದ ನಾವು ಯಾವುದೇ ಭೌತಿಕ ಆಮಿಷಗಳಿಗೆ ಒಳಗಾಗದೆ ಪಾರದರ್ಶಕತೆಯಿಂದ, ನೈತಿಕವಾಗಿ ಮತವನ್ನು ಚಲಾಯಿಸಬೇಕು ಇದು ಪ್ರಜಾಪ್ರಭುತ್ವದ ಬಲಿಷ್ಠ ಅಸ್ತ್ರವಾಗಿದ್ದು, ಇದರಿಂದ ಮಾತ್ರ ದೇಶದ ಅಭಿವೃದ್ಧಿ, ದೇಶದ ನಿರ್ಮಾಣ ಸಾಧ್ಯವಾಗುತ್ತದೆ ಎಂದರು.

ಇದು ಪ್ರಜಾಪ್ರಭುತ್ವ ಸರ್ಕಾರ ಪ್ರಜೆಗಳಿಂದ ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಪ್ರಜೆಗಳು ನಡೆಸುವ ಸರ್ಕಾರ. ಆದ್ದರಿಂದ ಚುನಾವಣೆ ಒಂದೇ ನಮ್ಮ ಬಲಿಷ್ಠ ಅಸ್ತ್ರ. ಅದನ್ನು ನಮಗಷ್ಟೆ ಅಲ್ಲ ನಮ್ಮ ಮುಂದಿನ ಜನಾಂಗಕ್ಕೂ ಅನುಕೂಲವಾಗಿ ನಡೆಯುವಂತೆ ಮಾಡುವ ಒಬ್ಬ ಉತ್ತಮ ಜವಾಬ್ದಾರಿಯ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳಬೇಕು. ಪ್ರಸ್ತುತ ಸಮಾಜದಲ್ಲಿ ನಮ್ಮೆಲ್ಲರ ದೊಡ್ಡ ಸಮಸ್ಯೆ ಭ್ರಷ್ಟಚಾರ. ಅದನ್ನು ನಾವು ನಿರ್ಮೂಲನೆ ಮಾಡಬೇಕು. ಭ್ರಷ್ಟ ರಾಜಕಾರಣಿಯನ್ನು ಬೆಂಬಲಿಸಬಾರದು. ಆದ್ದರಿಂದ ಪ್ರತಿಯೊಬ್ಬ ನಾಗರಿಕನ ಮತದಾನ ಬಹಳ ಶ್ರೇಷ್ಠ. ಮತದಾನದಲ್ಲಿ ಭಾಗವಹಿಸಿ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡಿ ಭ್ರಷ್ಟ ಸರ್ಕಾರವನ್ನು ನಿರ್ಮೂಲನೆ ಮಾಡಿ ಎಂಬುದಾಗಿ ವಿವರಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ, ಕಾನೂನು ವಿಭಾಗದ ಸಹಾಯಕ ಪ್ರಾಧ್ಯಾಪಕಿ ಮಂಜುಳಾ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಮೋದಿ ಬರೀ ಸುಳ್ಳಿನ ಮೇಲೆ ಆಡಳಿತ ನಡೆಸುತ್ತಾ ಬಂದರು

### ಕೆಪಿಸಿಸಿ ಕಾರ್ಮಿಕ ಘಟಕದ ರಾಜ್ಯಾಧ್ಯಕ್ಷ ಕೆ.ಪುಟ್ಟಸ್ವಾಮಿಗೌಡ ಆರೋಪ



ಮೈಸೂರು ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ಮೈಸೂರು–ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಯ ಕಾರ್ಮಿಕರ ವಿಭಾಗದ ಪದಾಧಿಕಾರಿಗಳ ಸಭೆಯನ್ನು ಕೆಪಿಸಿಸಿ ಕಾರ್ಮಿಕ ಘಟಕದ ರಾಜ್ಯಾಧ್ಯಕ್ಷ ಕೆ.ಪುಟ್ಟಸ್ವಾಮಿಗೌಡ ಉದ್ಘಾಟಿಸಿದರು.

ಮೈಸೂರು,ಏ.18(ಎಸ್‌ಪಿಎನ್)–ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಸುಳ್ಳಿನ ಮೇಲೆ ಆಡಳಿತ ನಡೆಸುತ್ತಿದೆ ಎಂದು ಕೆಪಿಸಿಸಿ ಕಾರ್ಮಿಕ ಘಟಕದ ರಾಜ್ಯಾಧ್ಯಕ್ಷ ಕೆ.ಪುಟ್ಟಸ್ವಾಮಿಗೌಡ ತಿಳಿಸಿದರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ಮೈಸೂರು–ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಯ ಕಾರ್ಮಿಕರ ವಿಭಾಗದ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದರು.

ಮೋದಿ ನೇತೃತ್ವದ ಸರ್ಕಾರ ಉತ್ತಮ ಕೆಲಸ ಮಾಡಿದ್ದರೆ ಮೈಸೂರು–ಕೊಡಗು ಕ್ಷೇತ್ರದ ಸಂಸದ ಪ್ರತಾಪ ಸಿಂಹ ಸೇರಿದಂತೆ ದೇಶ್ಯಾದ್ಯಂತ 100ಕ್ಕೂ ಅಧಿಕ ಸಂಸದರಿಗೆ ಟಿಕೆಟ್ ತಪ್ಪಿಸುತ್ತಿರಲಿಲ್ಲ. ಕಳೆದ ಹತ್ತು ವರ್ಷದಲ್ಲಿ 14 ಕೋಟಿ ಜನ ಉದ್ಯೋಗ ಕಳೆದುಕೊಂಡಿದ್ದು, ಸಾರ್ವಜನಿಕರ ಉದ್ಯಮಗಳನ್ನು ಖಾಸಗಿಯವರೆಗೆ ಮಾರಾಟ ಮಾಡತ್ತಿರಲಿಲ್ಲ ಎಂದು ದೂರಿದರು.

ನೆಹರು, ಇಂದಿರಾಗಾಂಧಿ ಹಾಗೂ ರಾಜೀವ್ ಗಾಂಧಿ ಕಾಲದಿಂದ ಇಲ್ಲಿಯವರೆಗೆ ಕಾಂಗ್ರೆಸ್ ಪಕ್ಷ ಕಾರ್ಮಿಕರ ಪರ ಯೋಜನೆ ಜಾರಿ ಮಾಡಿದ್ದು, ಬಡ ಹಾಗೂ ಶೋಷಿತರ ಧ್ವನಿಯಾಗಿದೆ. ಬಿಜೆಪಿ ಆಡಳಿತದಲ್ಲಿ ಕಾರ್ಮಿಕರು ಕಡೆಗಣಿಸಲ್ಪಟ್ಟಿದ್ದಾರೆ. ಹೀಗಾಗಿ ಕಾಂಗ್ರೆಸ್ ಪ್ರಸ್ತುತ ಭಾರತಕ್ಕೆ ಅನಿವಾರ್ಯ ಎಂದರು.

ಕಟ್ಟಡ ಕಾರ್ಮಿಕ ಮಂಡಳಿ ರಚನೆ, ಮಹಿಳಾ ಸಬಲೀಕರಣ ಮುಂತಾದ ಯೋಜನೆಗಳನ್ನು ಕಾರ್ಮಿಕರಿಗಾಗಿ ಪಕ್ಷ ನೀಡಿದೆ. ಪಕ್ಷವು ಬಡವರ ವಿಷಯದಲ್ಲಿ ಚೆಲ್ಲಾಟವಾಡದೆ, ಜನರ ಆರ್ಥಿಕತೆ ಹಾಗೂ ಜೀವನ ಮಟ್ಟ ಉತ್ತಮಪಡಿಸುವ ಯೋಜನೆ ಜಾರಿಗೊಳಿಸಿದೆ. ಈ ಕಾರ್ಯಕ್ರಮಗಳ ಬಗ್ಗೆ ಮನೆಮನೆಗೆ ತಲುಪಿಸಲು ಕಾರ್ಮಿಕ ವಿಭಾಗದ ಪದಾಧಿಕಾರಿಗಳು ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಕಾಂಗ್ರೆಸ್ ಗ್ರಾಮಾಂತರ ಘಟಕದ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಚಾ.ನಗರ ಜಿಲ್ಲಾಧ್ಯಕ್ಷ ಮಹೇಶ್, ಕೊಡುಗು ಜಿಲ್ಲಾಧ್ಯಕ್ಷ ದಿನೇಶ್ ಶೆಟ್ಟಿ, ಕೆಪಿಸಿಸಿ ಕಾರ್ಮಿಕ ವಿಭಾಗದ ಪ್ರಧಾನ ಕಾರ್ಯದರ್ಶಿ ಹರಿಣಿ ಗೌಡ, ಕಾನೂನು ವಿಭಾಗದ ಸಲಹೆಗಾರ ಧನಂಜಯ್, ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನರೇಂದ್ರ, ಕಾರ್ಮಿಕ ವಿಭಾಗದ ಪ್ರಧಾನ ಕಾರ್ಯದರ್ಶಿ ಕಾಮಾಕ್ಷಿಗೌಡ ಉಪಸ್ಥಿತರಿದ್ದರು.


## ಲಕ್ಷ್ಮಣ್ ಗೆಲ್ಲಿಸುವುದು ನಮ್ಮೆಲರ ಹೊಣೆ

### ಕೆಪಿಸಿಸಿ ವಕ್ತಾರ ಮಹಾಂತೇಶ್ ಲಕ್ಷ್ಮಣ ಹಟ್ಟಿ

ಮೈಸೂರು, ಏ.18(ಜಿಎ)–ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಪಕ್ಷದ ಸಾಮಾನ್ಯ ಕಾರ್ಯಕರ್ತನಾಗಿ ಜನರ ಸಂಕಷ್ಟಗಳ ಪರಿಚಯ ಹೊಂದಿದ್ದಾರೆ. ಅವರನ್ನು ಗೆಲ್ಲಿಸುವುದು ನಮ್ಮೆಲ್ಲರ ಹೊಣೆಗಾರಿಕೆ ಎಂದು ಕಾಂಗ್ರೆಸ್ ರಾಜ್ಯ ವಕ್ತಾರ ಮಹಾಂತೇಶ ಲಕ್ಷ್ಮಣ ಹಟ್ಟಿ ಕರೆ ನೀಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಅಭ್ಯರ್ಥಿ ಯದುವೀರ್‌ಗೆ ಬಡವರ ಕಷ್ಟ ತಿಳಿದಿಲ್ಲ. ನರೇಂದ್ರ ಮೋದಿ ಪ್ರಧಾನಿ ಆದ ಮೇಲಂತೂ ದೇಶದ ಆಸ್ತಿ ಅದಾನಿ, ಅಂಬಾನಿ ಪಾಲಾಗಿದೆ. ಚುನಾವಣಾ ಬಾಂಡ್ ವಿಚಾರದಲ್ಲಿ ಸುಪ್ರೀಂಕೋರ್ಟ್ ಛೀಮಾರಿ ಹಾಕಿದರೂ ಕೇಂದ್ರದ ಯಾವೊಬ್ಬ ಸಚಿವರು ಮಾತನಾಡುತ್ತಿಲ್ಲ. ಈ ಭ್ರಷ್ಟ ಸರ್ಕಾರ ಮತ್ತೆ ಬರದಂತೆ ತಡೆಯಬೇಕು ಎಂದರು.

ಸಂವಿಧಾನ ಬದಲಾವಣೆ ಮಾಡುತ್ತೇವೆ ಎಂದು ಹೇಳುವವರಿಗೆ ಜನರು ತಕ್ಕ ಪಾಠ ಕಲಿಸಬೇಕು. ಇಂದು ಎಲ್ಲಾ ಉನ್ನತ ಅಧಿಕಾರ ಹುದ್ದೆಗಳಲ್ಲಿ ಮೇಲ್ವರ್ಗದವರನ್ನೇ ನಿಯೋಜಿಸಿದ್ದು ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರಿಗೆ ಅವಕಾಶವಿಲ್ಲ. ಈ ಸ್ಥಿತಿಗೆ ಜನರು ಮುಕ್ತಿ ನೀಡಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ಮುಖಂಡರಾದ ಕಂಸಾಳೆ ರವಿ, ಎ.ಎಚ್.ಕೃಷ್ಣೇಗೌಡ, ರುದ್ರೇಶ್ ದೊಡ್ಡಮನಿ, ನಟರಾಜ್, ಶಶಿಧರ್, ರಂಗಸ್ವಾಮಿ ಹಾಗೂ ವರುಣ ಮಹದೇವ್ ಉಪಸ್ಥಿತರಿದ್ದರು.



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಎಂ. ಲಕ್ಷ್ಮಣ್ ಪರವಾಗಿ ಕೃಷ್ಣರಾಜ ಕ್ಷೇತ್ರದ ವಾರ್ಡ್ ನಂ. 44ರಲ್ಲಿ ಮಾಜಿ ಶಾಸಕ ಎಂಕೆ ಸೋಮಶೇಖರ್, ಮುಡಾ ಅಧ್ಯಕ್ಷ ಮಾಜಿ ಹೆಚ್.ವಿ.ರಾಜೀವ್, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ, ಪಾಲಿಕೆ ಮಾಜಿ ಸದಸ್ಯರಾದ ಗೋಪಿ, ಶೋಭಾ, ಕೆ ವಿ ಮಲ್ಲೇಶ್ ಮತಯಾಚನೆ ಮಾಡಿದರು.

## ಅಚ್ಛೇದಿನ್ ಬರುವುದು ಯಾವಾಗ: ಹರೀಶ್‌ಗೌಡ



ಮೈಸೂರು,ಏ.18–ಮತದಾರರಿಗೆ ಭರಪೂರ ಭರವಸೆ ನೀಡಿ ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದು 10 ವರ್ಷ ಕಳೆದಿದೆ. ದೇಶಕ್ಕೆ ಅಚ್ಛೇ ದಿನ್ ಬರುವುದು ಯಾವಾಗ ಎಂದು ಶಾಸಕ ಕೆ.ಹರೀಶ್‌ಗೌಡ ಪ್ರಶ್ನಿಸಿದರು.

ಮೈಸೂರಿನ ಲೋಕ ನಾಯಕ ನಗರ, ಜನತಾ ನಗರ, ಜಯಲಕ್ಷ್ಮಿ ಪುರಂ, ಮನೆ ಮನೆಗೆ ತೆರಳಿ ಸರ್ಕಾರದ ಐದು ಗ್ಯಾರಂಟಿಗಳ ಕರಪತ್ರ ವಿತರಿಸಿ, ಮಾತನಾಡಿದರು.

ಅದಾನಿ, ಅಂಬಾನಿ ಪರ ಆಡಳಿತ ನಡೆಸುವ ಮೂಲಕ ಬಡವರು, ಕೂಲಿ ಕಾರ್ಮಿಕರು ಹಾಗೂ ಸಾಮಾನ್ಯ ಜನರನ್ನು ಬೀದಿಗೆ ತಳ್ಳುತ್ತಿದ್ದಾರೆ. ದೇಶದ ಜನರು ಕೇಂದ್ರ ಸರ್ಕಾರಕ್ಕೆ ತಕ್ಕ ಪಾಠ ಕಲಿಸಲಿದ್ದಾರೆ. ಕೇಂದ್ರದಲ್ಲಿ ಕಾಂಗ್ರೆಸ್ ಆಡಳಿತ ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು. ನಗರ ಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು, ಕೇಬಲ್ ನಾಗರಾಜ್, ಕೃಷ್ಣಪ್ಪ, ಸುಪ್ರೀಂ ಮಂಜು, ಮಾಜಿ ಮುಡಾ ಸದಸ್ಯ ಭಾಸ್ಕರ್ ಇದ್ದರು.

## ರಾಜರಾಜೇಶ್ವರಿನಗರದಲ್ಲಿ ಮತದಾನ ಜಾಗೃತಿ ಅಭಿಯಾನ




ಮೈಸೂರು ಜಿಲ್ಲಾ ಕಸಾಪ ಹಾಗೂ ರಾಜರಾಜೇಶ್ವರಿನಗರ ಗೆಳತಿ ಮಹಿಳಾ ಮಂಡಳಿ ಸಹಯೋಗದೊಂದಿಗೆ ನಡೆದ ಮತದಾನ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಮೈಸೂರು,ಏ.18(ಎಸ್‌ಪಿಎನ್)–2024ರ ಲೋಕಸಭಾ ಚುನಾವಣೆಯಲ್ಲಿ ಪ್ರತಿಯೊಬ್ಬ ಮತದಾರನು ತಪ್ಪದೇ ಮತದಾನ ಮಾಡುವ ಮೂಲಕ ವಿಶ್ವಮಟ್ಟದಲ್ಲಿ ಭಾರತದ 'ಪ್ರಜಾಪ್ರಭುತ್ವ' ಹಬ್ಬದ ಗೌರವ ಹೆಚ್ಚಾಗುವಂತೆ ನೋಡಿಕೊಳ್ಳುವುದು ಕರ್ತವ್ಯವಾಗಿದೆ ಎಂದು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಭಿಪ್ರಾಯಪಟ್ಟರು.

ಮೈಸೂರು ರಾಜರಾಜೇಶ್ವರಿ ನಗರದ ಶ್ರೀ ರಾಜರಾಜೇಶ್ವರಿ ದೇವಸ್ಥಾನದ ಮುಂಭಾಗದಲ್ಲಿ ಜಿಲ್ಲಾ ಕಸಾಪ ಹಾಗೂ ರಾಜರಾಜೇಶ್ವರಿ ನಗರ ಗೆಳತಿ ಮಹಿಳಾ ಮಂಡಳಿ ಸಹಯೋಗದೊಂದಿಗೆ ದೇವಸ್ಥಾನ ಆವರಣದಿಂದ ನಾರಾಯಣ ಬೇಕರಿ ವೃತ್ತದವರೆಗೆ ನಡೆದ ಮತದಾನ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಮೈಸೂರಿನ ಜನತೆಯ ಪ್ರತಿಯೊಂದು ಮತವು ದೇಶವನ್ನು ಸದೃಢಗೊಳಿಸಲು ಸಹಕಾರಿಯಾಗುತ್ತದೆ ಹಾಗೂ ಬೃಹತ್ ಪ್ರಜಾಪ್ರಭುತ್ವದ ಹಬ್ಬದಲ್ಲಿ ಸರ್ಕಾರ ಎಚ್ಚರ ತಪ್ಪಿದಾಗ ನಿಮ್ಮ ಪಾಲಿನ ಹಕ್ಕನ್ನು ಪ್ರಶ್ನಿಸಲು ಅನುಕೂಲವಾಗುತ್ತದೆ. ಹಾಗಾಗಿ ಪ್ರತಿಯೊಂದು ಮತದಾರ, ಆಯಾಯ ಕ್ಷೇತ್ರದ ಮತದಾನ ದಿನದಂದು ದೇಶದ ಭವಿಷ್ಯಕ್ಕಾಗಿ ಸ್ವಯಂ ಪ್ರೇರಿತರಾಗಿ ಮತದಾನದಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

ದೇಶದ ಮತದಾರರು ಆಯಾಯ ಲೋಕಸಭಾ ಕ್ಷೇತ್ರದಲ್ಲಿ ಸಭ್ಯ ವ್ಯಕ್ತಿಯನ್ನು ಆಯ್ಕೆ ಮಾಡದಿದ್ದರೆ, ದೇಶವನ್ನು ಅಧೋಗತಿಗೆ ಹೋಗಲು ನಾವು ಸಹ ಪರೋಕ್ಷವಾಗಿ ಕಾರಣರಾಗುತ್ತೇವೆ. ಹಾಗಾಗಿ ಇಂತಹ ಅವಘಡಕ್ಕೆ ಅವಕಾಶ ಮಾಡಿಕೊಡದೇ ತಪ್ಪದೇ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ರಾಜರಾಜೇಶ್ವರಿ ನಗರ ಸೇರಿದಂತೆ ಇಲ್ಲಿನ ಸುತ್ತಮುತ್ತಲಿನ ಬಡಾವಣೆಗಳ ಮತದಾರರು ತಪ್ಪದೇ ನಿಮಗಿಷ್ಟವಾದ ವ್ಯಕ್ತಿಗೆ, ಪಕ್ಷಕ್ಕೆ ಮತ ಹಾಕುವಂತೆ ಸಲಹೆ ನೀಡಿದರು.

**ಶ್ರೀರಾಮನವಮಿ:** ಇದಕ್ಕೂ ಮುನ್ನ ಶ್ರೀರಾಮ ನವಮಿ ಪ್ರಯುಕ್ತ ರಾಜರಾಜೇಶ್ವರಿ ನಗರ ಗೆಳತಿ ಮಹಿಳಾ ಮಂಡಳಿ ಸದಸ್ಯರಿಂದ ರಾಜರಾಜೇಶ್ವರಿ ದೇವಸ್ಥಾನದ ಆವರಣದಲ್ಲಿ ಶ್ರೀರಾಮ, ಲಕ್ಷ್ಮಣ ಹಾಗೂ ಸೀತಾಮಾತೆ ಇರುವ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಭಕ್ತಿಗೀತೆಗಳನ್ನು ಹಾಡಿ ಎಲ್ಲರ ಗಮನ ಸೆಳೆದರು. ಈ ವೇಳೆ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಮ.ನ.ಲತಾಮೋಹನ್, ಚೀಲೂರು ಚಂದ್ರಶೇಖರ್, ಖಜಾಂಜಿ ಜಿ.ಪ್ರಕಾಶ್, ಜಂಟಿ ಕಾರ್ಯದರ್ಶಿ ಕೆ.ಕೆಂಪಣ್ಣ, ಸಂಘಟನಾ ಕಾರ್ಯ ದರ್ಶಿ ಮೈ.ನಾ. ಲೋಕೇಶ್, ರಾಜರಾಜೇಶ್ವರಿ ನಗರ ಗೆಳತಿ ಮಹಿಳಾ ಮಂಡಳಿ ಅಧ್ಯಕ್ಷೆ ವಿಜಯಾ ಪಾಟೀಲ್, ಉಪಾಧ್ಯಕ್ಷ ಚಂದ್ರಕಲಾ ಬೆಳ್ಳಿಯಪ್ಪ, ಕಾರ್ಯದರ್ಶಿ ರೇವತಿ ರಾಮಸ್ವಾಮಿ, ಎನ್.ಅನಂತ ಸೇರಿದಂತೆ ಉಪಸ್ಥಿತರಿದ್ದರು.


### ಮತದಾನದ ಮಹತ್ವ ಸಾರುವ ಫಲಕ ಪ್ರದರ್ಶನ

'ನಿಮ್ಮ ಒಂದೊಂದು ಮತವೂ ದೇಶಕ್ಕೆ ಹಿತ', 'ಮಾರಬೇಡಿ ಮತವನ್ನು ಚಲಾಯಿಸಿ ನಿಮ್ಮ ಹಕ್ಕನ್ನು', 'ನಿಮ್ಮ ಮತ–ನಿಮ್ಮ ಧ್ವನಿ ಬೇಗ ಹೋಗಿ ಮತ ಹಾಕಿ', 'ನಿಮ್ಮ ನಾಯಕರ ಆಯ್ಕೆ ನಿಮ್ಮ ಕೈಯ್ಯಲ್ಲಿದೆ', 'ಬನ್ನಿರಪ್ಪ ಬನ್ನಿರಿ ಮತಗಟ್ಟೆಗೆ ಬಂದು ನಿಮ್ಮ ಮತ ಚಲಾಯಿಸಿ', 'ಮರೆಯದೇ ಮತದಾನ ಮಾಡಿ ಪ್ರಜಾಪ್ರಭುತ್ವವನ್ನು ಗೌರವಿಸಿ' ಎಂಬ ಫಲಕಗಳನ್ನು ಪ್ರದರ್ಶಿಸಿದರು.

# ಗಾಂಜಾ ಮಾರುತ್ತಿದ್ದ ಮೂವರ ಬಂಧನ


ಶಂಷುದ್ದೀನ್


ಸಿ.ವೈ. ಇಸಾಕ್


ಎಂ.ಜಿ ನಂದಕುಮಾರ್

ವಿರಾಜಪೇಟೆ, ಏ.18– ನಿಷೇಧಿತ ಮಾದಕ ವಸ್ತು ಗಾಂಜಾವನ್ನು ಮಾರಾಟ ಮಾಡುತ್ತಿದ್ದ ಎರಡು ಪ್ರತ್ಯೇಕ ಪ್ರಕರಣ ಗಳನ್ನು ಪತ್ತೆ ಹಚ್ಚಿರುವ ವಿರಾಜಪೇಟೆ ಪೊಲೀ ಸರು ಒಟ್ಟು ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಮೂಲತಃ ಕೇರಳ ಮೂಲದ ವಿರಾಜಪೇಟೆ ಮೀನುಪೇಟೆ ನಿವಾಸಿ ಶಂಷು ದ್ದೀನ್(36), ಎಡಪಾಲ ನಿವಾಸಿಗಳಾದ ಸಿ.ವೈ. ಇಸಾಕ್(34) ಮತ್ತು ಎಂ.ಜಿ ನಂದ ಕುಮಾರ್(45) ಅವರುಗಳನ್ನು ಬಂಧಿಸ ಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿರಾಜಪೇಟೆಯ ಮೀನುಪೇಟೆ ಮತ್ತು ಪೆರುಂಬಾಡಿ ನವನಗರದ ಬಸ್ ನಿಲ್ದಾ ಣದ ಬಳಿ ಗಾಂಜಾ ಮಾರಾಟ ಮಾಡುತ್ತಿ ರುವ ಬಗ್ಗೆ ಖಚಿತ ಮಾಹಿತಿ ಪೊಲೀಸ ರಿಗೆ ಲಭಿಸಿತ್ತು. ಈ ಹಿನ್ನೆಲೆಯಲ್ಲಿ ದಾಳಿ ನಡೆಸಿದ ಪೊಲೀಸರು ಮಾಲು ಸಹಿತ 3 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರಿಂದ ಒಟ್ಟು 2 ಕೆ.ಜಿ. 960 ಗ್ರಾಂ ಗಾಂಜಾ ಮತ್ತು ಕೃತ್ಯಕ್ಕೆ ಬಳಸಿದ್ದ 1 ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆ ಯಲಾಗಿದೆ. ವಿರಾಜಪೇಟೆ ಡಿವೈಎಸ್‌ಪಿ ಆರ್.ಮೋಹನ ಕುಮಾರ್, ವೃತ್ತ ನಿರೀಕ್ಷಕ ಬಿ.ಎಸ್. ಶಿವರುದ್ರಪ್ಪ, ಠಾಣಾಧಿಕಾರಿ ರವೀಂದ್ರ, ಮತ್ತು ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

# ಹುಲಿ ದಾಳಿಗೆ ವ್ಯಕ್ತಿ ಸಾವು

## ನಿಟ್ಟೂರು ಬಳಿ ದನ ಮೇಯಿಸುತ್ತಿದ್ದಾಗ ದುರಂತ

ಮಡಿಕೇರಿ,ಏ.18– ದನ ಮೇಯಿಸುತ್ತಿದ್ದ ವ್ಯಕ್ತಿಯ ಮೇಲೆ ಹುಲಿ ದಾಳಿ ಮಾಡಿ ಕೊಂದು ಹಾಕಿರುವ ಘಟನೆ ಪೊನ್ನಂಪೇಟೆ ತಾಲೂ ಕಿನ ನಿಟ್ಟೂರು ಗ್ರಾಮದಲ್ಲಿ ನಡೆದಿದೆ. ಅಸ್ಸಾಂ ಮೂಲದ ಕಾರ್ಮಿಕ ಮುಜೀದ್ ರೆಹಮಾನ್(55) ಮೃತ ದುರ್ದೈವಿ.

ಎಂದಿನಂತೆ ಕಾರ್ಮಿಕ ಮುಜೀದ್ ರೆಹ ಮಾನ್(55) ಅವರು ನಿಟ್ಟೂರು ಗ್ರಾಮ ಸಮೀಪ ಯಿತಿ ವ್ಯಾಪ್ತಿಯ ಜಾಗಲೆ ಎಂಬಲ್ಲಿ ತಮ್ಮ ಮಾಲೀಕ ಮಲಚೀರ ಅವಿನಾಶ್ ಅವರ ದನಗಳನ್ನು ಮೇಯಿಸುತ್ತಿದ್ದರು. ಸಂಜೆ ವೇಳೆ ಏಕಾಏಕಿ ಹುಲಿ ಮುಜೀದ್ ರೆಹಮಾನ್ ಅವರ ಕುತ್ತಿಗೆ ಮತ್ತು ತಲೆಯ ಭಾಗಕ್ಕೆ ದಾಳಿ ನಡೆಸಿದ್ದು, ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮುಜೀದ್ ರೆಹಮಾನ್ ಅವರ ತಲೆಯ ಭಾಗಶಃ ಭಾಗವನ್ನು ಹುಲಿ ತಿಂದು ಹಾಕಿದೆ. ಈ ಘಟನೆಯಿಂದ ದಕ್ಷಿಣ ಕೊಡಗಿನ ಗ್ರಾಮಸ್ಥರು ಬೆಚ್ಚಿ ಬಿದ್ದಿದ್ದಾರೆ. ಘಟನಾ ಸ್ಥಳಕ್ಕೆ ಪೊನ್ನಂಪೇಟೆ, ತಿತಿಮತಿ ವ್ಯಾಪ್ತಿಯ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಆಗಮಿಸಿ ಪರಿಶೀಲನೆ ನಡೆಸಿದರು.

ಹುಲಿ ದಾಳಿಯಿಂದ ಮಾನವ ಜೀವ ಹಾನಿಯಾಗಿರುವ ಹಿನ್ನೆಲೆಯಲ್ಲಿ ಗ್ರಾಮಸ್ಥರು ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿ ಸಿದ್ದಾರೆ. ಈ ಭಾಗದಲ್ಲಿ ಹುಲಿ ಜಾನು ವಾರುಗಳ ಮೇಲೆ ನಿರಂತರವಾಗಿ ದಾಳಿ ನಡೆಸಿ ಕೊಂದು ಹಾಕುತ್ತಿತ್ತು. ಹುಲಿ ಸೆರೆಗೆ ಕಾರ್ಯಾಚರಣೆ ನಡೆಸುವಂತೆ ಅರಣ್ಯ ಇಲಾಖೆಗೆ ಆಗ್ರಹಿಸಿದ್ದರೂ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಇದೀಗ ಹುಲಿ ಮಾನವನ ಮೇಲೆ ದಾಳಿ ನಡೆಸಿ ಕೊಂದು ಹಾಕಿದ್ದು, ಇದಕ್ಕೆ ಅರಣ್ಯ ಇಲಾಖೆಯೇ ನೇರ ಹೊಣೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಘಟನೆ ಕುರಿತು ಪೊನ್ನಂಪೇಟೆ ಪೊಲೀಸ್ ಠಾಣೆ ಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

# ಗಮನ ಸೆಳೆದ ಕೊಡವ ಕೌಟುಂಬಿಕ ಹಗ್ಗಜಗ್ಗಾಟ ಕ್ರೀಡಾಕೂಟ

ನಾಪೋಕ್ಲು, ಏ.18– ಜಿಲ್ಲೆಯಲ್ಲಿ ಕೊಡವ ಹಾಕಿ ಉತ್ಸವದಂತೆ ಹಗ್ಗಜಗ್ಗಾಟ ಕ್ರೀಡೆಯೂ ಪ್ರಸಿದ್ಧಿ ಹೊಂದಬೇಕು ಎಂದು ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೊಡಂದೇರ ಬಾಂಡ್ ಗಣಪತಿ ಹೇಳಿದರು.

ಇಲ್ಲಿನ ಕೆಪಿಎಸ್ ಶಾಲೆಯ ಆಟದ ಮೈದಾ ನದಲ್ಲಿ ಬೊಟ್ಟೋಳಂಡ ಕುಟುಂಬಸ್ಥರು ಆಯೋಜಿಸಿದ್ದ ಮೂರನೇ ವರ್ಷದ ಕೊಡವ ಕೌಟುಂಬಿಕ ಹಗ್ಗಜಗ್ಗಾಟ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಮೊಟ್ಟ ಮೊದಲು ಬಾರಿ ಪೊನ್ನೋಲತಂಡ ಕುಟುಂಬಸ್ಥರು ಕೊಡವ ಹಗ್ಗಜಗ್ಗಾಟ ಕ್ರೀಡಾ ಕೂಟವನ್ನು ಆರಂಭಿಸಿದ್ದರು. ನಂತರದ ದಿನ ಗಳಲ್ಲಿ ಇದು ಹಾಕಿ ನಮ್ಮೆಯಂತೆ ಉನ್ನತ ಮಟ್ಟಕ್ಕೆ ಬೆಳೆಯುತ್ತಿದೆ. ಈ ಬಾರಿ 9 ಮಹಿಳಾ ತಂಡಗಳು ಕೂಡ ಪಾಲ್ಗೊಂಡಿರುವುದು ವಿಶೇಷ ಎಂದರು. ಕೊಡವ ಜನಾಂಗದಲ್ಲಿ ಹಬ್ಬದ ರೂಪದಲ್ಲಿ ಕ್ರೀಡೆಯನ್ನು ಆಚರಿಸ ಲಾಗುತ್ತಿದೆ. ಮುಂದಿನ ವರ್ಷ ಐದು ತಂಡ ಗಳು ಸ್ಪರ್ಧೆ ಆಯೋಜಿಸಲು ಮುಂದೆ ಬಂದಿ ರುವುದು ಹೆಮ್ಮೆಯ ವಿಷಯ ಎಂದರು.

ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರ ದಂಡ ಸುಬ್ರಮಣಿ ಕಾವೇರಪ್ಪ ಮಾತನಾಡಿ, ಕಣ್ಮರೆಯಲ್ಲಿದ್ದ ಮೊದಲ ಬಾರಿಗೆ ಪೊನ್ನೋ ಲತಂಡ ಕುಟುಂಬಸ್ಥರು ಕೌಟುಂಬಿಕ ಹಗ್ಗ ಜಗ್ಗಾಟ ಸ್ಪರ್ಧೆಯನ್ನು ಆಯೋಜಿಸಿದರು. ಕೊಡವ ಕುಟುಂಬಗಳ ನಡುವಿನ ಬಲಾಬಲ ಗಳನ್ನು ಪ್ರದರ್ಶಿಸಲು ಈ ಕ್ರೀಡಾಕೂಟ ಸಹಕಾರಿಯಾಗಲಿದೆ ಅದರೊಂದಿಗೆ ಕುಟುಂಬ ಗಳ ನಡುವಿನ ಪ್ರೀತಿ, ಸ್ನೇಹ, ಸಾಮರಸ್ಯಕ್ಕೂ ನಾಂದಿಯಾಗಲಿದೆ ಎಂದ ಅವರು, ಯಾವುದೇ ತೊಂದರೆ ಇಲ್ಲದೆ ಸುಸೂತ್ರ ವಾಗಿ ಜರುಗಲಿ ಎಂದು ಶುಭ ಹಾರೈಸಿದರು.


ಬೊಟ್ಟೋಳಂಡ ಕುಟುಂಬಸ್ಥರು ಆಯೋಜಿಸಿದ್ದ ಕೊಡವ ಕೌಟುಂಬಿಕ ಕ್ರೀಡಾಕೂಟದಲ್ಲಿ ಮಹಿಳೆಯರ ಹಗ್ಗಜಗ್ಗಾಟ ಗಮನ ಸೆಳೆಯಿತು.


ಕ್ರೀಡಾಕೂಟದ ಅಂಗವಾಗಿ ನಡೆದ ಮೆರವಣಿಗೆಯಲ್ಲಿ ಕೊಡವ ಮಹಿಳೆಯರ ಆಕರ್ಷಕ ಕೊಡವ ನೃತ್ಯ

ಕೊಡಗು ಡಿಸಿಸಿ ಬ್ಯಾಂಕ್‌ನ ಉಪಾಧ್ಯಕ್ಷ ಕೇಟೋಳಿರ ಹರೀಶ್ ಪೂವಯ್ಯ ಮಾತ ನಾಡಿ, ಕ್ರೀಡೆಯಿಂದ ಸಮಾಜದಲ್ಲಿ ಪರಸ್ಪರ ಸಾಮರಸ್ಯ ಮೂಡಲು ಸಹಕಾರಿ ಎಂದ ಅವರು, ಜೊತೆಯಲ್ಲಿ ಆರೋಗ್ಯ ಹಾಗೂ ಶಿಸ್ತಿಗೆ ಪೂರಕವಾಗಿದೆ ಎಂದು ಕಾರ್ಯ ಕ್ರಮಕ್ಕೆ ಶುಭ ಹಾರೈಸಿದರು.

ಕರ್ನಾಟಕ ಪಬ್ಲಿಕ್ ಶಾಲೆಯ ಪ್ರಾಂಶು ಪಾಲರಾದ ಮೇದುರ ವಿಶಾಲ ಕುಶಾಲಪ್ಪ ಮಾತನಾಡಿ ಪೊನ್ನೋಲತಂಡ ಕುಟುಂಬ ಸ್ಥರು ಕೊಡವ ಜನಾಂಗದ ದೈಹಿಕ ಸಾಮ ರ್ಥ್ಯವನ್ನು ಪ್ರದರ್ಶಿಸಲು ಆರಂಭಿಸಿದ ಹಗ್ಗಜಗ್ಗಾಟ ಸ್ಪರ್ಧೆ ವರ್ಷದಿಂದ ವರ್ಷಕ್ಕೆ ಜನಪ್ರಿಯವಾಗುತ್ತಿದೆ. ಕುಟುಂಬಗಳ ನಡುವೆ ಬಾಂಧವ್ಯ ವೃದ್ಧಿಸಲು ಕ್ರೀಡೆ ಸಹಕಾರಿಯಾಗಿದೆ ಎಂದರು.

ಆಶಿಕಾ ಬೋಪಣ್ಣ ಪ್ರಾರ್ಥಿಸಿದರು. ಬೊಟ್ಟೋಳಂಡ ಗಣೇಶ್ ಗಣಪತಿ ಸ್ವಾಗತಿಸಿ, ಮಾಳೇಟಿರ ಶ್ರೀನಿವಾಸ್ ಮತ್ತು ಬಾಳೆಯಡ ದಿವ್ಯ ಮಂದಪ್ಪ ಕಾರ್ಯಕ್ರಮ ನಿರೂಪಿ ಸಿದರು. ಭವಾನಿ ಜಗದೀಶ್ ವಂದಿಸಿದರು.

**ಪ್ರಥಮ ಬಹುಮಾನ:** ಮಡಿಕೇರಿ ಕೊಡವ ಸಮಾಜ ಮತ್ತು ನಾಪೋಕ್ಲು ಕೊಡವ ಸಮಾಜ ಮಹಿಳಾ ತಂಡಗಳ ನಡುವೆ ನಡೆದ ಪ್ರಥಮ ಬಹುಮಾನದ ಪಂದ್ಯದಲ್ಲಿ ನಾಪೋಕ್ಲು ತಂಡ ಗೆಲುವು ಸಾಧಿಸಿದರೆ ನಾಪೋಕ್ಲು ಮತ್ತು ಅಮ್ಮತಿ ಕೊಡವ ಸಮಾಜದ ಪುರುಷರ ತಂಡ ಪಂದ್ಯಾಟದಲ್ಲಿ ನಾಪೋಕ್ಲು ತಂಡ ಗೆಲುವು ಸಾಧಿಸಿತು.

ಅಧ್ಯಕ್ಷತೆಯನ್ನು ಬೊಟ್ಟೋಳಂಡ ಕುಟುಂ ಬದ ಕ್ರೀಡಾ ಸಮಿತಿ ಅಧ್ಯಕ್ಷ ಬೊಟ್ಟೋಳಂಡ ಜಗದೀಶ್ ಗಣಪತಿ ವಹಿಸಿದ್ದರು. ಉದ್ಘಾಟನಾ ಸಮಾರಂಭದಲ್ಲಿ ಪೆರೂರು ಗ್ರಾಮದ ಕುಟುಂ ಬದ ಪಟ್ಟೆದಾರ ಬೊಟ್ಟೋಳಂಡ ಪೂಣಚ್ಚ, ಟೂರ್ನಮೆಂಟ್ ಫೌಂಡರ್ ಪೊನ್ನೋಲತಂಡ ಕಿರಣ್ ಪೊನ್ನಪ್ಪ, ಪೊನ್ನೋಲತಂಡ ಕುಟುಂಬದ ಅಧ್ಯಕ್ಷ ಪೊನ್ನೋಲತಂಡ ಐಯ್ಯಪ್ಪ, ಚೆಟ್ಟಂಗಡ ಕುಟುಂಬದ ಕಾರ್ಯದರ್ಶಿ ಚೆಟ್ಟಂ ಗಡ ರವಿ ಸುಬ್ಬಯ್ಯ, ಬೊಟ್ಟೋಳಂಡ ಕಾಫಿ ಹಿರಿಯರಾದ ಬಿ.ಡಿ.ಐಯ್ಯಪ್ಪ, ಬೊಟ್ಟೋಳಂಡ ವಾಸು ಮುತ್ತಪ್ಪ, ಕುಟುಂಬದ ಸದಸ್ಯರು ಪಾಲ್ಗೊಂಡಿದ್ದರು.

**ಆಕರ್ಷಕ ಮೆರವಣಿಗೆ:** ಹಗ್ಗಜಗ್ಗಾಟ ಸ್ಪರ್ಧಾ ಕಾರ್ಯಕ್ರಮದಂದು ಬೆಳಿಗ್ಗೆ ನಾಪೋಕ್ಲು ರಾಮಮಂದಿರದಲ್ಲಿ ಪೂಜೆ ಸಲ್ಲಿಸಿ ಪಟ್ಟಣದಿಂದ ಆಟದ ಮೈದಾನ ದವರೆಗೆ ಅಬಾಲವೃದ್ಧರಾದಿಯಾಗಿ ಕೊಡವ ಸಾಂಪ್ರದಾಯಿಕ ದಿರಿಸಿನಲ್ಲಿ ದುಡಿಕೊಟ್ ಪಾಟ್‌ನೊಂದಿಗೆ ಆಕರ್ಷಕ ಮೆರವಣಿಗೆ ನಡೆಯಿತು. ಮೈದಾನದಲ್ಲಿ ಕ್ರೀಡಾ ಧ್ವಜಾರೋಹಣವನ್ನು ಅತಿಥಿಗಳು ನೆರವೇರಿಸಿದರು. ವೇದಿಕೆ ಉದ್ಘಾಟನೆಯನ್ನು ಕುಟುಂಬದ ಪಟ್ಟೆದಾರ ಬೊಟ್ಟೋಳಂಡ ಪೂಣಚ್ಚ ವೇದಿಕೆಯಲ್ಲಿದ್ದ ಗಣ್ಯರು ನೆರವೇ ರಿಸಿದರು. ಕರ್ನಾಟಕ ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಮೇದುರ ವಿಶಾಲ ಕುಶಾಲಪ್ಪ ಬೊಟ್ಟೋಳಂಡ ಕಪ್ ಟ್ರೋಫಿಯನ್ನು ಅನಾವರಣಗೊಳಿಸಿದರು.

# 200 ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಕಾಂಗ್ರೆಸ್ ಪ್ರಧಾನಿ ಕನಸು ಕಾಣುತ್ತಿದೆ

ಕುಶಾಲನಗರ, ಏ.18– ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಕೇವಲ 200 ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಕಾಂಗ್ರೆಸ್ ಪ್ರಧಾನಿ ಕನಸು ಕಾಣುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ಲೇವಡಿ ಮಾಡಿದರು.

ಇಲ್ಲಿನ ಗೌಡ ಸಮಾಜದ ಸಭಾಂಗಣ ದಲ್ಲಿ ಗುರುವಾರ ಆಯೋಜಿಸಿದ್ದ ಬಿಜೆಪಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಕೇವಲ 200 ಸ್ಥಾನಗಳಿಗೆ ಮಾತ್ರ ಸ್ಪರ್ಧೆ ಮಾಡಿದೆ. ಪ್ರಧಾನಿ ಆಗಬೇಕಾ ಅಂದ್ರೆ 271ಕ್ಕಿಂತ ಹೆಚ್ಚು ಸ್ಥಾನ ಗೆಲ್ಲಬೇಕು. ಆದರೆ 270 ಕ್ಷೇತ್ರದಲ್ಲಿ ಸ್ಪರ್ಧೆ ಮಾಡದ ಕಾಂಗ್ರೆಸ್ 150 ರಿಂದ 180 ಸ್ಥಾನಕ್ಕೆ ಬಿಜೆಪಿ ಕುಸಿಯುತ್ತದೆ ಎಂದು ಹೇಳುತ್ತದೆ. ಕಾಂಗ್ರೆಸ್‌ನವರು ಆಡಳಿತ ಮಾಡುತ್ತಾರೆ ಅಂದರೆ ಹಾಸ್ಯಾಸ್ಪದವಾಗಿದೆ ಎಂದು ಟೀಕಿಸಿದರು.


ಕುಶಾಲನಗರ ಗೌಡ ಸಮಾಜದ ಸಭಾಂಗಣದಲ್ಲಿ ಆಯೋಜಿಸಿದ್ದ ಬಿಜೆಪಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ಮಾತನಾಡಿದರು.

ದೇಶದಲ್ಲಿ ಅತಿ ದೊಡ್ಡ ಪಕ್ಷವಾದ ಬಿಜೆಪಿ ಒಂದೆ 400ಕ್ಕೂ ಹೆಚ್ಚು ಕ್ಷೇತ್ರದಲ್ಲಿ ಸ್ಪರ್ಧೆ ಮಾಡುತ್ತಿದ್ದು, ಈ ಬಾರಿಯ ಲೋಕ ಸಭಾ ಚುನಾವಣೆಯಲ್ಲಿ ಎನ್.ಡಿ.ಎ ಮೈತ್ರಿ ಕೂಟ 400ಕ್ಕಿಂತ ಹೆಚ್ಚು ಸ್ಥಾನ ಪಡೆ ಯಲಿದೆ ಎಂದು ಮಾಜಿ ಮುಖ್ಯಮಂತ್ರಿ ಸದಾನಂದಗೌಡ ಭವಿಷ್ಯ ನುಡಿದರು.

ರಾಮನವಮಿ ವೇಳೆ ರಾಮ ಭಕ್ತರ ಮೇಲಿನ ಹಲ್ಲೆ ಪ್ರಕರಣ ಖಂಡನೀಯ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾ ರಕ್ಕೆ ಬಂದ ಕೂಡಲೇ ಕಾನೂನು ಸುವ್ಯವಸ್ಥೆ ಅಧಃಪತನಕ್ಕೆ ಹೋಗುತ್ತಿದೆ. ಭಯೋತ್ಪಾ ದಕರಿಗೆ, ಕಾನೂನು ಸುವ್ಯವಸ್ಥೆ ಹಾಳು ಮಾಡುವವರಿಗೆ ಕಾಂಗ್ರೆಸ್‌ನ ಕಾಲಘಟ್ಟ ಸ್ವರ್ಗವಾಗುತ್ತದೆ. ರಾಜ್ಯದಲ್ಲಿ ಕಾಂಗ್ರೆಸ್ ಬಂದಿರೋದೆ ದುರ್ದೈವ ಎಂದು ಕಾಂಗ್ರೆಸ್ ಸರ್ಕಾರದ ಆಡಳಿತ ವೈಖರಿಯನ್ನು ಸದಾನಂದಗೌಡ ಟೀಕಿಸಿದರು.

ದುಡಿಯುವ ಕೈಗಳನ್ನ ಎಲ್ಲೋ ದೂರ ಮಾಡುತ್ತಿದೆ ಅನ್ನೋ ಅರ್ಥದಲ್ಲಿ ಕುಮಾ ರಸ್ವಾಮಿ ಮಹಿಳೆಯರು ದಾರಿತಪ್ಪುತ್ತಿದ್ದಾರೆ ಎಂದು ಹೇಳಿದ್ದಾರೆ ಎಂದು ಸದಾನಂದ ಗೌಡ ಅವರ ಹೇಳಿಕೆಯನ್ನು ಸಮರ್ಥಿಸಿ ಕೊಂಡರು. ಇದೇನು ದೊಡ್ಡ ಸಂಗತಿ ಯೇನು ಅಲ್ಲ. ಇದರಿಂದ ಏನು ಪರಿ ಣಾಮ ಆಗೋದಿಲ್ಲ ಎಂದರು.

ಈ ಹಿಂದೆ ಅವರನ್ನು ಕೇಂದ್ರದಿಂದ ಸಾಕಷ್ಟು ಮನವೊಲಿಸಲು ಪ್ರಯತ್ನಪಟ್ಟಿದ್ದಾರೆ. ಆದರೂ ಅದು ಆಗಿಲ್ಲ ಹಲವು ರೀತಿಯ ಈ ಶಿಸ್ತು ಮೇಲೆ ಕ್ರಮ ತೆಗೆದುಕೊಂಡಿಲ್ಲ ಎಂದ ಕೇಳಿದ ಪ್ರಶ್ನೆಗೆ ಎಲ್ಲವನ್ನ ಕೇಂದ್ರದ ನಾಯ ಕರು ತೀರ್ಮಾನಿಸುತ್ತಾರೆ. ಇದರಲ್ಲಿ ನಮ್ಮ ದೇನು ಇಲ್ಲ ಎಂದರು. ಮಾಜಿ ಸಚಿವ ಎಂ.ಪಿ.ಅಪ್ಪಚ್ಚು ರಂಜನ್ ಮಾತನಾಡಿ, ದೇಶದ ಎಲ್ಲೆಡೆ ಮೋದಿ ಅಲೆಯಿದ್ದು, ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳಲ್ಲಿ ಗೆಲುವು ಸಾಧಿಸುವ ಮೂಲಕ ಮತ್ತೊಮ್ಮೆ ನರೇಂದ್ರ ಮೋದಿ ಅವರು ಪ್ರಧಾನಿಯಾಗಲಿದ್ದಾರೆ. ಆದ್ದರಿಂದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಒಡೆ ಯರ್ ಅವರಿಗೆ ತಮ್ಮ ಮತವನ್ನು ಹಾಕ ಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭ ಬಿಜೆಪಿ ಮುಖಂಡರಾದ ಬಿ.ಬಿ.ಭಾರತೀಶ್, ಲೋಕೇಶ್, ಎಂ.ಎಂ. ಚರಣ್, ಗಣಿಪ್ರಸಾದ್, ಪ್ರವೀಣ್, ಜೆಡಿಎಸ್ ಮುಖಂಡರಾದ ಚಂದ್ರು, ಎಚ್.ಟಿ. ವಸಂತ ಇತರರು ಪಾಲ್ಗೊಂಡಿದ್ದರು.

## ಭಾರತವನ್ನು ಪ್ರತಿನಿಧಿಸಲಿರುವ ಕೊಡಗಿನ ಮ್ಯಾರಥಾನ್ ಆಟಗಾರ



ಮಡಿಕೇರಿ: ಆಸ್ಟ್ರಿಯಾದ ವಿಯನ್ನಾದಲ್ಲಿ ಏ.21ರಂದು ನಡೆಯಲಿ ರುವ ಮ್ಯಾರಥಾನ್ ಸ್ಪರ್ಧೆ ಯಲ್ಲಿ ಕೊಡಗಿನ ಅಪ್ಪ ಚಂಗಡ ಬಿ.ಬೆಳ್ಳಪ್ಪ ಭಾರ ತವನ್ನು ಪ್ರತಿನಿಧಿಸಲಿದ್ದಾರೆ.

42.195 ಕಿಮೀ ಮ್ಯಾರಥಾನ್ ಸ್ಪರ್ಧೆ ಯಲ್ಲಿ ಇಬ್ಬರು ಭಾರತೀಯರು ಸ್ಪರ್ಧಿಸು ತ್ತಿದ್ದಾರೆ. ಅದರಲ್ಲಿ ಕರ್ನಾಟಕದ ಕೊಡಗಿನ ಬೆಳ್ಳಪ್ಪ ಒಬ್ಬರಾಗಿದ್ದಾರೆ ಮತ್ತೊಬ್ಬರು ಉತ್ತರಾ ಖಂಡದ ಮಾನ್‌ಸಿಂಗ್. ಈ ಮ್ಯಾರಥಾನ್ ನಲ್ಲಿ ವಿಶ್ವದ್ಯಂತ 40 ಸಾವಿರ ಓಟಗಾರರು ಭಾಗವಹಿಸುತ್ತಿದ್ದು, ಉತ್ತಮ ಪ್ರದರ್ಶನ ತೋರಿದವರನ್ನು ಪ್ಯಾರಿಸ್ ಒಲಿಂಪಿಕ್ಸ್‌ಗೆ ಆಯ್ಕೆ ಮಾಡಲಾಗುತ್ತದೆ. ಮ್ಯಾರಥಾನ್‌ನಲ್ಲಿ 50 ವರ್ಷಗಳ ಹಿಂದೆ ಪಂಜಾಬ್‌ನ ಶಿವನಾಥ್ ಸಿಂಗ್ ಎಂಬುವರು 2 ಗಂಟೆ 11 ನಿಮಿಷ 59 ಸೆಕೆಂಡ್‌ಗಳಲ್ಲಿ 42.195 ಕಿಮೀ ದೂರ ವನ್ನು ಕ್ರಮಿಸಿ ದಾಖಲೆ ನಿರ್ಮಿಸಿದ್ದರು.

# ಯುವಜನರು ನೈತಿಕ ಮತದಾನ ಬೆಂಬಲಿಸಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಸಲಹೆ


ಬೃಹತ್ ಕಾಲ್ನಡಿಗೆ ಜಾಥಾಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಚಾಲನೆ ನೀಡಿದರು.

ಚಾಮರಾಜನಗರ,ಏ.18– ಈ ಬಾರಿಯ ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಯುವಜನರು ಕಡ್ಡಾಯವಾಗಿ ಮತದಾನ ಮಾಡುವುದಲ್ಲದೇ ನೈತಿಕ ಮತದಾನವನ್ನು ಬೆಂಬಲಿಸಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಅವರು ಸಲಹೆ ನೀಡಿದರು.

ನಗರದ ಶ್ರೀ ಚಾಮರಾಜೇಶ್ವರ ದೇವಾ ಲಯದ ಆವರಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಸ್ವೀಪ್ ಸಮಿತಿ, ತಾಲೂಕು ಸ್ವೀಪ್ ಸಮಿತಿ ಹಾಗೂ ಚಾಮ ರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಹಮ್ಮಿ ಕೊಳ್ಳಲಾಗಿದ್ದ ಬೃಹತ್ ಕಾಲ್ನಡಿಗೆ ಜಾಥಾಗೆ ಚಾಲನೆ ನೀಡಿ ಅವರು ಮಾತನಾಡಿದರು.

ಚುನಾವಣೆಯ ಅಂಗವಾಗಿ ಜಿಲ್ಲಾ ಸ್ವೀಪ್ ಸಮಿತಿಯು ಜಿಲ್ಲೆಯಲ್ಲಿ ಮತದಾನ ಪ್ರಮಾಣವನ್ನು ಹೆಚ್ಚಿಸಲು ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಅದರಲ್ಲೂ 18 ವರ್ಷ ತುಂಬಿದ ನೂತನ ಮತದಾರರನ್ನು ನೈತಿಕ ಮತದಾನಕ್ಕಾಗಿ ಪ್ರೇರೇಪಿಸಲಾಗುತ್ತಿದೆ. ಯುವ ಮತದಾರರು ನೈತಿಕ ಮತದಾನದ ಮಹತ್ವವನ್ನು ಮನ ಗಂಡು ಈ ಬಗ್ಗೆ ಇತರರಿಗೂ ಅರಿವು ಮೂಡಿಸಲು ಮುಂದಾಗಬೇಕು ಎಂದರು.

ಬಿಳಿರಂಗನಾಥ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ದೀಪಾ ಜೆ. ಕಂಟ್ರಾಕ್ಟರ್ ಮಾತನಾಡಿ, ಮೊದಲ ಬಾರಿಗೆ ಮತ ಚಲಾಯಿಸುವ ಯುವ ಮತದಾರರು ನಿಷ್ಪಕ್ಷಪಾತ ಹಾಗೂ ನಿರ್ಭೀತಿಯಿಂದ ಮತ ಚಲಾಯಿಸಬೇಕು ಎಂದು ತಿಳಿಸಿದರು.

ಜಿಪಂ ಸಿಇಒ ಆನಂದ್ ಪ್ರಕಾಶ್ ಮೀನಾ ಅವರು ಮಾತನಾಡಿ, ಪ್ರತಿಯೊಬ್ಬರು ಯಾವುದೇ ಆಮಿಷಗಳಿಗೆ ಒಳಗಾಗದೇ ನೈತಿಕ ಮತದಾನ ಮಾಡಬೇಕು ಎಂದರು.

ಮತದಾನದ ಪ್ರತಿಜ್ಞಾ ವಿಧಿ ಬೋಧಿಸಿದ ಜಿಪಂ ಉಪ ಕಾರ್ಯದರ್ಶಿ ಪಿ.ಲಕ್ಷ್ಮೀ ಮಾತ ನಾಡಿ, 18 ವರ್ಷ ತುಂಬಿದ ಬಹುತೇಕ್ಕ ಯುವಜನರು ಚುನಾವಣೆಯ ಮುಖ್ಯ ಭೂಮಿ ಕೆಯಲ್ಲಿ ಮತದಾನ ಮಾಡಲು ಮೊದಲ ಹೆಜ್ಜೆ ಇಡುತ್ತಿದ್ದಾರೆ. ಅವರಿಗೆ ಇನ್ನೂ ಹೆಚ್ಚಿನ ಬಲ ತುಂಬುವುದು ಜಾಥಾದ ಪ್ರಮುಖ ಉದ್ದೇಶವಾಗಿದೆ ಎಂದರು.

ಜಿಲ್ಲಾ ಸ್ವೀಪ್ ಯುವ ರಾಯಭಾರಿ ದೀಪಾ ಬುದ್ದೆ ಮಾತನಾಡಿ, ಸಂವಿಧಾನದ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ನಮ್ಮೆಲ್ಲರಿಗೂ ಮತದಾನದ ಅಮೂಲ್ಯ ಹಕ್ಕು ನೀಡಿದ್ದಾರೆ. ಅವರ ಆಶಯಗಳನ್ನು ಈಡೇರಿಸುವ ನಿಟ್ಟಿನಲ್ಲಿ ಎಲ್ಲ ಯುವಕ, ಯುವತಿಯರು ಮತದಾನದ ಮೌಲ್ಯವನ್ನು ಅರಿಯಬೇಕು. ಪ್ರತಿಯೊಬ್ಬರು ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು ಎಂದು ತಿಳಿಸಿದರು.

ತಾಪಂ ಇಒ ಕೃಷ್ಣಪ್ಪ, ಜಿಲ್ಲಾಸ್ವತ್ರೆಯ ಸ್ಥಾನಿಕ ವೈದ್ಯಾಧಿಕಾರಿ ಡಾ. ಕೃಷ್ಣಪ್ರಸಾದ್, ನಗರಸಭೆ ಆಯುಕ್ತ ಎಸ್.ವಿ. ರಾಮದಾಸ್, ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ್, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಚಿಕ್ಕ ಬಸವಯ್ಯ ವಿವಿಧ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಅಂಗನ ವಾಡಿ, ಆಶಾ ಕಾರ್ಯಕರ್ತೆಯರು, ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿದ್ಯಾರ್ಥಿಗಳು, ಸಾರ್ವಜನಿಕರು ಕಾಲ್ನಡಿಗೆ ಜಾಥಾದಲ್ಲಿ ಪಾಲ್ಗೊಂಡಿದ್ದರು.

ಜಾಥಾವು ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ ಬಳಿಕ ಚಾಮರಾಜೇಶ್ವರ ದೇವಾಲ ಯದಲ್ಲೇ ಮುಕ್ತಾಯಗೊಂಡಿತು. ಜಾಥಾದಲ್ಲಿ ಭಾಗವಹಿಸಿದ್ದ ಎಲ್ಲರು ನನ್ನ ನಡೆ, ಮತಗಟ್ಟೆ ಕಡೆ, ನನ್ನ ಮತ ನನ್ನ ಹಕ್ಕು, ನೈತಿಕ ಮತದಾನ ಬೆಂಬಲಿಸಿ, ಇನ್ನಿತರ ಘೋಷಣೆಗಳನ್ನು ಮೊಳಗಿಸಿ ಮತದಾನದ ಜಾಗೃತಿ ಮೂಡಿಸಿದರು.

# ಎನ್‌ಡಿಎ ಅಭ್ಯರ್ಥಿ ಎಸ್.ಬಾಲರಾಜು ವಿರುದ್ಧ ಸುಳ್ಳು ಸುದ್ದಿ ಶೇರ್ ಮಾಡಿರುವವರ ಮೇಲೆ ಕ್ರಮಕ್ಕೆ ಡಿಸಿಗೆ ದೂರು

ಚಾಮರಾಜನಗರ, ಏ.18– ಎನ್‌ಡಿಎ ಅಭ್ಯರ್ಥಿ ಎಸ್.ಬಾಲರಾಜು ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿ ಶೇರ್ ಮಾಡಿರುವ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಜಿಲ್ಲಾ ಬಿಜೆಪಿ ವತಿಯಿಂದ ಜಿಲ್ಲಾ ಚುನಾವಣಾ ಧಿಕಾರಿಗಳೂ ಆದ ಜಿಲ್ಲಾಧಿಕಾರಿ ಶಿಲ್ಪ ನಾಗ್ ಅವರಿಗೆ ದೂರು ಸಲ್ಲಿಸಲಾಯಿತು.

ಅಂಬೇಡ್ಕರ್ ದಲಿತ ಸೇನೆ ರಾಜ್ಯಾಧ್ಯಕ್ಷ ಕೇಶವಮೂರ್ತಿ, ಮಹದೇವ ಬುದ್ಧ ಹಾಗೂ ರಾಜೇಂದ್ರ, ಸಿದ್ಧಾರ್ಥ ಎಂಬ ವರು ಫೇಸ್‌ಬುಕ್‌ನಲ್ಲಿ ದಲಿತ ಹಿತರಕ್ಷಣಾ ಸಮಿತಿ ಎಂಬ ಹೆಸರಿನಲ್ಲಿ ಖಾತೆ ತೆರೆದು, ಅದರಲ್ಲಿ ಬಾಲರಾಜ್ ವಿರುದ್ಧ ಸುಳ್ಳು ಸುದ್ದಿ ಹಬ್ಬಿಸಿದ್ದಾರೆ. ಈ ರೀತಿ ಹೇಳಿಕೆ ಗಳನ್ನು ತಮ್ಮ ಗ್ರೂಪಿನಲ್ಲಿ ಹಾಕಿ ಮತ ದಾರರನ್ನು ನಮ್ಮ ಪಕ್ಷದ ವಿರುದ್ಧ ಎತ್ತಿ ಕಟ್ಟಿ ಮತದಾನದ ಪ್ರಕ್ರಿಯೆಯಲ್ಲಿ ನಮ್ಮ ಎನ್‌ಡಿಎ ಅಭ್ಯರ್ಥಿ ಬಾಲರಾಜ್ ವಿರುದ್ಧ ದ್ವೇಷ ಭಾವನೆ ಮೂಡಿಸಿ, ಚುನಾವಣೆ ಯಲ್ಲಿ ಅಕ್ರಮ ಲಾಭ ಪಡೆಯುವ ದುರು ದ್ದೇಶವನ್ನು ಹೊಂದಿರುತ್ತಾರೆ. ಈ ರೀತಿ ಯ ಅಸಂಬದ್ಧ ಹೇಳಿಕೆಗಳು ಮಾದರಿ ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆಯಾಗಿರು ತ್ತದೆ. ಹೀಗಾಗಿ ಅಂಬೇಡ್ಕರ್ ದಲಿತ ಸೇನೆ ತಮ್ಮ ಗ್ರೂಪಿನಲ್ಲಿ ಹಾಕಿರುವ ಹೇಳಿಕೆಗಳನ್ನು ಅಳಿಸುವಂತೆ, ಅಂಬೇಡ್ಕರ್ ದಲಿತ ಸೇನೆ ರಾಜ್ಯಾಧ್ಯಕ್ಷ ಕೇಶವಮೂರ್ತಿ, ಮಹದೇವ ಬುದ್ಧ ಹಾಗೂ ರಾಜೇಂದ್ರ ಸಿದ್ಧಾರ್ಥ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳ ಬೇಕು ಎಂದು ಒತ್ತಾಯಿಸಿದ್ದಾರೆ.


ಎಸ್.ಬಾಲರಾಜು ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿ ಶೇರ್ ಮಾಡಿರುವ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಜಿಲ್ಲಾ ಬಿಜೆಪಿ ವತಿಯಿಂದ ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್ ಅವರಿಗೆ ದೂರು ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಹರದೆ ಮಂಜು, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮೂಡ್ಲುಪುರ ನಂದೀಶ್, ಕಾರ್ಯದರ್ಶಿ ನುಲಿಯಾ, ನಗರ ಮಂಡಲ ಅಧ್ಯಕ್ಷ ಶಿವರಾಜ್, ಎಸ್‌ಸಿ ಮೋರ್ಚಾ ಗ್ರಾಮಾಂತರ ಮಂಡಲ ಅಧ್ಯಕ್ಷ ಮುಕುಂದ ಮೂರ್ತಿ, ಮಾಧ್ಯಮ ಸಹ ಪ್ರಮುಖ ಅಶ್ವಿನ್ ಹಾಜರಿದ್ದರು.

# ಕೆಎಸ್‌ಆರ್‌ಟಿಸಿ ಬಸ್‌ಗಾಗಿ ವಿದ್ಯಾರ್ಥಿಗಳ ಪ್ರತಿಭಟನೆ

ಚಾಮರಾಜನಗರ,ಏ.18– ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ಮೈಸೂರು ಜಿಲ್ಲೆಗೆ ಸಮರ್ಪಕವಾಗಿ ಬಸ್‌ಗಳ ವ್ಯವಸ್ಥೆ ಇಲ್ಲ. ಇದರಿಂದ ಪ್ರತಿನಿತ್ಯ ಓಡಾಡುವ ಶಾಲಾ– ಕಾಲೇಜು ವಿದ್ಯಾರ್ಥಿಗಳಿಗೆ, ನೌಕರರಿಗೆ, ಸಾಮಾನ್ಯ ಪ್ರಯಾಣಿಕರಿಗೆ ತೊಂದರೆಯಾ ಗುತ್ತಿದೆ ಎಂದು ದೂರಿ ನಗರದ ಕೆಎಸ್‌ಆರ್ ಟಿಸಿ ಬಸ್ ನಿಲ್ದಾಣದ ಮುಂಭಾಗ ಗುರು ವಾರ ವಿದ್ಯಾರ್ಥಿಗಳು ಹಾಗೂ ಸಾರ್ವಜ ನಿಕರು ದಿಢೀರ್ ಪ್ರತಿಭಟನೆ ನಡೆಸಿದರು.


ಚಾಮರಾಜನಗರದಿಂದ ಮೈಸೂರು ಜಿಲ್ಲೆಗೆ ಸಮರ್ಪಕವಾಗಿ ಬಸ್‌ಗಳ ವ್ಯವಸ್ಥೆ ಇಲ್ಲ ಎಂದು ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗ ಗುರುವಾರ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ದಿಢೀರ್ ಪ್ರತಿಭಟನೆ ನಡೆಸಿದರು.

ಗುರುವಾರ ಬೆಳಿಗ್ಗೆ ನಗರದ ಕೆಎಸ್‌ಆರ್ ಟಿಸಿ ಬಸ್ ನಿಲ್ದಾಣದಲ್ಲಿ ವಿದ್ಯಾರ್ಥಿಗಳು ಸೇರಿದಂತೆ ನೂರಕ್ಕೂ ಹೆಚ್ಚು ಪ್ರಯಾಣಿಕರು ಮೈಸೂರಿಗೆ ತೆರಳಲು ಕಾಯುತ್ತಿದ್ದರು. ಆದರೆ, ನಿಗದಿತ ಸಮಯಕ್ಕೆ ಬಸ್ ವ್ಯವಸ್ಥೆ ಇಲ್ಲದೇ ಪರದಾಡುತ್ತಿದ್ದ ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳು ದಿಢೀರ್ ಪ್ರತಿಭಟನೆ ನಡೆಸಿದರು.

ನಂತರ ಬಸ್ ನಿಲ್ದಾಣ ಮುಂಭಾಗ ಸಮಾವೇಶಗೊಂಡ ವಿದ್ಯಾರ್ಥಿಗಳು, ಸಾರ್ವಜನಿಕರು ಹಾಗೂ ಪ್ರಯಾಣಿಕರು ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಚಾಮರಾಜನಗರ ಜಿಲ್ಲಾ ಕೇಂದ್ರದಿಂದ ಮೈಸೂರು ಸೇರಿದಂತೆ ಇನ್ನಿತರ ಸ್ಥಳಗಳಿಗೆ ತೆರಳಲು ಬೆಳಿಗ್ಗೆ ಹಾಗೂ ಸಂಜೆ ಸಮಯ ದಲ್ಲಿ ಬಸ್‌ಗಳ ವ್ಯವಸ್ಥೆ ಸಮರ್ಪಕವಾಗಿಲ್ಲ. ಆಗೊಮ್ಮೆ ಈಗೊಮ್ಮೆ ಒಂದೊಂದು ಬಸ್ ಗಳು ಮಾತ್ರ ಬರುತ್ತವೆ. ಇದರಿಂದ ಪ್ರತಿನಿತ್ಯ ನಿಂತುಕೊಂಡೇ ಪ್ರಯಾಣ ಮಾಡುವಂತಾ ಗಿದೆ ಎಂದು ಪ್ರಯಾಣಿಕರು ಆರೋಪಿಸಿದರು.

ಶಾಲಾ– ಕಾಲೇಜುಗಳಿಗೆ ತೆರಳಲು ನಿಗ ದಿತ ಸಮಯಕ್ಕೆ ಬಸ್‌ಗಳು ಬರುವುದಿಲ್ಲ. ಇದರಿಂದ ಸಮಯಕ್ಕೆ ಸರಿಯಾಗಿ ಶಾಲಾ –ಕಾಲೇಜುಗಳಿಗೆ ತೆರಳಲು ಸಾಧ್ಯವಾಗುತ್ತಿಲ್ಲ ಎಂದು ದೂರಿದರು. ವಿಷಯ ತಿಳಿದು ಕೆಎಸ್‌ಆರ್‌ಟಿಸಿ ವಿಭಾಗದ ಅಧಿಕಾರಿಗಳು ಕೂಡಲೇ ಮೈಸೂರಿಗೆ ಬಸ್ ವ್ಯವಸ್ಥೆ ಕಲ್ಪಿಸಿದರು. ಬಳಿಕ ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳು ಪ್ರತಿಭಟನೆ ಕೈಬಿಟ್ಟು ಮೈಸೂರಿನತ್ತ ತೆರಳಿದರು.

# ಲೋಕಸಭಾ ಚುನಾವಣೆ: ಏ.15 ರವರೆಗಿನ ಅಭ್ಯರ್ಥಿಗಳ ಚುನಾವಣಾ ವೆಚ್ಚದ ವಿವರ

ಚಾಮರಾಜನಗರ,ಏ.18– ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಸಂಬಂಧ ಚಾಮರಾಜನಗರ ಲೋಕಸಭಾ ಕ್ಷೇತ್ರದ ಚುನಾವಣೆಗೆ ಸ್ಪರ್ಧಿಸಿರುವ ಎಲ್ಲಾ ಅಭ್ಯರ್ಥಿಗಳು ಏಪ್ರಿಲ್ 15 ರವರೆಗಿನ ಚುನಾವಣಾ ವೆಚ್ಚದ ವಿವರಗಳನ್ನು ಸಲ್ಲಿಸಿದ್ದು, ಏಪ್ರಿಲ್ 17ರಂದು ನಡೆದ ಎರಡನೇ ವೆಚ್ಚ ಪರಿಶೀಲನಾ ಸಭೆಯಲ್ಲಿ ಪರಿಶೀಲಿಸಲಾಗಿರುವ ವಿವರ ಇಂತಿದೆ.

ಬಿಎಸ್‌ಪಿ ಅಭ್ಯರ್ಥಿ ಎಂ. ಕೃಷ್ಣಮೂರ್ತಿ –ರೂ. 2,44,100, ಬಿಜೆಪಿ ಅಭ್ಯರ್ಥಿ ಎಸ್. ಬಾಲರಾಜು–ರೂ. 26,95,763, ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್–ರೂ. 46,57,245, ಡಾ. ಅಂಬೇಡ್ಕರ್ ಪೀಪಲ್ಸ್ ಪಾರ್ಟಿ ಅಭ್ಯರ್ಥಿ ಸಿ.ಎಂ. ಕೃಷ್ಣ –ರೂ. 12,500, ಕೆಜೆಪಿ ಅಭ್ಯರ್ಥಿ ನಿಂಗರಾಜು ಎಸ್–ರೂ. 17,375, ಕರ್ನಾಟಕ ಪ್ರಜಾ ಪಾರ್ಟಿ (ರೈತ ಪರ್ವ) ಅಭ್ಯರ್ಥಿ ಪ್ರಸನ್ನ ಕುಮಾರ್.ಬಿ–ರೂ. 15,020, ಕರ್ನಾಟಕ ರಾಷ್ಟ್ರ ಸಮಿತಿ (ಕೆ.ಆರ್.ಎಸ್) ಪಕ್ಷದ ಅಭ್ಯರ್ಥಿ ಮಹೇಶ್.ಎಂ– ರೂ. 14,375, ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯೂನಿಸ್ಟ್) ಪಕ್ಷದ ಅಭ್ಯರ್ಥಿ ಸುಮ. ಎಸ್– ರೂ. 48,690, ಪಕ್ಷೇತರ ಅಭ್ಯರ್ಥಿಗಳಾದ ಎನ್. ಅಂಬರೀಷ್–ರೂ. 12,500, ನಿಂಗ ರಾಜು. ಜಿ–ರೂ. 12,500, ಪ್ರದೀಪ್ ಕುಮಾರ್.ಎಂ–ರೂ. 12,500, ಮಹದೇವಸ್ವಾಮಿ. ಎಂ–ರೂ. 12,500, ಡಿ. ರಾಜಗೋಪಾಲ– ರೂ. 17,980 ಹಾಗೂ ಹೆಚ್.ಕೆ.ಸ್ವಾಮಿ– 12,500 ರೂ. ಗಳ ಚುನಾವಣಾ ವೆಚ್ಚದ ವಿವರ ಸಲ್ಲಿಸಿದ್ದಾರೆ ಎಂದು ಚಾಮರಾಜ ನಗರ ಲೋಕಸಭಾ ಕ್ಷೇತ್ರದ ಚುನಾವಣಾ ಧಿಕಾರಿ ಹಾಗೂ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸುನಿಲ್‌ಬೋಸ್ ಅತ್ಯಧಿಕ ಮತಗಳಿಂದ ಜಯಶಾಲಿ: ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್


ಗುಂಡ್ಲುಪೇಟೆ ತಾಲೂಕಿನ ಮಲ್ಲಯ್ಯನಪುರ ಗ್ರಾಮದಲ್ಲಿ ಏರ್ಪಡಿಸಲಾಗಿದ್ದ ಪ್ರಚಾರ ಸಭೆಯನ್ನು ಉದ್ದೇಶಿಸಿ ಶಾಸಕ ಹೆಚ್.ಎಂ. ಗಣೇಶ್‌ಪ್ರಸಾದ್ ಮಾತನಾಡಿದರು.

ಗುಂಡ್ಲುಪೇಟೆ, ಏ.18– ಕಾಂಗ್ರೆಸ್ ಭದ್ರಕೋಟೆಯಾಗಿರುವ ಚಾಮರಾಜ ನಗರ ಮೀಸಲು ಲೋಕಸಭಾ ಕ್ಷೇತ್ರದಲ್ಲಿ ಸುನಿಲ್‌ಬೋಸ್ ಅತ್ಯಧಿಕ ಮತಗಳಿಂದ ಜಯಶಾಲಿಯಾಗುತ್ತಾರೆಂದು ಶಾಸಕ ಹೆಚ್.ಎಂ. ಗಣೇಶ್‌ಪ್ರಸಾದ್ ಹೇಳಿದರು.

ತಾಲೂಕಿನ ಮಲ್ಲಯ್ಯನಪುರ, ಭೀಮನ ಬೀಡು, ಬೇರಂಬಾಡಿ, ದೇವರಹಳ್ಳಿ ಮತ್ತು ಮತ್ತಿತರ ಗ್ರಾಮದಲ್ಲಿ ಪ್ರಚಾರ ನಡೆಸಿದ ನಂತರ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ನುಡಿದಂತೆ ನಡೆಯುತ್ತಿರುವ ಕಾಂಗ್ರೆಸ್ ಸರ್ಕಾರದಿಂದ ಜನರಿಗೆ ತುಂಬಾ ಉಪಯೋಗವಾಗುತ್ತಿದೆ. ಐದು ಗ್ಯಾರಂಟಿಗಳನ್ನು ಸಕಾಲಕ್ಕೆ ಅನುಷ್ಠಾನ ಗೊಳಿಸುವುದರೊಂದಿಗೆ ಕೊಟ್ಟ ಮಾತಿ ನಂತೆ ನಾವು ನಡೆದಿದ್ದೇವೆ.

ಹೀಗಾಗಿ ಈ ಬಾರಿಯೂ ಮತದಾರ ಕಾಂಗ್ರೆಸ್ ಬೆಂಬಲಿಸಲಿದ್ದಾನೆ. ಸುನಿಲ್ ಬೋಸ್ ಅತ್ಯಧಿಕ ಮತಗಳಿಂದ ಜಯ ಶಾಲಿಯಾಗುತ್ತಾರೆಂದು ವಿಶ್ವಾಸ ವ್ಯಕ್ತಪಡಿ ಸಿದ್ದರು. ಈ ವೇಳೆ ಚಾಮುಲ್ ನಿರ್ದೇಶಕ ಹೆಚ್.ಎಸ್. ನಂಜುಂಡಪ್ರಸಾದ್, ಮುಖಂಡರಾದ ನಂಜಪ್ಪ, ರಾಜಶೇಖರ್, ಮುನಿರಾಜು, ಹೆಚ್.ಎನ್.ಬಸವರಾಜು, ಪ್ರಭು ಸೇರಿದಂತೆ ವಿವಿಧ ಘಟಕಗಳ ಮುಖಂಡರು, ಕಾರ್ಯಕರ್ತರು ಹಾಗೂ ಪದಾಧಿಕಾರಿಗಳು ಭಾಗವಹಿಸಿದ್ದರು.

ಒಂದನೇ ಪುಟದಿಂದ

## ಸಿದ್ದರಾಮಯ್ಯ ಅಭಿವೃದ್ಧಿ ಮರೆತಿದ್ದಾರೆ

ವಿದ್ಯಾರ್ಥಿಗಳಿಗೆ ಉಚಿತ ಸೈಕಲ್, ಭಾಗ್ಯಲಕ್ಷ್ಮಿ ಬಾಂಡ್ ಯೋಜನೆ, ನೀರಾವರಿ ಯೋಜನೆ ಸೇರಿದಂತೆ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ರಾಜ್ಯದ ಜನರಿಗೆ ಕೊಟ್ಟೆವು. ರಾಜ್ಯದ ಜನರ ಹಿತಕ್ಕಾಗಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಮಾಡಿಕೊಂಡಿದ್ದು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಆಶಯದೊಂದಿಗೆ ಪ್ರಧಾನಿ ಮೋದಿ ಮತ್ತೊಮ್ಮೆ ಪ್ರಧಾನಿಯಾಗಲಿದ್ದು, ದೇಶ ಮತ್ತಷ್ಟು ಅಭಿವೃದ್ಧಿಯಾಗಲಿದೆ ಎಂದರು.

ಸಿದ್ದರಾಮಯ್ಯನವರ ಸರ್ಕಾರ ರೈತ ಸಂಕಷ್ಟಕ್ಕೆ ಸ್ಪಂದಿಸಿಲ್ಲ. ಪ್ರಸ್ತುತ ಬರಗಾಲ ಆವರಿಸಿದ್ದು, ನೀರಿಲ್ಲದೇ 38 ಸಾವಿರ ಕೋಟಿ ಮೌಲ್ಯದ ಬೆಳೆ ನಷ್ಟವಾಗಿದ್ದರೆ, ರಾಜ್ಯ ಸರ್ಕಾರ 654 ಕೋಟಿ ಬಿಡುಗಡೆ ಮಾಡಿದೆ. ಹೆಕ್ಟೇರ್ ಗೆ ಎರಡು ಸಾವಿರ ಮಾತ್ರ ಕೊಟ್ಟಿದ್ದಾರೆ. ಇದರಲ್ಲಿ ಕೇಂದ್ರದ ಪಾಲು ಶೇ.75ರಷ್ಟು (450 ಕೋಟಿ) ಸೇರಿದೆ ಎಂದು ತಿಳಿಸಿದರು. ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಗಾಗಿ ಈಗಾಗಲೇ 1.5 ಲಕ್ಷ ಕೋಟಿ ಸಾಲ ಮಾಡಿದ್ದು, ನಿಮ್ಮ ಕುಟುಂಬದವರ ಮೇಲೆ 36 ಸಾವಿರ ಸಾಲ ಹೊರಸಿದೆ. ಲೋಕಸಭಾ ಚುನಾವಣೆ ಕಳೆದ ಮೇಲೆ ಸರ್ಕಾರ ಇರುತ್ತೊ ಇಲ್ಲವೋ ಗೊತ್ತಿಲ್ಲ ನಾವು ಹೇಳುತ್ತಿಲ್ಲ, ಅವರ ಶಾಸಕರೇ ಹೇಳುತ್ತಿರುವುದು ಎಂದರು.

ನಾನು ಮತ್ತು ಯಡಿಯೂರಪ್ಪ ಅವರ ಮೈತ್ರಿ ಸರ್ಕಾರದಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ಕೇವಲ 5 ಸಾವಿರದಲ್ಲಿ ಟಿಸಿ ಕೊಡುತ್ತಿದ್ದೆವು. ಇವಾಗ 2 ಲಕ್ಷ ಕೊಟ್ಟು ರೈತರು ಟಿಸಿ ಪಡೆಯಬೇಕಿದೆ. ಆದ್ದರಿಂದ ಕೆ.ಆರ್.ನಗರ ಕ್ಷೇತ್ರದ ಜನತೆಗೆ ಕೈ ಮುಗಿದು ಪ್ರಾರ್ಥನೆ ಮಾಡುತ್ತೇನೆ. ನಿಮ್ಮ ಶಾಸಕರಾಗಿದ್ದ ನನ್ನ ಗೆಳೆಯ ಸಾ.ರಾ.ಮಹೇಶ್ ಅವರನ್ನು ಸೋಲಿಸಿ ಎಷ್ಟು ಕಷ್ಟ ಪಡುತ್ತಿದ್ದೀರಿ ಗೊತ್ತಿದೆ. 11 ತಿಂಗಳಲ್ಲಿ ಕೆ.ಆರ್.ನಗರ ಕ್ಷೇತ್ರದಲ್ಲಿ ಏನೇನೂ ಅಭಿವೃದ್ಧಿ ಕೆಲಸ ಆಗಿಲ್ಲ. ಆದ್ದರಿಂದ ಸಾ.ರಾ.ಮಹೇಶ್ ಬೆಂಬಲಕೋಸ್ಕರ ನಾನು ಈ ಲೋಕಸಭಾ ಚುನಾವಣೆಯಲ್ಲಿ ಅಭ್ಯರ್ಥಿ ಆದೆ ಎಂದರು.

ಕಾರ್ಯಕ್ರಮದಲ್ಲಿ ರಾಜ್ಯ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಮತ್ತು ಶಾಸಕ ಜಿ.ಟಿ.ದೇವೇಗೌಡ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ವಿಧಾನ ಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಹೆಚ್.ವಿಶ್ವನಾಥ್, ಮಾಜಿ ಶಾಸಕ ಕೆ.ಮಹದೇವ್, ವಿಧಾನ ಪರಿಷತ್ ಮಾಜಿ ಸದಸ್ಯ ಶ್ರೀಕಂಠೇಗೌಡ, ಜಿಪಂ ಮಾಜಿ ಉಪಾಧ್ಯಕ್ಷ ಅಡಗೂರು ಚೆನ್ನಬಸಪ್ಪ, ಮುಡಾ ಮಾಜಿ ಅಧ್ಯಕ್ಷ ಹರದನಹಳ್ಳಿ ವಿಜಯ್, ತಾಲೂಕು ಒಕ್ಕಲಿಗರ ಅಧ್ಯಕ್ಷ ಮಿರ್ಲೆ ಅಣ್ಣೇಗೌಡ, ತಾ ಜೆಡಿಎಸ್ ಮಾಜಿ ಅಧ್ಯಕ್ಷ ವೈ.ಆರ್.ಪ್ರಕಾಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಜಿಲ್ಲಾ ಬಿಜೆಪಿ ಮಾಜಿ ಉಪಾಧ್ಯಕ್ಷ ಹೊಸಹಳ್ಳಿ ವೆಂಕಟೇಶ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಮೈಸೂರು ಮಹಾನಗರ ಪಾಲಿಕೆ ಮಾಜಿ ಮೇಯರ್ ರವಿಕುಮಾರ್, ಲಿಂಗಪ್ಪ, ಮೈಮುಲ್ ನಿರ್ದೇಶಕ ಎ.ಟಿ.ಸೋಮಶೇಖರ್, ಜಿಪಂ ಮಾಜಿ ಅಧ್ಯಕ್ಷ ಸಿ.ಜೆ.ದ್ವಾರಕೀಶ್, ಮಾಜಿ ಸದಸ್ಯ ಎಂ.ಟಿ.ಕುಮಾರ್, ಕೆ.ಆರ್.ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಅಮ್ಮ ಸಂತೋಷ್, ಜೆಡಿಎಸ್ ಮುಖಂಡ ಖ್ಯಾತ ಮೂಳೆ ತಜ್ಞ ಡಾ.ಮೆಹಬೂಬ್ ಖಾನ್, ರಾಜ್ಯ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ತಾಲೂಕು ಜೆಡಿಎಸ್ ಅಧ್ಯಕ್ಷ ಹಂಪಾಪುರ ಕುಮಾರ್, ಅವಳಿ ತಾಲೂಕು ಬಿಜೆಪಿ ಅಧ್ಯಕ್ಷರಾದ ಧರ್ಮ, ತಿಲಕ್, ಪುರಸಭಾ ಸದಸ್ಯರಾದ ಉಮೇಶ್, ಸಂತೋಷ್‌ಗೌಡ, ಜಗದೀಶ್, ತಾಲೂಕು ಅಲ್ಪಸಂಖ್ಯಾತ ಜೆಡಿಎಸ್ ಅಧ್ಯಕ್ಷ ಮುಬಾರಕ್, ರಾಜ್ಯ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಕಾರ್ಯದರ್ಶಿ ಪ್ರಭಾಕರ್ ಜೈನ್ ಸೇರಿದಂತೆ ಇನ್ನಿತರರಿದ್ದರು.

## ತಾಯಿ ಹೃದಯ ಹೊಂದಿರುವ ಕುಮಾರಸ್ವಾಮಿ ಗೆಲ್ಲಿಸಿ: ವಿಶ್ವನಾಥ್

ಕೆ.ಆರ್.ನಗರ, ಏ.18– ರಾಜ್ಯ ಸರ್ಕಾರ ರಚನೆಯಾಗಿ 11 ತಿಂಗಳು ಕಳೆದರೂ ಒಂದೂ ಅಭಿವೃದ್ಧಿ ಕಾರ್ಯವಾಗಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಆರೋಪಿಸಿದರು.

ಪಟ್ಟಣದ ರೇಡಿಯೋ ಮೈದಾನದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಹಣವಂತ. ಆದರೆ ಜೆಡಿಎಸ್ ಬಿಜೆಪಿ ಮೈತ್ರಿ ಅಭ್ಯರ್ಥಿ ಹೃದಯವಂತ. ಆದ್ದರಿಂದ ತಾಯಿ ಹೃದಯ ಹೊಂದಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಅಧಿಕ ಮತಗಳಿಂದ ಗೆಲ್ಲಿಸಿ ಎಂದು ಮನವಿ ಮಾಡಿದರು.

ಕುಮಾರಸ್ವಾಮಿ ಅವರು ಆಡು ಭಾಷೆಯಲ್ಲಿ ಮಾತನಾಡಿದ್ದರ ಬಗ್ಗೆ ಕ್ಷಮೆ ಕೇಳಿದ್ದರೂ, ಕಾಂಗ್ರೆಸ್ಸಿಗರು ಇನ್ನೂ ಮಾತು ನಿಲ್ಲಿಸಿಲ್ಲ. ಇದು ಒಳ್ಳೆಯ ಬೆಳವಣಿಗೆ ಅಲ್ಲ ಎಂದು ಕಾಂಗ್ರೆಸ್ ನಾಯಕರ ವಿರುದ್ಧ ಗುಡುಗಿದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾತು ಮಾತಿಗೂ ಮಾಜಿ ಸಿಎಂ ಕುಮಾರಸ್ವಾಮಿ ವಿರುದ್ಧ ಲೇವಡಿ ಮಾಡುತ್ತಿರುವುದು ಅವರಿಗೆ ಶೋಭೆ ತರುವುದಿಲ್ಲ. ನೀವು ನಿಮ್ಮ ವರುಣಾ ಕ್ಷೇತ್ರದಲ್ಲಿ ಒಬ್ಬ ಮಹಿಳೆ ವೇಲ್ ಎಳೆದಿರಲ್ಲ ಸ್ವಾಮಿ ಆಗ ನಾವು ಸುಮ್ಮನೇ ಇದ್ದೇವಲ್ಲ. ಕ್ಷಮೆ ಕೇಳಿದ ಮೇಲೆ ಇನ್ನೇನು ನಿಲ್ಲಿಸಿ. ಇಲ್ಲದಿದ್ದಲ್ಲಿ ನಾವು ಶುರು ಮಾಡುತ್ತೇವೆ ಎಂದು ಸಿದ್ದರಾಮಯ್ಯನವರಿಗೆ ಟಾಂಗ್ ನೀಡಿದರು. ಮಾಜಿ ಸಚಿವ ಸಾ.ರಾ.ಮಹೇಶ್ ಭಾವುಕರಾಗಿ ಮಾತನಾಡಿ, ಈ ಬಾರಿ ನಮ್ಮ ನಾಯಕರಾದ ಕುಮಾರಣ್ಣ ಗೆಲ್ಲಲೇಬೇಕು. ನಾನೇ ಅಭ್ಯರ್ಥಿ ಎಂದು ಹೆಚ್ಚಿನ ಮತ ನೀಡಿ ಗೆಲ್ಲಿಸಿ ಎಂದು ಮನವಿ ಮಾಡಿ ದರು. ನಾನು ರಾಜಕೀಯ ಕ್ಷೇತ್ರಕ್ಕೆ ಬರಲು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕಾರಣ. ಶಾಸಕ, ಮಂತ್ರಿ ಮಾಡಿದ್ದು ಕುಮಾರಣ್ಣ. ಅವರನ್ನು ಬೆಂಬಲಿಸಿ ಎಂದು ಕೈ ಮುಗಿದು ಪ್ರಾರ್ಥನೆ ಮಾಡಿದರು.

ಯಾವತ್ತು ಭತ್ತದ ನಾಡು ಬರ ಕಂಡಿಲ್ಲ. ಕಾಂಗ್ರೆಸ್ಸಿಗರು ಬಂದರೆ ಬರ ಬರುತ್ತೆ ನನ್ನ ಸೋಲಿಸುವ ವಿಷದ ನಾಟಕವಾಡಿದರು. ಜನರಿಗೆ ಮರಳು ಮಾಡಿದ ಇವರು 11 ತಿಂಗಳಲ್ಲಿ ಒಂದೇ ಒಂದು ಗುಂಡಿ ಮುಚ್ಚಿಲ ಎಂದು ಶಾಸಕ ಡಿ.ರವಿಶಂಕರ್ ವಿರುದ್ಧ ಗುಡುಗಿದರು.

ಪುರಸಭೆ ಮಳಿಗೆ ಕೊಡಿಸುತ್ತೀನಿ. ವರ್ಗಾವಣೆ ಮಾಡಿಸುತ್ತೇನೆ ಎಂದು ಮೂರು ಲಕ್ಷ, ಐದು ಲಕ್ಷ ವಸೂಲಿ ಮಾಡಿದರಲ್ಲ ಅದು ಬಿಟ್ಟು ಅರ್ಕೇಶ್ವರ ದೇವಾಲಯದ ಮುಂದೆ ಬಿಕ್ಷೆ ಬೇಡಿ ಎಂದು ವಾಗ್ದಾಳಿ ನಡೆಸಿದರು. ನರೇಂದ್ರ ಮೋದಿಯವರು ದೇಶಕ್ಕೆ ಉತ್ತಮ ಆಡಳಿತ ಕೊಟ್ಟಿದ್ದಾರೆ. ಆದ್ದರಿಂದ ಅವರ ಕೈ ಬಲ ಪಡಿಸಲು ಕುಮಾರಣ್ಣ ಅವರನ್ನು ಈ ಬಾರಿ ಅಧಿಕ ಮತಗಳಿಂದ ಗೆಲ್ಲಿಸಿ ಎಂದರು.

## 102 ಕ್ಷೇತ್ರಗಳಲ್ಲಿ ಮತದಾನ

ಪ್ರಮುಖರು ನಾಳಿನ ಚುನಾವಣಾ ಕಣದಲ್ಲಿದ್ದಾರೆ. ನಾಳೆ ಮೊದಲ ಹಂತದ ಚುನಾವಣೆ ನಡೆದರೆ, ಏ.26ಕ್ಕೆ ಕರ್ನಾಟಕದ 14 ಕ್ಷೇತ್ರ ಸೇರಿದಂತೆ ಎರಡನೇ ಹಂತದ ಚುನಾವಣೆ ನಡೆಯಲಿದೆ. ಕರ್ನಾಟಕದ 14 ಕ್ಷೇತ್ರ ಸೇರಿದಂತೆ 3ನೇ ಹಂತದ ಚುನಾವಣೆ ಮೇ 7ಕ್ಕೆ, ನಾಲ್ಕನೇ ಹಂತದ ಚುನಾವಣೆ ಮೇ 13, ಐದನೇ ಹಂತದ ಚುನಾವಣೆ ಮೇ 20ಕ್ಕೆ, ಆರನೇ ಹಂತ ಮೇ 25ಕ್ಕೆ, ಕೊನೆಯ ಹಂತದ ಚುನಾವಣೆ ಜೂ.1ಕ್ಕೆ ನಡೆದು, ಜೂನ್ 4ರಂದು ಮತ ಎಣಿಕೆ ಕಾರ್ಯ ನಡೆಯಲಿದೆ.

**ಅಧಿಸೂಚನೆ:** ಮೇ 13ರಂದು ನಡೆಯಲಿರುವ ಲೋಕಸಭೆಯ ನಾಲ್ಕನೇ ಹಂತದ ಚುನಾವಣೆ ಜೊತೆಗೆ ಅದೇ ದಿನ ಆಂಧ್ರಪ್ರದೇಶ ವಿಧಾನಸಭೆಯ 175 ಕ್ಷೇತ್ರಗಳಿಗೂ ಚುನಾವಣೆ ನಡೆಯಲಿದ್ದು, ಈ ಸಂಬಂಧ ಇಂದು ಅಧಿಸೂಚನೆ ಹೊರಡಿಸಲಾಗಿದೆ.

## ಮೈಸೂರಲ್ಲಿ ಭರ್ಜರಿ ಮತ ಬೇಟೆ

3 ಲಕ್ಷ 25 ಸಾವಿರ ಕಿ.ಮೀ. ನಿರ್ಮಿಸಲಾಗಿತ್ತು. ಆದರೆ ಕೇವಲ 10 ವರ್ಷಗಳ ಮೋದಿಯವರ ಆಡಳಿತದಲ್ಲಿ 3 ಲಕ್ಷದ 72 ಸಾವಿರ ಕಿ.ಮೀ. ರಸ್ತೆಯನ್ನು ಪ್ರಧಾನಿಯವರು ನಿರ್ಮಾಣ ಮಾಡಿದ್ದಾರೆ. ಅಷ್ಟೇ ಅಲ್ಲದೆ, ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ ಎಂದರು. ಆರ್ಟಿಕಲ್ 370 ರದ್ದು ಆಗುವ ಮೂಲಕ ಜಮ್ಮು–ಕಾಶ್ಮೀರದಲ್ಲಿ ಅಲ್ಲಿನ ಜನ ನೆಮ್ಮದಿಯಿಂದ ಬದುಕುವಂತಾಗಿದೆ. ಪ್ರಧಾನಿ ಮೋದಿಯವರು ನಮ್ಮ ಭಾರತದ ಪರಂಪರೆ ಸಂರಕ್ಷಣೆಗೂ ಕ್ರಮ ವಹಿಸುತ್ತಿದ್ದಾರೆ. ವಿಶೇಷವಾಗಿ ಮೈಸೂರಿನಲ್ಲಿ ಪರಂಪರೆ ರಕ್ಷಣೆ ಹಾಗೂ ಅಭಿವೃದ್ಧಿ ಎರಡೂ ಜೊತೆ ಜೊತೆಗೆ ಸಾಗಬೇಕಿದೆ. ನಿನ್ನೆಯಷ್ಟೇ ರಾಮನವಮಿ ಆಚರಿಸಿ ದ್ದೇವೆ. ಅದರಲ್ಲೂ ಈ ಬಾರಿಯ ರಾಮನವಮಿ ವಿಶೇಷವಾಗಿತ್ತು. ಕಾರಣ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಹಾಗೂ ಮೈಸೂರಿನ ಶಿಲೆಯಲ್ಲಿ ಮೈಸೂರಿನವರೇ ಕೆತ್ತನೆ ಮಾಡಿದ ಬಾಲರಾಮನ ವಿಗ್ರಹವು ಮಂದಿರದಲ್ಲಿ ಪ್ರಾಣಪ್ರತಿಷ್ಠಾಪನೆ ಯಾಗಿದೆ. ಟಿ.ಕೃಷ್ಣಮಾಚಾರ್ಯರು ಮೈಸೂರಿನಲ್ಲಿ ಯೋಗ ವಿನ್ಯಾಸ ಮತ್ತು ಸೂರ್ಯ ನಮಸ್ಕಾರ ಎಂಬ ಆಸನಗಳನ್ನು ಸೃಷ್ಟಿ ಮಾಡಿದರು. ಆ ನಿಟ್ಟಿನಲ್ಲಿ ಮೋದಿಯವರು ಮೈಸೂರು ಅರಮನೆಯ ಎದುರಿನಲ್ಲೇ ಯೋಗ ದಿನಾಚರಣೆ ಆಚರಿಸಿದರು ಎಂದು ತಿಳಿಸಿದರು.

**ಮೋದಿ ನಾಯಕತ್ವ ಇಡೀ ವಿಶ್ವಕ್ಕೇ ಲಾಭ:** ನರೇಂದ್ರ ಮೋದಿಯವರ ನಾಯಕತ್ವ ಕೇವಲ ಭಾರತಕ್ಕೆ ಮಾತ್ರವಲ್ಲ, ಇಡೀ ವಿಶ್ವಕ್ಕೆ ಲಾಭವಾಗುತ್ತಿದೆ. ಅವರ ಕೈಯನ್ನು ಬಲಪಡಿಸುವುದು ನಮ್ಮ ಕರ್ತವ್ಯ ವಾಗಲಿದೆ. ದೇಶದಲ್ಲಿ ಎಷ್ಟೆಲ್ಲಾ ಸಾಧನೆಗಳು ಆಗಿದ್ದರೂ ಇದು ಕೇವಲ ಟ್ರೇಲರ್ ಎಂದು ಮೋದಿಯವರು ಹೇಳಿದ್ದಾರೆ. ಟ್ರೇಲರ್ ಬಹಳವೇ ಉತ್ತಮವಾಗಿದ್ದು, ಮೂವೀ ಕೂಡ ಉತ್ತಮವಾಗಿರಲು ಏ.26ರಂದು ತಾವೆಲ್ಲರೂ ಮತಗಟ್ಟೆಗೆ ಹೋಗಿ ಅತ್ಯಾಮೂಲ್ಯವಾದ ತಮ್ಮ ಮತವನ್ನು ಕ್ರಮ ಸಂಖ್ಯೆ 1 ಮತ್ತು ಕಮಲದ ಗುರುತಿಗೆ ನೀಡಿ, ಶ್ರೇಷ್ಠ ಭಾರತ ನಿರ್ಮಾಣಕ್ಕೆ ಮುಂದಾಗಿ. ವಿಕಸಿತ ಭಾರತ 2047ಕ್ಕಾಗಿ ನಾವೆಲ್ಲರೂ ಮುಂದು ವರೆಯೋಣ ಎಂದು ಮನವಿ ಮಾಡಿದರು.

**ನಮ್ಮ ಬಗ್ಗೆ ಅಪಪ್ರಚಾರ:** ಹೌದು ನಮ್ಮ ಬಗ್ಗೆಯೂ ಬಹಳ ಅಪಪ್ರಚಾರ ನಡೆದಿದೆ. ಆ ಎಲ್ಲದಕ್ಕೂ ಸಧ್ಯ ಉತ್ತರ ಕೊಡಲು ಹೋಗಲ್ಲ. ಅರಮನೆಯಲ್ಲಿರುವ ವ್ಯಕ್ತಿಯ ಭೇಟಿ ಹೇಗೆ ಎಂಬಿತ್ಯಾದಿಯಾಗಿ ಬಹಳಷ್ಟು ಅಪಪ್ರಚಾರ ನಡೆದಿದೆ. ಎಲ್ಲದಕ್ಕೂ ಉತ್ತರ ಕೊಡಲು ಹೋಗಲ್ಲ. ಕೆಲಸವೇ ಅದಕ್ಕೆ ಉತ್ತರ ಎಂದು ಯದುವೀರ್ ಕಿಡಿಕಾರಿದರು. ಇದಕ್ಕೂ ಮುನ್ನ ಕೆಆರ್ ಮೊಹಲ್ಲಾದ ಬನುಮಯ್ಯ ವೃತ್ತದಿಂದ ಇಲ್ಲಿನ ಪ್ರಮುಖ ರಸ್ತೆಗಳಲ್ಲಿ ರೋಡ್ ಶೋ ಮೂಲಕ ಮತ ಯಾಚಿಸಿದರು. ಬಳಿಕ ಅಗ್ರಹಾರದ 101 ಗಣಪತಿ ದೇವಸ್ಥಾನ ವೃತ್ತದ ಸುತ್ತಮುತ್ತಲ ರಸ್ತೆಗಳಲ್ಲಿ ರೋಡ್ ಶೋ ನಡೆಸಿದರು. ಅಲ್ಲದೆ, ಕಂಸಾಳೆ ಮಹದೇವಯ್ಯ ವೃತ್ತದಲ್ಲಿಯೂ ರೋಡ್ ಶೋ ನಡೆಸಿ ಮತ ಯಾಚಿಸಿದರು. ಶಾಸಕ ಟಿ.ಎಸ್.ಶ್ರೀವತ್ಸ ನಗರ ಪಾಲಿಕೆ ಮಾಜಿ ಸದಸ್ಯರಾದ ಬಿ.ವಿ.ಮಂಜುನಾಥ್, ಬಿಜೆಪಿ ಯುವ ಮೋರ್ಚಾ ನಗರಾಧ್ಯಕ್ಷ ರಾಕೇಶ್‌ಗೌಡ, ಬಿಜೆಪಿ ಮುಖಂಡರಾದ ನಿಶಾಂತ್, ಜೋಗಿ ಮಂಜು, ಪಾರ್ಥಸಾರಥಿ, ಎನ್.ಕೆ. ಸುಂದರ್, ಪ್ರಸಾದ್, ವಿ.ಮಂಜುನಾಥ್, ಕೆಆರ್ ಕ್ಷೇತ್ರದ ಬಿಜೆಪಿ ಉಪಾಧ್ಯಕ್ಷ ಶ್ರೀನಿವಾಸ್, ಪ್ರಧಾನ ಕಾರ್ಯ ದರ್ಶಿ ಜಯರಾಮ್ ಮತ್ತಿತರರು ಹಾಜರಿದ್ದರು.

# ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಅಲೆ ಗೆಲುವಿಗೆ ಸಹಕಾರಿ

### ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ವಿಶ್ವಾಸ





ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಶ್ರೀರಂಗಪಟ್ಟಣ ತಾಲೂಕು ವಿವಿಧ ಗ್ರಾಮಗಳಲ್ಲಿ ಭರ್ಜರಿ ಪ್ರಚಾರ ನಡೆಸಿದರು.

ಶ್ರೀರಂಗಪಟ್ಟಣ, ಏ.18– ಬಡವರಿಗೆ ಬದುಕು ಕಟ್ಟಿಕೊಟ್ಟ, ಮಹಿಳೆಯರಿಗೆ ಆರ್ಥಿಕವಾಗಿ ಶಕ್ತಿ ತುಂಬಿದ ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಯೋಜನೆಗಳಿಗೆ ರಾಜ್ಯ ದೆಲ್ಲೆಡೆ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ರಾಜ್ಯದಲ್ಲಿ ಗ್ಯಾರಂಟಿ ಸರ್ಕಾರ ಅಸ್ತಿತ್ವಕ್ಕೆ ಬಂದಂತೆ ಕೇಂದ್ರದಲ್ಲೂ ಗ್ಯಾರಂಟಿ ಸರ್ಕಾರ ರಚನೆಯಾಗಲಿದೆ ಎಂದು ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ವಿಶ್ವಾಸ ವ್ಯಕ್ತಪಡಿಸಿದರು.

ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಗ್ರಾಮ ಪಂಚಾಯತಿಗಳಲ್ಲಿ ಶಾಸಕ ರಮೇಶ್ ಬಾಬು ಬಂಡಿಸಿದ್ದೇಗೌಡ ಅವರೊಂದಿಗೆ ಚುನಾವಣಾ ಪ್ರಚಾರ ನಡೆಸಿ ಮಾತನಾಡಿದರು.

ದೇಶದಲ್ಲಿ ಬೆಲೆ ಏರಿಕೆ ಮತ್ತು ನಿರುದ್ಯೋಗ ಹೆಚ್ಚಾಗುತ್ತಿದೆ. ಇದಕ್ಕೆ ಕಡಿವಾಣ ಹಾಕಲು ಮತದಾರರು ಕಾಂಗ್ರೆಸ್‌ಗೆ ಬೆಂಬಲ ನೀಡಬೇಕು. ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಕಾಂಗ್ರೆಸ್ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ. ಈಗಾಗಲೇ ರಾಜ್ಯದ ಜನತೆಯ ಮನೆಬಾಗಿಲಿಗೆ ಗೃಹಲಕ್ಷ್ಮಿ ಕಾಲಿಟ್ಟಿದ್ದು ಮುಂದೆ ಮಹಾಲಕ್ಷ್ಮಿ ಕೂಡ ಬರಲಿದ್ದಾಳೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್‌ನ ಗ್ಯಾರಂಟಿ ಅಲೆ ಜೋರಾಗಿದೆ. ಗ್ಯಾರಂಟಿ ಅಲೆ ಮುಂದೆ ಯಾವ ಅಲೆಯೂ ಇಲ್ಲ. ಕಾಂಗ್ರೆಸ್‌ನ ಪಂಚ ಗ್ಯಾರಂಟಿಗಳು ಜನರ ವಿಶ್ವಾಸ, ನಂಬಿಕೆಯನ್ನು ಹೆಚ್ಚಿಸಿದೆ. ಈ ಚುನಾವಣೆಯಲ್ಲಿ ಅವುಗಳೆಲ್ಲಾ ನನಗೆ ವರದಾನವಾಗಲಿದೆ ಎಂದು ಹೇಳಿದರು.

ಕೃಷಿಕರ ನಂತರ ಕಾರ್ಮಿಕ ವರ್ಗ ದೇಶದ ಅರ್ಥವ್ಯವಸ್ಥೆಗೆ ಅಡಿಪಾಯ. ಶ್ರಮಿಕ ವರ್ಗದ ಹಕ್ಕುಗಳನ್ನು ಮರಳಿಸಿ ಅವರ ಭವಿಷ್ಯ ರೂಪಿಸಬೇಕಿದೆ. ಸಂವಿಧಾನ ರಕ್ಷಣೆಗಾಗಿ, ಪ್ರಜಾಪ್ರಭುತ್ವದ ಉಳಿವಿಗಾಗಿ ಈ ಜಿಲ್ಲೆಯ ಸ್ವಾಭಿಮಾನದ ಅಸ್ತಿತ್ವಕ್ಕಾಗಿ ಮತದಾರರು ಕಾಂಗ್ರೆಸ್ ಬೆಂಬಲಿಸುವ ಮೂಲಕ ಜನಶಕ್ತಿ ನೀಡಬೇಕೆಂದು ಮನವಿ ಮಾಡಿದರು.


ಹೋದ ಕಡೆಯಲ್ಲೆಲ್ಲ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ಬಿಸಿಲಿನಲ್ಲೂ ಜನರು ನನ್ನನ್ನು ನೋಡಲು ಸೇರುತ್ತಿದ್ದಾರೆ. ಮಹಿಳೆಯರು, ವೃದ್ಧರು, ಯುವಕರು ಕಾಂಗ್ರೆಸ್‌ನತ್ತ ಒಲವು ವ್ಯಕ್ತಪಡಿಸುತ್ತಿದ್ದಾರೆ. ನೂರಕ್ಕೆ ನೂರು ಗೆಲುವು ನಿಮ್ಮದೆ ಎಂದು ಹೇಳುತ್ತಿರುವುದನ್ನು ಕೇಳಿದರೆ ನನ್ನ ಗೆಲುವಿನ ಆತ್ಮವಿಶ್ವಾಸ ಡಬಲ್ ಆಗಿದೆ ಎಂದರು

## ಮೈಸೂರಲ್ಲಿ ಸುಗಮವಾಗಿ ನಡೆದ ಸಿಇಟಿ

### ಮೊದಲ ದಿನ ಜಿಲ್ಲೆಯಲ್ಲಿ 17,137ರ ಪೈಕಿ 13,042 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರು; 4,095 ಗೈರು

ಮೈಸೂರು, ಏ.18(ಆರ್‌ಕೆ)–ಕರ್ನಾಟಕ ರಾಜ್ಯದಾದ್ಯಂತ ಇಂದು ಪರೀಕ್ಷೆ (ಸಿಇಟಿ)ಗಳು ಆರಂಭವಾದವು. ಮೈಸೂರಲ್ಲೂ ಪರೀಕ್ಷೆ ಸುಗಮವಾಗಿ ನಡೆಯಿತು.

ದ್ವಿತೀಯ ಪಿಯುಸಿ ವಿಜ್ಞಾನ ವಿಷಯದ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಪದವಿಯಂತಹ ವೃತ್ತಿಪರ ಕೋರ್ಸ್‌ಗಳಿಗೆ ಸೇರಬಯಸುವ ವಿದ್ಯಾರ್ಥಿಗಳಿಗಾಗಿ ನಡೆವ ಕರ್ನಾಟಕ ಸಾಮಾನ್ಯ ಪರೀಕ್ಷೆ (KCET)ಗೆ ಮೈಸೂರು ಜಿಲ್ಲೆಯಲ್ಲಿ 13,042 ಮಂದಿ ಹಾಜರಾಗಿದ್ದರು.



ಮೈಸೂರು ನಗರದ ಟೆರಿಷಿಯನ್, ಸೆಂಟ್ ಫಿಲೋಮಿನಾಸ್, ಡಿ.ಬನುಮಯ್ಯ, ದೇವರಾಜ, ಮಹಾರಾಜ, ಮಹಾರಾಣಿ, ಮಹಾಜನ, ಮರಿಮಲ್ಲಪ್ಪ, ಸದ್ವಿದ್ಯಾ, ಶಾರದಾ ವಿಲಾಸ, ಗೋಪಾಲಸ್ವಾಮಿ ಸೇರಿದಂತೆ 29 ಕೇಂದ್ರಗಳು ಹಾಗೂ ಜಿಲ್ಲೆಯ ತಾಲೂಕು ಕೇಂದ್ರಗಳ 10 ಕೇಂದ್ರಗಳಲ್ಲಿ ಕೆಸಿಇಟಿ ಯಾವುದೇ ಗೊಂದಲವಿಲ್ಲದೆ ಆರಂಭವಾಗಿದೆ.

ಜಿಲ್ಲೆಯಾದ್ಯಂತ ಇಂದು ಆರಂಭವಾದ ಪರೀಕ್ಷೆಗೆ 17,137 ಮಂದಿ ನೋಂದಣಿಯಾಗಿದ್ದರು. ಆದರೆ 13,042 ವಿದ್ಯಾರ್ಥಿಗಳು ಮಾತ್ರ ಹಾಜರಾಗಿ, 4,095 ಮಂದಿ ಗೈರಾಗಿದ್ದಾರೆ ಎಂದು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಮೈಸೂರು ಜಿಲ್ಲಾ ಉಪ ನಿರ್ದೇಶಕ ಮರಿಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಇಂದು ಬೆಳಗ್ಗೆ 10.30ರಿಂದ 11.50ರವರೆಗೆ ಜೀವಶಾಸ್ತ್ರ ಮತ್ತು ಮಧ್ಯಾಹ್ನ 2.30ರಿಂದ 3.50 ಗಂಟೆವರೆಗೆ ಗಣಿತ ಶಾಸ್ತ್ರ ವಿಷಯದ ಪರೀಕ್ಷೆಗಳು ಯಾವುದೇ ಗೊಂದಲಗಳಿಲ್ಲದೆ ಶಾಂತಿಯುತವಾಗಿ ನಡೆದವು. ನಾಳೆ (ಏ.19) ಬೆಳಗ್ಗೆ ಭೌತ ಶಾಸ್ತ್ರ ಮತ್ತು ಮಧ್ಯಾಹ್ನ ರಸಾಯನಶಾಸ್ತ್ರ ಹಾಗೂ ಏಪ್ರಿಲ್ 20ರಂದು ಬೆಳಗ್ಗೆ 11.30ರಿಂದ 12.30 ಗಂಟೆವರೆಗೆ ಹೊರನಾಡು ಹಾಗೂ ಗಡಿನಾಡಿನ ಕನ್ನಡಿಗರಿಗೆ ಸಿಇಟಿ ನಡೆಯಲಿದೆ ಎಂದು ಉಪ ನಿರ್ದೇಶಕರು ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಪೋಷಕರು ತಮ್ಮ ಮಕ್ಕಳನ್ನು ಪರೀಕ್ಷಾ ಕೇಂದ್ರಕ್ಕೆ ಕರೆತಂದು, ಪರೀಕ್ಷೆ ಮುಗಿದ ಬಳಿಕ ಸಂಜೆ ವಾಪಸ್ ಮನೆಗೆ ಕರೆದೊಯ್ಯುತ್ತಿದ್ದರು. ಈ ಬಾರಿ ಪರೀಕ್ಷಾ ಕೇಂದ್ರಗಳಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದು, ಯಾವುದೇ ಅಕ್ರಮ ನಡೆಯದಂತೆ ಕಟ್ಟೆಚ್ಚರ ವಹಿಸಲಾಗಿತ್ತು.

ನಿಗದಿತ ಸಮಯಕ್ಕೆ ಸರಿಯಾಗಿ ಜಿಲ್ಲಾ ಖಜಾನೆಯಿಂದ ಪ್ರಶ್ನೆ ಪತ್ರಿಕೆ, ಉತ್ತರ ಪ್ರತಿಗಳನ್ನು ಶಸ್ತ್ರಸಜ್ಜಿತ ಪೊಲೀಸ್ ಬೆಂಗಾವಲಿನಲ್ಲಿ ಜಿಪಿಎಸ್ ಹೊಂದಿದ ವಾಹನಗಳ ಮೂಲಕ ಪರೀಕ್ಷಾ ಕೇಂದ್ರಗಳಿಗೆ ಕೊಂಡೊಯ್ದು ತಲುಪಿಸಿ ವಾಪಸ್ ತಂದು ಒಪ್ಪಿಸಲಾಯಿತು.

ಎಲ್ಲಾ ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ಸೆಕ್ಷನ್ 144 ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಿ ಜೆರಾಕ್ಸ್ ಅಂಗಡಿಗಳನ್ನು ಬಂದ್ ಮಾಡಿಸಲಾಗಿತ್ತು. ಅಲ್ಲದೆ ಆಯಾ ಠಾಣೆಗಳ ಸಿಬ್ಬಂದಿಗಳನ್ನು ನಿಯೋಜಿಸಿದ್ದರಿಂದ ಯಾವುದೇ ಗೊಂದಲವಿಲ್ಲದೆ ಮೊದಲ ದಿನದ ಎರಡು ವಿಷಯಗಳ ಪರೀಕ್ಷೆಗಳು ಮುಕ್ತಾಯಗೊಂಡವು.

## ಕಡ್ಡಾಯವಾಗಿ ಮತದಾನ ಮಾಡುವ ಮೂಲಕ ಪ್ರಜಾಪ್ರಭುತ್ವ ಮೌಲ್ಯ ಕಾಪಾಡಿ

### ಪ್ರಾಧ್ಯಾಪಕಿ ಪ್ರೊ. ಎನ್.ಕೆ. ಲೋಲಾಕ್ಷಿ ಕರೆ




ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ದಲಿತ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ವತಿಯಿಂದ 'ಪ್ರಜಾಪ್ರಭುತ್ವದ ಉಳಿವಿಗಾಗಿ ಮತದಾನ' ಜಾಗೃತಿ ಅಭಿಯಾನ ನಡೆಸಲಾಯಿತು.

ಮೈಸೂರು, ಏ.18(ಎಂಟಿವೈ)– ಸಂವಿಧಾನದ ಮತ್ತು ಪ್ರಜಾಪ್ರಭುತ್ವದ ಸೌಂದರ್ಯವೇ ಮತದಾನವಾಗಿದ್ದು, ಮತದಾರರು ಜಾತಿ, ಧರ್ಮ, ಉಡುಗೊರೆಯ ಮೋಹಕ್ಕೆ ಸಿಲುಕದೆ ಅರ್ಹರಿಗೆ ಮತ ನೀಡುವ ಮೂಲಕ ಸಂವಿಧಾನ, ಪ್ರಜಾಪ್ರಭುತ್ವದ ಮೌಲ್ಯ ಕಾಪಾಡಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರಾದ ಪ್ರೊ.ಎನ್.ಕೆ. ಲೋಲಾಕ್ಷಿ ಕರೆ ನೀಡಿದರು.

ದಲಿತ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕ ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಆಯೋಜಿಸಿದ್ದ 'ಪ್ರಜಾಪ್ರಭುತ್ವದ ಉಳಿವಿಗಾಗಿ ಮತದಾನ' ಜಾಗೃತಿ ಅಭಿಯಾನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಡಾ.ಬಿ.ಆರ್. ಅಂಬೇಡ್ಕರ್ ಅವರು ಮತದಾನದ ಹಕ್ಕನ್ನು ಸಾಂವಿಧಾನಿಕವಾಗಿ ದೊರಕಿಸಿಕೊಟ್ಟಿದ್ದಾರೆ. ವಿದ್ಯಾವಂತರು ಮತ್ತು ತಿಳಿದವರು ಪ್ರಜಾಪ್ರಭುತ್ವ ಮತ್ತು ಮತದಾನದ ಬಗ್ಗೆ ಭಾಷಣ ಮಾಡುತ್ತಾರೆ. ಅಷ್ಟೇ ಉತ್ಸಾಹದಿಂದ ಮತದಾನವನ್ನು ಮಾಡುವ ಮೂಲಕ ಪ್ರಜಾಪ್ರಭುತ್ವಕ್ಕೆ ಶಕ್ತಿ ತುಂಬಬೇಕು ಎಂದು ತಿಳಿಸಿದರು.

ವಿಶ್ವಮೈತ್ರಿ ಬುದ್ಧ ವಿಹಾರದ ಡಾ. ಕಲ್ಯಾಣಸಿರಿ ಭಂತೇಜಿ ಅವರು ಮಾತನಾಡಿ, ಮತದಾನದ ಸಂದರ್ಭದಲ್ಲಿ ಆಮಿಷಕ್ಕೆ ಒಳಗಾಗಬಾರದು. ಮತದಾನ ಪ್ರಜಾಪ್ರಭುತ್ವವನ್ನು ಬಲಪಡಿಸಲು ಇರುವ ಜನತೆಯ ಶಕ್ತಿಯಾಗಿದ್ದು, ದೇಶದ ಸಂವಿಧಾನದ ಆಶಯಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವ ವ್ಯಕ್ತಿಗಳನ್ನು ಗುರುತಿಸಿ ಮತದಾನ ಮಾಡಬೇಕು.

ಅಭಿಯಾನದಲ್ಲಿ ದಲಿತ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಡಾ. ರಂಗಸ್ವಾಮಿ ಕಾಳಿಹುಂಡಿ, ಉಪಾಧ್ಯಕ್ಷ ಡಾ.ಮಂಜು ಟಿ. ಸತ್ತಿಗೆ ಹುಂಡಿ, ಖಜಾಂಚಿ ಡಾ.ಬಿ.ಶಿವಶಂಕರ್, ಜಿಲ್ಲಾ ಸಂಯೋಜಕ ಡಾ.ಚಂದ್ರಗುಪ್ತ, ದಲಿತ ಸಹಿತ್ಯ ಪರಿಷತ್ತಿನ ಪ್ರಕಾಶನ ಸಲಹೆಗಾರ ಡಾ.ಬಿ.ಮೂರ್ತಿ, ಸಹ ಕಾರ್ಯದರ್ಶಿ ಡಾ.ಟಿ.ಎಂ.ಪವಿತ್ರ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ವಕೀಲ ಎಸ್. ಉಮೇಶ್, ಮೈಸೂರು ವಿಶ್ವ ವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ಕೆ.ಸಿ. ನಾಗರಾಜು ಇನ್ನಿತರರು ಉಪಸ್ಥಿತರಿದ್ದರು.

## ಡಿ.ಕೆ.ಸುರೇಶ್ ಗೆಲುವಿಗಾಗಿ ಚಾಮುಂಡಿ ತಾಯಿಗೆ ವಿಶೇಷ ಪೂಜೆ

ಮೈಸೂರು, ಏ.18(ಎಂಟಿವೈ)– ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಸುರೇಶ್ ಗೆಲುವಿಗಾಗಿ ಪ್ರಾರ್ಥಿಸಿ ಅವರ ಅಭಿಮಾನಿಗಳು ಚಾಮುಂಡಿಬೆಟ್ಟಕ್ಕೆ ಮೆಟ್ಟಿಲು ಹತ್ತಿ ನಾಡದೇವಿಗೆ ಪೂಜೆ ಸಲ್ಲಿಸಿದರು.



ಡಿ.ಕೆ.ಸುರೇಶ್ ಗೆಲುವಿಗಾಗಿ ಪ್ರಾರ್ಥಿಸಿ ಡಿ.ಕೆ.ಸುರೇಶ್ ಅಭಿಮಾನಿಗಳು ಚಾಮುಂಡಿಬೆಟ್ಟಕ್ಕೆ ಮೆಟ್ಟಿಲು ಹತ್ತಿ ನಾಡದೇವಿಗೆ ಪೂಜೆ ಸಲ್ಲಿಸಿದರು.

ಬೆಂಗಳೂರಿಂದ ಮೈಸೂರಿಗೆ ಗುರುವಾರ ಆಗಮಿಸಿದ್ದ ಡಿ.ಕೆ. ಬ್ರದರ್ಸ್ ಅಭಿಮಾನಿ ಬಳಗದ 300ಕ್ಕೂ ಹೆಚ್ಚು ಮಂದಿ ಬೆಟ್ಟದ ಪಾದದ ಬಳಿ ಪೂಜೆ ಸಲ್ಲಿಸಿ, ಮೆಟ್ಟಿಲುಗಳ ಮೂಲಕ ಬೆಟ್ಟ ತಲುಪಿ ಪೂಜೆ ಸಲ್ಲಿಸಿದರು. ಡಿಕೆ ಸುರೇಶ್ ಅವರು ಹೆಚ್ಚಿನ ಮತಗಳ ಅಂತರದಲ್ಲಿ ಗೆಲುವು ಸಾಧಿಸಬೇಕು. ರಾಜ್ಯದ 28 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಗಳಿಸಬೇಕು ಎಂದು ಪ್ರಾರ್ಥಿಸಿದರು.

ಡಿ.ಕೆ ಸುರೇಶ್ ಅವರು ಮತ್ತೊಮ್ಮೆ ಸಂಸದರಾಗಿ ಆಯ್ಕೆಯಾಗಬೇಕು ಎಂದು ಹರಕೆ ಹೊತ್ತು ಬಂದಿದ್ದೇವೆ. ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಬಡ ಹಾಗು ಮಧ್ಯಮ ವರ್ಗ ಜನ ಗೌರವಯುತವಾಗಿ ಜೀವಿಸುವಂತಾಗಿದೆ. ಪ್ರತಿ ತಿಂಗಳು ಕಾಂಗ್ರೆಸ್ ಸರ್ಕಾರ 2 ಸಾವಿರ ನೀಡುತ್ತಿದೆ. ಅನ್ನಭಾಗ್ಯ ಯೋಜನೆ ಮೂಲಕ ಅಕ್ಕಿ ನೀಡುತ್ತಿದ್ದಾರೆ. ಸರ್ಕಾರದ ಈ ಯೋಜನೆಗಳು ನಮಗೆ ಅನುಕೂಲವಾಗಿವೆ. ಬಿಜೆಪಿ ಬಡವರಿಗಾಗಿ ಏನೂ ಮಾಡಿಲ್ಲದ ಕಾರಣ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಜನತೆ ಕಾಂಗ್ರೆಸ್ ಅಭ್ಯರ್ಥಿಗಳ ಕೈ ಹಿಡಿಯಲಿದ್ದಾರೆ ಎಂದು ಡಿಕೆ ಸುರೇಶ್ ಅಭಿಮಾನಿಗಳು ಅಭಿಪ್ರಾಯಪಟ್ಟರು.

## ಮೇ 2ರಂದು ಉಚಿತ ಸಾಮೂಹಿಕ ಉಪನಯನ


ಮೈಸೂರು, ಏ. 18– ಶ್ರೀ ಕೃಷ್ಣ ಟ್ರಸ್ಟ್ ಹಾಗೂ ಶ್ರೀ ಕೃಷ್ಣ ಮಿತ್ರ ಮಂಡಳಿ ವತಿಯಿಂದ ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಉಚಿತ ಸಾಮೂಹಿಕ ಉಪನಯನವನ್ನು ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಮೇ 2ರಂದು ಆಯೋಜಿಸಲಾಗಿದೆ. ತ್ರಿಮತಸ್ಥ ಬ್ರಾಹ್ಮಣರು ಇದರ ಸದುಪಯೋಗ ಪಡೆದುಕೊಳ್ಳಬೇಕಾಗಿ ಶ್ರೀ ಕೃಷ್ಣ ಟ್ರಸ್ಟ್ ಉಪಾಧ್ಯಕ್ಷ ರವಿಶಾಸ್ತ್ರಿ ಮನವಿ ಮಾಡಿದ್ದಾರೆ. ಆಸಕ್ತರು 0821–254 4004/ 8088755735 ದೂರವಾಣಿಗೆ ಕರೆ ನೋಂದಾಯಿಸಿಕೊಳ್ಳಬಹುದು.

# ಅಲ್ಪಸಂಖ್ಯಾತರು ನೂರಕ್ಕೆ ನೂರರಷ್ಟು ಕಾಂಗ್ರೆಸ್‌ಗೆ ಬೆಂಬಲ ನೀಡಬೇಕು

### ಎಂಎಲ್‌ಸಿ ಅಬ್ದುಲ್ ಜಬ್ಬಾರ್ ಮನವಿ

ಮೈಸೂರು,ಏ.18(ಎಂಟಿವೈ)– ಪ್ರಧಾನಿ ನರೇಂದ್ರ ಮೋದಿ ಇದುವರೆಗೆ ಟ್ರೇಲರ್ ನೋಡಿದ್ದೀರಿ, ಪಿಕ್ಚರ್ ಬಾಕಿ ಇದೆ ಎಂದಿರುವ ಮಾತಿನ ಅರ್ಥವನ್ನು ಅಲ್ಪಸಂಖ್ಯಾತರು ಅರ್ಥ ಮಾಡಿಕೊಂಡು, ಈ ಬಾರಿ ಪೂರ್ಣ ಪ್ರಮಾಣದಲ್ಲಿ ಕಾಂಗ್ರೆಸ್ ಬೆಂಬಲಿಸುವಂತೆ ವಿಧಾನಪರಿಷತ್ ಸದಸ್ಯ, ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಅಬ್ದುಲ್ ಜಬ್ಬಾರ್ ಮನವಿ ಮಾಡಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಅಲ್ಪಸಂಖ್ಯಾತ ಘಟಕದ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪ್ರಮಾಣ ಪತ್ರ ನೀಡಿ ಮಾತನಾಡಿದ ಅವರು, ಕಳೆದ 10 ವರ್ಷದಿಂದ ಪ್ರಧಾನಿ ನರೇಂದ್ರ ಮೋದಿ ದೇಶದಲ್ಲಿ ಆಡಳಿತ ನಡೆಸುತ್ತಿದ್ದು, ಈ ಅವಧಿಯಲ್ಲಿ ಒಂದೇ ಒಂದು ಜನಪರ ಯೋಜನೆಯನ್ನು ಜಾರಿಗೊಳಿಸಿಲ್ಲ. ಕೇವಲ ಹಿಂದು, ಮುಸ್ಲಿಂ, ಪಾಕಿಸ್ತಾನ ಹೆಸರನ್ನು ಪ್ರಸ್ತಾಪಿಸುತ್ತ, ಕೋಮುಭಾವನೆ ಕೆರಳಿಸಿ ರಾಜಕೀಯ ಲಾಭ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಹಿಂದು ಮತ್ತು ಮುಸ್ಲಿಮರಿಗೆ ಏನೂ ಪ್ರಯೋಜನವಿಲ್ಲ. ಇದನ್ನು ಜನ ಅರ್ಥ ಮಾಡಿಕೊಳ್ಳಬೇಕು. ದೇಶ ಹಾಗೂ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಸಮಾಜದಲ್ಲಿ ಶಾಂತಿ ನೆಲೆಸಿತ್ತು. ಆದರೆ, ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೋಮು ಗಲಭೆಗೆ ಪ್ರಚೋದನೆ ನೀಡುತ್ತ ಭಯದ ವಾತಾವರಣ ನೆಲೆಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಡೆದ ಅಲ್ಪಸಂಖ್ಯಾತ ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್, ಸಚಿವ ಕೆ.ವೆಂಕಟೇಶ್, ಶಾಸಕ ತನ್ವೀರ್ ಸೇಠ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಎಲ್ಲೆಡೆ ಪ್ರಚಾರ ಸಭೆ ನಡೆಸಿ '10 ವರ್ಷದ ಅವಧಿ ಕೇವಲ ಟ್ರೇಲರ್ ಅಷ್ಟೇ, ಪಿಕ್ಚರ್ ಬಾಕಿ ಇದೆ' ಎಂದು ಹೇಳುತ್ತಿದ್ದಾರೆ. ಈ ಮಾತಿನ ಅರ್ಥ ಮುಂದಿನ ದಿನಗಳಲ್ಲಿ ಅಲ್ಪಸಂಖ್ಯಾತರಿಗೆ ದೇಶದಲ್ಲಿ ಮತ್ತಷ್ಟು ತೊಂದರೆ ಕೊಡುವುದೇ ಆಗಿದೆ. ಇದನ್ನು ಅರ್ಥ ಮಾಡಿಕೊಳ್ಳಬೇಕು. ಏ.26ರಂದು ನಡೆಯುವ ಚುನಾವಣೆಯಲ್ಲಿ ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಬೇಕು. ಅಂದು ಶುಕ್ರವಾರವಾಗಿದ್ದು, ಬೆಳಗ್ಗೆ ನಮಾಜ್ ಮುಗಿಸಿ ಕುಟುಂಬ ಸದಸ್ಯರೊಂದಿಗೆ ಮತಗಟ್ಟೆಗೆ ಬಂದು ಮತ ಹಾಕಬೇಕು. ಯಾರೂ ಮೈಮರೆಯಬಾರದು. ನಿಮ್ಮ ಒಂದೊಂದು ಮತವೂ ದೇಶದಲ್ಲಿ ಶಾಂತಿ ನೆಲೆಸಲು ಪೂರಕವಾಗಿರುತ್ತದೆ. ಚುನಾವಣೆ ನಂತರ ಸ್ವಾಭಿಮಾನದಿಂದ ಬದುಕಬೇಕಾದರೆ ಅಲ್ಪಸಂಖ್ಯಾತರು ನೂರಕ್ಕೆ ನೂರರಷ್ಟು ಕಾಂಗ್ರೆಸ್‌ಗೆ ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ಕಾಂಗ್ರೆಸ್ ಸರ್ಕಾರ ಮೊದಲಿನಿಂದಲೂ ಅಲ್ಪಸಂಖ್ಯಾತರ ಹಿತ ಕಾಯುತ್ತಾ ಬಂದಿದೆ. ವಿವಿಧ ಕಾರ್ಯಕ್ರಮಗಳ ಮೂಲಕ ಎಲ್ಲರಿಗೂ ಸಾಮಾಜಿಕ ನ್ಯಾಯ ಕಲ್ಪಿಸುತ್ತಾ ಬಂದಿದೆ. ಖಬರ್‌ಸ್ತಾನ್‌ಗಳಿಗೆ ಕಾಂಪೌಂಡ್ ಕಟ್ಟಿಸಿ, ಮೂಲಭೂತ ಸೌಲಭ್ಯದಿಂದ ವಂಚಿತವಾಗಿದ್ದ ಮೈನಾರಿಟಿ ಕಾಲೋನಿ ಅಭಿವೃದ್ಧಿ ಮಾಡಲಾಗಿದೆ. ಮೈನಾರಿಟಿ ಕಾಲೋನಿ ಅಭಿವೃದ್ಧಿ ಹಾಗೂ ಸಮುದಾಯದ ಏಳಿಗೆಗೆ ಸಾವಿರ ಕೋಟಿ ರೂ. ಅನುದಾನ ನೀಡಿದೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗ ಮೈನಾರಿಟಿ ಸಮುದಾಯಕ್ಕೆ ನೀಡುತ್ತಿದ್ದ ಸೌಲಭ್ಯ ಸ್ಥಗಿತಗೊಳಿಸಲಾಯಿತು. ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ವಿದ್ಯಾರ್ಥಿ ವೇತನ ನಿಲ್ಲಿಸಲಾಯಿತು. ಈ ಹಿಂದೆ ದೊರೆಯುತ್ತಿದ್ದ ಸೌಲಭ್ಯ ಮುಂದುವರೆಯಬೇಕಾದರೆ ಕಾಂಗ್ರೆಸ್ ಬೆಂಬಲಿಸಬೇಕಾಗಿದೆ ಎಂದರು.

ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಮಾತನಾಡಿದರು. ಈ ಸಂದರ್ಭದಲ್ಲಿ ಸಚಿವ ಕೆ.ವೆಂಕಟೇಶ್, ಶಾಸಕ ತನ್ವೀರ್ ಸೇಠ್, ಅಲ್ಪಸಂಖ್ಯಾತ ಘಟಕದ ನೂತನ ಅಧ್ಯಕ್ಷ ಮೋಸಿನ್ ಖಾನ್, ಉಪಾಧ್ಯಕ್ಷರಾದ ಅಸ್ಲಂ ಪಾಶ, ನಾಸಿರ್, ಪ್ರಧಾನ ಕಾರ್ಯದರ್ಶಿ ರಫಿಕ್ ಪಾಶ, ಕಾರ್ಯದರ್ಶಿಗಳಾದ ಇಮ್ರಾನ್, ಮಕ್ಸೂದ್‌ವುಲ್ಲಾ, ಮುಜಾಹಿದ್ (ಹೆಚ್.ಡಿ.ಕೋಟೆ) ಹಾಗೂ ಇನ್ನಿತರ ಪದಾಧಿಕಾರಿಗಳಿಗೆ ಪಕ್ಷದ ಧ್ವಜ ನೀಡಿ ಅಧಿಕಾರ ವಹಿಸಲಾಯಿತು.

ಮೇ 3ಕ್ಕೆ

# ಉಸಿರೇ ಉಸಿರೇ..

## ವಿಶೇಷ ಪಾತ್ರದಲ್ಲಿ ಕಿಚ್ಚ ಸುದೀಪ್




ಪ್ರದೀಪ್ ಯಾದವ್ ಅವರ ನಿರ್ಮಾಣದ, ವಿಜಯ್ ನಿರ್ದೇಶನದ ಹಾಗೂ ಬಿಗ್‌ಬಾಸ್ ಖ್ಯಾತಿಯ ರಾಜೀವ್ ನಾಯಕನಾಗಿ ನಟಿಸಿರುವ ಉಸಿರೇ ಉಸಿರೇ ಮೇ 3ಕ್ಕೆ ಬಿಡುಗಡೆಯಾಗುತ್ತಿದೆ. ಕಿಚ್ಚ ಸುದೀಪ್ ವಿಶೇಷ ಪಾತ್ರದಲ್ಲಿ ನಟಿಸಿರುವ ಈ ಚಿತ್ರದ ಟೀಸರ್, ಟ್ರೇಲರ್ ಹಾಗೂ ಹಾಡುಗಳು ಬಿಡುಗಡೆಯಾಗಿ ಚಿತ್ರದ ಬಗ್ಗೆ ಕುತೂಹಲ ಹೆಚ್ಚಿಸಿವೆ. ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ನಾಯಕ ರಾಜೀವ್, ನಿರ್ಮಾಪಕ ಪ್ರದೀಪ್ ಯಾದವ್, ನಾಯಕಿ ಶ್ರೀಜಿತ್ ಘೋಷ್, ಪ್ರೀತಿಗೌಡ ಒಂದಷ್ಟು ವಿಚಾರ ಹಂಚಿಕೊಂಡರು. ರಾಜೀವ್ ಮಾತನಾಡುತ್ತ ಈ ಚಿತ್ರಕ್ಕಾಗಿ ನಾನು ಐದು ವರ್ಷ ಶ್ರಮಪಟ್ಟಿದ್ದೇನೆ. ನೈಜ ಘಟನೆಯೊಂದನ್ನಾಧರಿಸಿ ಮಾಡಿದ ಚಿತ್ರ ಇದಾಗಿದ್ದು, ಈ ಸಮಯದಲ್ಲಿ ನಾನು ಬೇರೆ ಯಾವುದೇ ಚಿತ್ರಗಳನ್ನು ಒಪ್ಪಿಕೊಂಡಿಲ್ಲ. ನನಗೆ ಅಣ್ಣನ ಸ್ಥಾನದಲ್ಲಿರುವ ಕಿಚ್ಚ ಸುದೀಪ್ ಅವರು ಚಿತ್ರದಲ್ಲಿ ಅಭಿನಯಿಸುವ ಮೂಲಕ ಪ್ರೋತ್ಸಾಹ ನೀಡಿದ್ದಾರೆ ಎಂದು ಹೇಳಿದರು.



ನಂತರ ನಿರ್ಮಾಪಕ ಪ್ರದೀಪ್ ಯಾದವ್ ಮಾತನಾಡಿ, ನನಗೆ ಚಿತ್ರರಂಗ ಹೊಸತು. ಸುದೀಪ್ ಅವರು ನಮ್ಮ ಜೊತೆಗಿರುವುದೇ ಧೈರ್ಯ. ನಾಯಕ ರಾಜೀವ್ ಹಾಗೂ ಚಿತ್ರತಂಡದ ಸಹಕಾರದಿಂದಲೇ ಚಿತ್ರ ರಿಲೀಸಾಗುತ್ತಿದೆ. ಆದರೆ ನಿರ್ದೇಶಕ ವಿಜಯ್ ಅವರು ತಮ್ಮ ಜವಾಬ್ದಾರಿಯನ್ನು ಮರೆತಿದ್ದು, ನಮಗೆ ಯಾವುದೇ ಸಹಕಾರ ನೀಡುತ್ತಿಲ್ಲ. ಇದರಿಂದ ನಮಗೆ ತುಂಬಾ ಬೇಸರವಾಗಿದೆ ಎಂದು ಆರೋಪಿಸಿದರು. ಕೆಲ ತಿಂಗಳುಗಳಿಂದ ಅವರು ನಮ್ಮ ಸಂಪರ್ಕದಲ್ಲಿಲ್ಲ. ಫೋನ್ ಮಾಡಿದರೂ ಸಹ ಕರೆ ಸ್ವೀಕರಿಸುತ್ತಿಲ್ಲ. ಅವರಿಂದ ಚಿತ್ರಕ್ಕೆ ಬಹಳ ನಷ್ಟವಾಗಿದೆ. ಆರಂಭದಲ್ಲಿ ಹೇಳಿದ ಬಜೆಟ್‌ಗಿಂತ ಡಬಲ್ ಖರ್ಚು ಮಾಡಿಸಿದ್ದಾರೆ. ಅದರಿಂದ ತುಂಬಾ ಅನಾನುಕೂಲವಾಗಿದೆ. ಮುಂದೆ ಯಾವುದೇ ಹೊಸ ನಿರ್ಮಾಪಕರಿಗೂ ಸಹ ಈ ರೀತಿ ಅನ್ಯಾಯ ಆಗಬಾರದು. ನನ್ನ ತಾಯಿ ಹಾಗೂ ಸ್ನೇಹಿತರ ಸಹಾಯದಿಂದ ಚಿತ್ರವನ್ನು ರಿಲೀಸ್ ಮಾಡುತ್ತಿದ್ದೇನೆ ಎಂದು ತಮ್ಮ ಅಳಲನ್ನು ತೋಡಿಕೊಂಡರು.

ನಂತರ ನಾಯಕಿ ಶ್ರೀಜಿತ ಘೋಷ್, ಸೀತಾರಾಮ್, ಸಹ ನಿರ್ಮಾಪಕರಾದ ಮಂಜುನಾಥ್ ಕಪೂರ್, ಚಂದ್ರಶೇಖರ್ ರೆಡ್ಡಿ ಮುಂತಾದವರು ಸಿನಿಮಾ ಕುರಿತಂತೆ ಮಾತನಾಡಿದರು. ಡೈನಾಮಿಕ್ ಸ್ಟಾರ್ ದೇವರಾಜ್, ತಾರಾ ಅನುರಾಧಾ, ಸುಚೇಂದ್ರ ಪ್ರಸಾದ್, ಬ್ರಹ್ಮಾನಂದಂ, ಅಲಿ, ಸಾಧು ಕೋಕಿಲ, ಮಂಜು ಪಾವಗಡ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.



## ಪರಮ್ ನಿರ್ದೇಶನದಲ್ಲಿ ಕೋಟಿ

### ಜಿಯೋ ಸ್ಟುಡಿಯೋಸ್ ನಿರ್ಮಾಣ

ಪತ್ರಿಕೆ ಹಾಗೂ ದೃಶ್ಯ ಮಾಧ್ಯಮದಲ್ಲಿ ಕೆಲಸ ಮಾಡಿ ಅನುಭವ ಹೊಂದಿರುವ ಪರಮೇಶ್ವರ ಗುಂಡ್ಕಲ್(ಪರಮ್) ಇದೀಗ ಮತ್ತೊಂದು ಹೆಜ್ಜೆ ಮುಂದೆ ಸಾಗಿ ಸಿನಿಮಾ ನಿರ್ದೇಶನಕ್ಕಿಳಿದಿದ್ದಾರೆ. ಡಾಲಿ ಧನಂಜಯ ನಟನೆಯ 'ಕೋಟಿ' ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಮೊದಲ ಬಾರಿಗೆ ಆಕ್ಷನ್ ಕಟ್ ಹೇಳಿದ್ದಾರೆ. ಈ ಚಿತ್ರವನ್ನು ನಿರ್ಮಾಣ ಮಾಡುವ ಮೂಲಕ ಕನ್ನಡ ಚಿತ್ರೋದ್ಯಮಕ್ಕೆ ಜಿಯೋ ಸ್ಟುಡಿಯೋಸ್ ಕಾಲಿಟ್ಟಿದೆ. ಇತ್ತೀಚೆಗೆ ಈ ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ಪರಮ್, ದಶಕದ ಹಿಂದೆ ಒಬ್ಬ ನಿರ್ದೇಶಕನಾಗಬೇಕೆಂಬ ಕನಸಿಟ್ಟುಕೊಂಡೇ ನಾನಿಲ್ಲಿಗೆ ಬಂದೆ. ಅದು ನನಸಾಗಲು 10 ವರ್ಷ ಬೇಕಾಯ್ತು. ನನ್ನ ಕನಸಿಗೆ ನಿರ್ಮಾಪಕಿಯಾಗಿ ಜ್ಯೋತಿ ದೇಶಪಾಂಡೆ, ನಾಯಕನಾಗಿ ನಟ ಡಾಲಿ ಧನಂಜಯ ಇಬ್ಬರೂ ನನಗೆ ಸಾಥ್ ನೀಡಿದರು. ಈಗಾಗಲೇ ಕೋಟಿ ಚಿತ್ರಕ್ಕೆ 85 ದಿನಗಳ ಶೂಟಿಂಗ್ ಮಾಡಿದ್ದೇವೆ. ಚಿತ್ರವನ್ನು ಜೂನ್ 14ರಂದು ರಿಲೀಸ್ ಮಾಡಲು ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದೇವೆ. ನಮ್ಮ ಚಿತ್ರದ ಟೈಟಲ್ ಸಾಮಾನ್ಯರಿಗೂ ಅರ್ಥವಾಗುವ ಜೊತೆಗೆ ಕಥೆಯ ಸಾರವನ್ನೂ ಸಹ ಹೇಳಬೇಕು ಅಂತ ತುಂಬಾ ಯೋಚಿಸಿ ಈ ಟೈಟಲ್ ಇಟ್ಟಿದ್ದೇವೆ. ಇಲ್ಲಿ ನಾಯಕನ ಹೆಸರೇ ಕೋಟಿ ಎಂದು ವಿವರಿಸಿದರು.

ನಂತರ ನಾಯಕ ಡಾಲಿ ಧನಂಜಯ್ ಮಾತನಾಡಿ, ಪರಮ್ ನನಗೆ ಬಡವ ರ‍್ಯಾಸ್ಕಲ್ ನಿರ್ಮಾಣದ ಸಮಯದಲ್ಲಿ ಸಹಾಯ ಮಾಡಿದ್ದರು. ಕೋಟಿ ಒಬ್ಬ ಕಾಮನ್‌ಮ್ಯಾನ್. ನಮ್ಮೆಲ್ಲರೊಳಗೂ ಕೋಟಿಯಂಥ ಒಬ್ಬ ವ್ಯಕ್ತಿ ಇರ್ತಾನೆ. ಈ ಪಾತ್ರ, ನನ್ನೊಳಗಿನ ಕೋಟಿಯನ್ನು ನನಗೆ ಪರಿಚಯಿಸಿದೆ ಎಂದರು. ಜೀ ಸ್ಟುಡಿಯೋಸ್ ಹಾಗೂ ಜ್ಯೋತಿ ದೇಶಪಾಂಡೆ ಅವರ ನಿರ್ಮಾಣದ ಈ ಚಿತ್ರಕ್ಕೆ ನಿರ್ದೇಶಕ ಪ್ರಕಾಶ್‌ವೀರ್ ಕೂಡ ಕೈಜೋಡಿಸಿದ್ದಾರೆ.

ಚಿತ್ರದಲ್ಲಿ ಧನಂಜಯ್ ಜೊತೆ ನಾಯಕಿಯಾಗಿ ಮೋಕ್ಷಾ ಕುಶಾಲ್ ನಟಿಸಿದ್ದಾರೆ. ಡ್ರಾಮಾ, ಥ್ರಿಲ್ಲರ್ ಕಥಾಹಂದರ ಹೊಂದಿರುವ ಕೋಟಿ ಚಿತ್ರದಲ್ಲಿ 5 ಹಾಡುಗಳಿದ್ದು, ಯೋಗರಾಜ ಭಟ್ಟರ ಸಾಹಿತ್ಯ, ವಾಸುಕಿ ವೈಭವ್ ಅವರ ಸಂಗೀತ ನಿರ್ದೇಶನ, ನೊಬಿನ್‌ಪೌಲ್ ಅವರ ಹಿನ್ನೆಲೆ ಸಂಗೀತವಿದೆ. ಕಿರುತೆರೆಯ ಪಯಣದಲ್ಲಿ ಪರಮ್‌ಗೆ ಜೊತೆಯಾಗಿದ್ದ ಅರುಣ್ ಬ್ರಹ್ಮನ್ ಅವರು ಕೋಟಿ ಸಿನಿಮಾದ ಸಿನಿಮಾಟೋಗ್ರಾಫರ್ ಆಗಿ ಕೆಲಸ ಮಾಡಿದ್ದಾರೆ. ರಂಗಾಯಣ ರಘು, ತಾರಾ, ಪೃಥ್ವಿ ಶಾಮನೂರು, ಸರದಾರ್ ಸತ್ಯ ಮತ್ತು ತನುಜಾ ವೆಂಕಟೇಶ್ ಕೋಟಿ ಚಿತ್ರದ ಮುಖ್ಯ ಪಾತ್ರಗಳಲ್ಲಿದ್ದಾರೆ.




## ಅಯೋಧ್ಯೆ ಬಾಲರಾಮನ ಸನ್ನಿಧಿಯಲ್ಲಿ ಕನ್ಯಾದಾನ



ಅಯೋಧ್ಯೆಯಲ್ಲಿ ಬಾಲರಾಮನ ಪ್ರತಿಷ್ಠಾಪನೆ ಆದ ನಂತರ ಇಡೀ ದೇಶದ ಚಿತ್ತ ಅಯೋಧ್ಯೆಯತ್ತ ನೆಟ್ಟಿದೆ. ಐದು ದಶಕಗಳ ಹೋರಾಟಕ್ಕೆ ಸಂದ ಜಯ ಅದಾಗಿದೆ. ಈ ಸಂದರ್ಭದಲ್ಲಿ ಮೊದಲ ಬಾರಿಗೆ ಅದೇ ಜಾಗಕ್ಕೆ ಹೋಗಿ ಚಿತ್ರೀಕರಣ ಮಾಡಿಕೊಂಡು ಬಂದ ಹಿರಿಮೆ ಉದಯ ವಾಹಿನಿಯ ಕನ್ಯಾದಾನ ತಂಡಕ್ಕೆ ಸಲ್ಲುತ್ತದೆ, ಹಾಗೆ ನೋಡಿದರೆ ಬೆಳ್ಳಿತೆರೆಯಲ್ಲೂ ಸಹ ಅಂಥಾ ಪ್ರಯತ್ನಕ್ಕೆ ಯಾರೂ ಕೈಹಾಕಿಲ್ಲ ಎಂದೇ ಹೇಳಬಹುದು. ಐವರು ಹೆಣ್ಣುಮಕ್ಕಳ ಜೀವನ ನೆಮ್ಮದಿಯಾಗಿರಬೇಕೆಂದು ಪರಿತಪಿಸುವ ತಂದೆಯ ಭಾವನಾತ್ಮಕ ಹೋರಾಟದ ಕಥೆಯನ್ನು ಕನ್ಯಾದಾನ ಒಳಗೊಂಡಿದೆ.

ಈಗಾಗಲೇ 800 ಸಂಚಿಕೆಗಳನ್ನು ಪೂರೈಸುವ ಹಂತದಲ್ಲಿರುವ "ಕನ್ಯಾದಾನ" ಮಹಿಳೆಯರ ದೈನಂದಿನ ಜೀವನಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಕನ್ಯಾದಾನ ಧಾರಾವಾಹಿಯಲ್ಲಿ ಹಿರಿಯ ನಟಿ ಸುಧಾರಾಣಿಯವರು ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡು ಮೆರುಗು ನೀಡಿದ್ದರು. ಅದೇ ರೀತಿ ಇತ್ತೀಚಿನ ಸಂಚಿಕೆಗಳಲ್ಲಿ ಗಾಳಿಪಟ ಹಾರಿಸಿ ಮಿಂಚಿದ್ದ ನಟಿ ನೀತು ಸಹ ಮುಖ್ಯ ಪಾತ್ರವೊಂದರಲ್ಲಿ ಮಿಂಚಿದ್ದರು. ಈಗ ಶ್ರೀ ರಾಮನವಮಿಯ ಪ್ರಯುಕ್ತ ವಿಶೇಷ ಸಂಚಿಕೆಗಳು ಪ್ರಸಾರವಾಗುತ್ತಿದ್ದು, ಕಳೆದ 15ರಿಂದ ಅಯೋಧ್ಯೆಯ ಎಪಿಸೋಡ್ ಪ್ರಸಾರವಾಗುತ್ತಿದೆ.


ಕನ್ನಡ ಕಿರುತೆರೆ ಇತಿಹಾಸದಲ್ಲೇ ಮೊಟ್ಟ ಮೊದಲ ಬಾರಿಗೆ ಅಯೋಧ್ಯೆಯಲ್ಲಿ ಚಿತ್ರೀಕರಣ ಮಾಡಿರುವ ಹೆಗ್ಗಳಿಕೆ ಕನ್ಯಾದಾನ ತಂಡಕ್ಕೆ ಸಂದಿದೆ. ಇತ್ತೀಚೆಗಷ್ಟೇ ಅಯೋಧ್ಯೆಯ ರಾಮಮಂದಿರಕ್ಕೆ ತೆರಳಿದ ಕನ್ಯಾದಾನ ತಂಡ ಕಥೆಯ ಪ್ರಮುಖ ದೃಶ್ಯಾವಳಿಗಳನ್ನು ಬಾಲರಾಮನ ಸನ್ನಿಧಿಯಲ್ಲಿ ಸೆರೆಹಿಡಿದುಕೊಂಡು ಬಂದಿದೆ. ಶ್ರೀರಾಮಚಂದ್ರನ ಸನ್ನಿಧಿಯಲ್ಲಿ ಧಾರಾವಾಹಿಯ ಪ್ರಮುಖ ಪಾತ್ರಗಳು ಪ್ರೇಮವೆಂಬ ಜೀವನ್ಮುಖಿಯತ್ತ ತಮ್ಮನ್ನು ತಾವು ಹೇಗೆ ಕಂಡುಕೊಳ್ಳುತ್ತವೆ ಎಂಬುದು ಈ ಎಪಿಸೋಡ್‌ನ ವಿಶೇಷ. ಅಶ್ವತ್ಥನ ಹೆಣ್ಣುಮಕ್ಕಳ ಸಂಸಾರಗಳು ಶ್ರೀ ರಾಮನವಮಿಯ ವಿಶೇಷ ಸಂದರ್ಭದಲ್ಲಿ ಎದುರಾಗುವ ಅಗ್ನಿಪರೀಕ್ಷೆಗಳನ್ನು ಶ್ರೀರಾಮನ ಕೃಪೆಯಿಂದ ಹೇಗೆ ಮೆಟ್ಟಿ ನಿಲ್ಲುತ್ತವೆ ಎಂಬುದನ್ನು ಈ ಭಾಗದಲ್ಲಿ ಹೇಳಲಾಗುತ್ತಿದೆ. ಅಯೋಧ್ಯೆಯ ಬಾಲರಾಮನ ದರ್ಶನದಿಂದ ಕಾರ್ತಿಕ್ ದಾಂಪತ್ಯದಲ್ಲಿ ಉಂಟಾಗುವ ಸಕಾರಾತ್ಮಕ ಬದಲಾವಣೆಗಳು ಹಾಗೂ ಆತನ ತಂಗಿಯ ಬಾಳಲ್ಲಿರುವ ಗೊಂದಲಗಳಿಗೆ ಅಂತಿಮವಾಗಿ ತೆರೆ ಬೀಳುವ ಸನ್ನಿವೇಶಗಳು ಎದುರಾಗುತ್ತವೆ.

## ತೆರೆ ಮೇಲೆ ಸಮರ್ಥ ಸದ್ಗುರು ಸಂಗಮೇಶ್ವರ ಮಹಾರಾಜರ ಚರಿತೆ

ಜಮಖಂಡಿ ತಾಲೂಕಿನ ಹಿಪ್ಪರಗಿಯ ಇಂಚಗೇರಿ ಮಠದ ಸಂಗಮೇಶ್ವರ ಮಹಾರಾಜರ ಜೀವನ ಚರಿತ್ರೆ ಆಧರಿಸಿ ರಾಜಾ ರವಿಶಂಕರ್ ಅವರು 'ಸಮರ್ಥ ಸದ್ಗುರು ಶ್ರೀಸಂಗಮೇಶ್ವರ ಮಹಾರಾಜರು' ಎಂಬ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಈ ಚಿತ್ರದ ಮುಹೂರ್ತ ಸಮಾರಂಭ ಇತ್ತೀಚಿಗೆ ವಿದ್ಯಾಪೀಠದ ಶ್ರೀಕೃಷ್ಣನ ಸನ್ನಿಧಿಯಲ್ಲಿ ನೆರವೇರಿತು. ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರು ಮುಹೂರ್ತ ದೃಶ್ಯಕ್ಕೆ ಚಾಲನೆ ನೀಡಿದರು.



ಸಂಗಮೇಶ್ವರ ಮಹಾರಾಜರ ಸಾಧನೆಯ ಕಥೆಯನ್ನು ಸಿನಿಮಾ ಮಾಡಿ ಎಂದು ಎರಡು ವರ್ಷಗಳ ಹಿಂದೆಯೇ ಮಾಧವಾನಂದ ಅವರಿಗೆ ತಿಳಿಸಿದ್ದೆ. ಅದೀಗ ಕಾರ್ಯರೂಪಕ್ಕೆ ಬಂದಿದೆ. ರಾಜ್ಯದೆಲ್ಲೆಡೆ ಇಂಚಗೇರಿ ಸಂಪ್ರದಾಯಕ್ಕೆ ಅದರದೇ ಆದ ಮಹತ್ವವಿದೆ. ಅದನ್ನು ಸಂಗಮೇಶ್ವರ ಮಹಾರಾಜರು ಪಾಲಿಸಿಕೊಂಡು ಬರುತ್ತಿದ್ದರು. ಕಲಿಯುಗದ ಕಲ್ಪತರು ಎಂದೇ ಸಂಗಮೇಶ್ವರರು ಗುರುತಿಸಿಕೊಂಡಿದ್ದಾರೆ ಎಂದು ಕಾರ್ಯಕ್ರಮ ಉದ್ಘಾಟಿಸಿದ ಪ್ರಭುಜೀ ಮಹಾರಾಜರು ಆಶೀರ್ವಚನ ನೀಡಿದರು.




ನಂತರ ಮಾತನಾಡಿದ ಗಿರೀಶ್ ಕಾಸರವಳ್ಳಿ, ಈ ಚಿತ್ರದ ನಿರ್ಮಾಪಕ ಹಾಗೂ ನಿರ್ದೇಶಕ ಇಬ್ಬರೂ ನಾನು ತಾಯಿ ಸಾಹೇಬ ಚಿತ್ರ ಮಾಡಿದಾಗ ಸಹಾಯ ಮಾಡಿದ್ದರು. ಸಂಗಮೇಶ್ವರ ಮಹಾರಾಜರ ಚರಿತ್ರೆ ಕೇಳಿದಾಗ ಆಶ್ಚರ್ಯವಾಯಿತು. ತೆರೆಮೇಲೆ ಅವರನ್ನು ಪವಾಡ ಪುರುಷರಂತೆ ತೋರಿಸದೆ, ಒಬ್ಬ ಮಹಾನ್ ಸಾಧಕರ ರೀತಿ ತೋರಿಸಿ ಎಂದು ಸಲಹೆ ನೀಡಿರುವುದಾಗಿ ಹೇಳಿದರು.

ನಿರ್ದೇಶಕ ರಾಜಾ ರವಿಶಂಕರ್ ಮಾತನಾಡುತ್ತ, ನಾಲ್ಕು ಹಂತಗಳಲ್ಲಿ ನಮ್ಮ ಚಿತ್ರದ ಚಿತ್ರೀಕರಣವನ್ನು ನಡೆಸುತ್ತಿದ್ದೇವೆ. ಹೊಸಪ್ರತಿಭೆ ರವಿ ನಾರಾಯಣ್ ಅವರು ಸಂಗಮೇಶ್ವರ ಮಹಾರಾಜರ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಹಿರಿಯ ನಟರಾದ ರಾಮಕೃಷ್ಣ, ವಿಜಯಕಾಶಿ, ವಿನಯ ಪ್ರಸಾದ್, ಸಂದೀಪ್ ಮಲಾನಿ, ನಾರಾಯಣ ಸ್ವಾಮಿ ಮುಂತಾದವರು ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ ಎಂದು ಹೇಳಿದರು.

ಚಿತ್ರದ ನಿರ್ಮಾಪಕ ಮಾಧವಾನಂದ ಯೋಗಪ್ಪ ಶೇಗುಣಸಿ ಮಾತನಾಡುತ್ತ ಹಿಂದೆ ನಾನು ಎರಡು ಚಿತ್ರಗಳನ್ನು ನಿರ್ಮಿಸಿದ್ದೆ. ನಮ್ಮ ಸಂಸ್ಥೆಯ ಮೂರನೇ ಚಿತ್ರವಿದು. ಸಂಗಮೇಶ್ವರ ಮಹಾರಾಜರ ಸಾಧನೆಗಳನ್ನು ಜನರಿಗೆ ತಲುಪಿಸುವ ಪ್ರಯತ್ನವೇ ಈ ಚಿತ್ರ ಎಂದು ಹೇಳಿದರು.

ಸಂಗಮೇಶ್ವರರ ಪಾತ್ರಧಾರಿ ರವಿ ನಾರಾಯಣ್ ಮಾತನಾಡುತ್ತ ಈ ಪಾತ್ರಕ್ಕಾಗಿ ಮಾಡಿಕೊಂಡಿರುವ ಸಿದ್ಧತೆಗಳ ಬಗ್ಗೆ ಹಾಗೂ ಶ್ರೀಸಂಗಮೇಶ್ವರರ ಜೀವನದ ಕುರಿತಂತೆ ಒಂದಷ್ಟು ವಿವರಣೆಯನ್ನು ನೀಡಿದರು. ಸಂಗೀತ ನಿರ್ದೇಶಕ ಎ.ಟಿ.ರವೀಶ್ ಹಾಡುಗಳ ಬಗ್ಗೆ ಹೇಳಿಕೊಂಡರು.

## ಸಿನಿಪದಬಂಧ-522



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______



ವಿಜೇತರು: ಆರ್.ಎಸ್.ಪೂರ್ಣಾನಂದ, #803, 26ನೇ ಕ್ರಾಸ್, 4ನೇ ಮೇನ್, ವಿದ್ಯಾರಣ್ಯಪುರಂ, ಮೈಸೂರು-08



ಉಮ್ಮತ್ತೂರು ಇಂದುಶೇಖರ್
ಮೊ.9880820462

### ಸಿನಿ ಪದಬಂಧ 521ರ ಉತ್ತರ

| | | | | | | | | | | |
|---|---|---|---|---|---|---|---|---|---|---|
| ಸ | ತ್ವ | ಪ | ರೀ | ಕ್ಷೆ | | | ಕ | | ಮ | |
| ಹೋ | | ದ್ಮ | | | ಕ | ತಾ | ರಿ | ವೀ | ರ | |
| ದ | | ಪ್ರಿ | | | ಸ್ತೂ | | ಮ | | ಣ | |
| ರ | | ಯ | ಮ | ಪು | ರಿ | | ಲೆ | | | ಸೋ |
| ರ | | | | | | | | ಮೌ | | ಲಿ |
| ಸ | ರ್ಪ | ಕಾ | ವ | ಲು | | ಮಾ | ತಿ | ನ | ಮ | ಲ್ಲ |
| ವಾ | | ಡು | | | | | | | | ದ |
| ಲ್ | | | ಕು | | ಚ | ಕ್ರ | ವ್ಯೂ | ಹ | | ಸ |
| | ರ | | ರಿ | | ಕ್ಯೋ | | | ಣ | | ರ |
| | ಜ | ನು | ಮ | ದಾ | ತ | | | ಜ | | ದಾ |
| | ನಿ | | ರಿ | | | ಗಾಂ | ಧಿ | ನ | ಗ | ರ |

### ಎಡದಿಂದ ಬಲಕ್ಕೆ

1. ಅಂಬಿ ಅಭಿನಯದಿ ಋತುವೊಂದು ಮರಳಿ ಆಗಮಿಸಿದೆ 5
5. ಗುರುತಿಸಿಕೊಳ್ಳದ ಶ್ರೀನಾಥ್ ಬದುಕು ಯಾರಿಗೂ ತಿಳಿಯದು 5
6. ಭೂಲೋಕದಲ್ಲಿ ಕಾಣಿಸಿಕೊಂಡ ನರಕಾಧಿಪತಿ 4
9. ಕುಹೂ ಕುಹೂ ಪಕ್ಷಿಯ ನುಡಿಗೆ ಎಸ್.ಎ. ನಟರಾಜನ್ ನಿರ್ದೇಶನವಿದೆ 5
11. ಜೋಸೈಮನ್ ಕ್ಷೀರ ಕ್ಷಿದ್ರಗೊಂಡಿದೆ 5
13. ಬ್ರಹ್ಮ, ವಿಷ್ಣುವಿನ ಜೊತೆ ಬಂದವನು 4
16. ಸೂರ್ಯವರ್ಧನ್ ಅಭಿನಯದ ಶ್ರೀಗಂಧ 5
17. ಪರಶುರಾಮ್ ಚಿತ್ರದ ತಂದಾನ ತಂದಾನ ಹಾಡಿನಲ್ಲಿ ಒಂದು ಬಗೆಯ ಫ್ರೂಟ್ ಇದೆ 5

### ಮೇಲಿನಿಂದ ಕೆಳಕ್ಕೆ

1. ನವ ವಸಂತದ ಗಾಳಿ ಬೀಸಲು ಮೌನದಿಂದಲೇ ಮಧುರ ಗೀತೆಯಾಡಿದ ಪಕ್ಷಿ 8
2. ಬೆಲೆಬಾಳುವ ಕಠಿಣ ವಸ್ತುವಿನ ಶರೀರದಲ್ಲಿ ಭಜರಂಗಿ ಇದ್ದಾನೆ 4
3. ಸುರೇಶ್ ಹೇಬ್ಳಿಕರ್ ಅಭಿನಯದ ಒಳ ಮನಸ್ಸು 4
4. ಭಲೇ ಎನಿಸಿಕೊಂಡ ಪ್ರಾಣಿ 3
5. ನವರಸ ನಾಯಕ ದರ್ಶನ್ ಗೆ ಹಿರಿಯ ಸಹೋದರ 3
7. ಬಲಗಾಲಿಟ್ಟು ಒಳಗೆ ಬಾ ಎನ್ನುವ ಸಮೀಪದಲ್ಲೇ ವಿಷ್ಣು – ಆರತಿ ಚಿತ್ರವಿದೆ 8
8. ಮಾನಸಿಯ ಜೊತೆ ಬಂದವನು 2
10. ಆದಿತ್ಯ – ರಕ್ಷಿತಾಳ ಆಂಗ್ಲ ಪ್ರೀತಿ 2
12. "_ _ _ _ ಆಕಾಶಕೆ ಗಾಳಿ ನೀರು ಈ ಭೂಮಿಗೆ...", 4
13. ಮನ್ಮಥನಿಗೆ ಹೀಗೊಂದು ಹೆಸರು 3
14. ಸೈನೆಡ್ ಚಿತ್ರದ ಶಿವರಸನ್ 4
15. ಸುಧಾರಾಣಿಯ ಗಾಜಿನ ಬಳೆಯ ಬಣ್ಣ 3

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

## ಕನ್ನಡಕ್ಕೆ ಹಲವು ಪ್ರಥಮಗಳನ್ನು ನೀಡಿದವರು ದ್ವಾರಕೀಶ್



ಕರ್ನಾಟಕದ ಕುಳ್ಳ ಎಂದೇ ಕನ್ನಡಿಗರ ಜನಮನದಲ್ಲಿ ಬೆರೆತುಹೋಗಿದ್ದ ನಟ, ನಿರ್ಮಾಪಕ ದ್ವಾರಕೀಶ್ ಈಗ ನಮ್ಮೊಂದಿಗಿಲ್ಲ ಆದರೆ ಅವರು ಕನ್ನಡ ಚಿತ್ರರಂಗಕ್ಕೆ ನೀಡಿದ ಕೊಡುಗೆಗಳು ಅಪಾರ. ಅವರು ಯಾವಾಗಲೂ ದೊಡ್ಡ ಕನಸುಗಳನ್ನೇ ಕಾಣುತ್ತಿದ್ದರು. ಇದೆಲ್ಲಾ ನಮ್ಮಿಂದ ಆಗುತ್ತಾ ಎಂದವರೆದುರು, ಅದನ್ನು ಸಾಧಿಸಿ ತೋರಿಸುವ ಛಲ ಅವರಲ್ಲಿತ್ತು, ಅದೇ ಕಾರಣದಿಂದ ಕನ್ನಡ ಚಿತ್ರರಂಗಕ್ಕೆ ಹಲವಾರು ಪ್ರಥಮಗಳನ್ನು ತಂದು ಕೊಟ್ಟರು. ವಿದೇಶಗಳಲ್ಲಿ ಕನ್ನಡ ಚಿತ್ರವನ್ನು ಚಿತ್ರೀಕರಿಸುವ ಕನಸು ಕಂಡ ಅವರು ಮೊದಲಬಾರಿಗೆ ಸಿಂಗಾಪೂರ್‌ನಲ್ಲಿ ರಾಜಾಕುಳ್ಳ ಚಿತ್ರವನ್ನು ಸಿಂಗಾಪೂರ್‌ನಲ್ಲಿ ಶೂಟ್ ಮಾಡಿಕೊಂಡು ಬಂದರು. ನಂತರ ಆಫ್ರಿಕಾದಲ್ಲಿ ಶೀಲಾ ಚಿತ್ರವನ್ನು ಪೂರ್ತಿ ಆಫ್ರಿಕಾದಲ್ಲೇ ಚಿತ್ರೀಕರಿಸಿದರು. ಈ ಚಿತ್ರದ ಮೂಲಕ ಬಾಲಿವುಡ್‌ನ ಬಪ್ಪಿಲಹರಿ ಅವರನ್ನು ಕನ್ನಡಕ್ಕೆ ಕರೆತಂದರು. ಕಿಶೋರ್ ಕುಮಾರ್‌ರಂಥ ದಿಗ್ಗಜ ಗಾಯಕರ ಕೈಲಿ ಹಾಡಿಸಿದ್ದೂ ಇದೇ ದ್ವಾರಕೀಶ್. ಸೋತಾಗ ಕುಗ್ಗದೇ, ಗೆದ್ದಾಗ ಹಿಗ್ಗದೇ ಇದ್ದ ಅವರು ಚಿತ್ರರಂಗಕ್ಕೆ ತನ್ನದೇ ಆದಂಥ ಅಪೂರ್ವ ಕೊಡುಗೆಗಳನ್ನು ನೀಡಿ ಹೋಗಿದ್ದಾರೆ.

### ದಲಿತರ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ನೀಡಿದ

# ಸಚಿವ ಹೆಚ್‌ಸಿಎಂಗೆ ಸಂವಿಧಾನ ಪೀಠಿಕೆ ಓದುವ ನೈತಿಕತೆ ಇಲ್ಲ

## ಚಾಮರಾಜನಗರ ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಸ್.ಬಾಲರಾಜ್ ವಾಗ್ದಾಳಿ



ಕಾರ್ಯಕರ್ತರ ಸಭೆಯಲ್ಲಿ ಎಸ್.ಬಾಲರಾಜು ಮಾತನಾಡಿದರು.

ತಿ.ನರಸೀಪುರ, ಏ.18– ದಲಿತರ ಕಲ್ಯಾಣಕ್ಕೆ ಮೀಸಲಿಟ್ಟ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ನೀಡಿದ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಅಂಬೇಡ್ಕರ್ ಅವರ ಸಂವಿಧಾನ ಪೀಠಿಕೆ ಓದಲು ಯಾವುದೇ ನೈತಿಕ ಹಕ್ಕಿಲ್ಲ ಎಂದು ಚಾಮರಾಜನಗರ ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಸ್. ಬಾಲರಾಜ್ ವಾಗ್ದಾಳಿ ನಡೆಸಿದರು.

ತಾಲೂಕಿನ ತಲಕಾಡಿನ ಶಿವ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಬಿಜೆಪಿ-ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ದಲಿತರಿಗೆ ಮೀಸಲಿಟ್ಟ ಅನುದಾನವನ್ನು ಗ್ಯಾರಂಟಿ ಯೋಜನೆಗೆ ನೀಡಿದ್ದನ್ನು ಪ್ರಸ್ತಾಪಿಸಿ ಮಹದೇವಪ್ಪನವರ ಮೇಲೆ ತೀವ್ರ ವಾಗ್ದಾಳಿ ನಡೆಸಿದಲ್ಲದೇ, ನಿಮಗೆ ನಾಚಿಕೆ, ಮಾನ, ಮರ್ಯಾದೆ ಇಲ್ಲವೇ ಎಂದು ಕಿಡಿಕಾರಿದರು.

ಎಸ್‌ಸಿ/ಎಸ್‌ಟಿ ಸಮುದಾಯ ಮೇಲೆತ್ತ ಬೇಕೆಂದರೆ ನೀವು ಅವರಿಗೆ ಜಮೀನು ಕೊಡಿಸಿ, ಉದ್ದಿಮೆಗಳನ್ನು ಪ್ರಾರಂಭಿಸಿ. ಅದನ್ನು ಬಿಟ್ಟು ಅವರ ಜೀವನ ಸುಧಾರಣೆಗೆ ಮೀಸಲಿಟ್ಟ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿದ್ದೀರಲ್ಲ. ನಿಮಗೆ ಏನನ್ನಬೇಕು. ಅಂಬೇಡ್ಕರ್ ದಲಿತರಿಗೆ ಮೀಸಲಿಟ್ಟ ಹಣವನ್ನು ಬೇರೆ ಯೋಜನೆಗಳಿಗೆ ಕೊಡಿ ಎಂದು ಹೇಳಿದ್ದಾರಾ? ಗ್ಯಾರಂಟಿ ಯೋಜನೆಗಳಿಗೆ ನೀಡಲು ಮೀಸಲಾತಿ ಏನಾದರೂ ಇತ್ತಾ, ಗ್ಯಾರಂಟಿ ಕೊಡುವಾಗ ರಿಸರ್ವೇಷನ್ ಮಾಡಿದ್ದೀರಾ, ಹಿಂದುಳಿದ ವರ್ಗದವರ ಮೀಸಲಾತಿ ಯೋಜನೆಯಡಿ ನೀಡಿರುವ ಹಣವನ್ನು ಎಸ್‌ಸಿ, ಎಸ್ಟಿ ವರ್ಗದವರನ್ನು ಮೇಲೆತ್ತಲು ಬಳಕೆ ಮಾಡಿ ಎಂದು ಗ್ಯಾರಂಟಿ ಯೋಜನೆಗಳಿಗೆ ಉಪಯೋಗಿಸಿದರೆ ಹೇಗೆ, ಹಾಗಾಗಿ ಅನುದಾನವನ್ನು ದುರ್ಬಳಕೆ ಮಾಡಿಕೊಂಡ ನಿಮಗೆ ಅಂಬೇಡ್ಕರ್ ಸಂವಿಧಾನ ಪೀಠಿಕೆ ಓದಲು ಯಾವ ನೈತಿಕತೆ ಇದೆ ಎಂದು ಪ್ರಶ್ನಿಸಿದ ಅವರು, ನಿಮಗೆ ಒಳ್ಳೆಯದನ್ನು ಮಾಡಲು ಅವಕಾಶ ಇಲ್ಲದಿದ್ದರೆ ಕೆಟ್ಟದ್ದನ್ನು ಮಾಡಬೇಡಿ. ಇತ್ತೀಚೆಗೆ ಮತ್ತೆ ಹಿಂದುಳಿದ ವರ್ಗಕ್ಕೆ ನೀಡಿದ 25 ಸಾವಿರ ಕೋಟಿ ಅನುದಾನವನ್ನು ಮತ್ತದೇ ಗ್ಯಾರಂಟಿಗೆ ಬಳಕೆ ಮಾಡಿಕೊಂಡಿದ್ದೀರಿ. ಹಾಗಾಗಿ ಸಮಾಜಕ್ಕೆ ಯೋಗ್ಯವಾದ ಕೆಲಸ ಮಾಡಲು ನೀವು ಅರ್ಹರಲ್ಲ ಎಂದು ಗುಡುಗಿದರು.

**ಮೈತ್ರಿಯಿಂದ ಕಾಂಗ್ರೆಸ್‌ಗೆ ನಡುಕ:** ಬಿಜೆಪಿ-ಜೆಡಿಎಸ್ ಮೈತ್ರಿಯಾಗಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ನಡುಕ ಉಂಟಾಗಿದೆ. ಹಾಗಾಗಿ ಅಭ್ಯರ್ಥಿಗೆ ಕೆಟ್ಟ ಹೆಸರು ತರಲು ಏನು ಮಾಡಬೇಕೋ ಅದನ್ನೆಲ್ಲಾ ಮಾಡಲು ಸಂಚು ರೂಪಿಸುತ್ತಿದ್ದಾರೆ. ಯಾವುದೇ ಹುಳುಕು ಇಲ್ಲದ್ದನ್ನು ಅರಿತ ಅವರು ಕೊನೆಯದಾಗಿ ಮತದಾರರನ್ನು ದುಡ್ಡಿನಿಂದ ಕೊಂಡುಕೊಳ್ಳುವ ಹಾಗೂ ಅಭ್ಯರ್ಥಿ ಮೇಲೆ ಅಪಪ್ರಚಾರ ಮಾಡಿ ಜನ ಸಮುದಾಯದಲ್ಲಿ ಕೆಟ್ಟದಾಗಿ ಬಿಂಬಿಸುವ ಕೆಲಸದಲ್ಲಿ ನಿರತರಾಗಿದ್ದಾರೆ. ಸುಳ್ಳು ಸುದ್ದಿಗಳನ್ನು ಹಬ್ಬಿಸಿ ಮತ ಒಡೆಯುವ ಕಾಂಗ್ರೆಸ್‌ನವರ ತಂತ್ರ ಈ ಭಾಗದ ಮತದಾರರಿಗೆ ಅರ್ಥವಾಗಿದ್ದು, ನಿಮ್ಮನ್ನು ಯಾಮಾರಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದರು.

ಜಿಪಂ ಮಾಜಿ ಸದಸ್ಯ ಕೆ.ಸಿ.ಲೋಕೇಶ್ ನಾಯಕ್ ಮಾತನಾಡಿ, ಎಲ್ಲಾ ಅಧಿಕಾರವನ್ನು ಒಂದೇ ಕುಟುಂಬಕ್ಕೆ ನೀಡಿ ಅವರ ಮನೆ ಮುಂದೆ ಕಾಯುವ ಪರಿಸ್ಥಿತಿಯನ್ನು ತಂದುಕೊಳ್ಳುವುದು ಬೇಡ. ಬಾಲರಾಜು ಸರಳ, ಸಜ್ಜನಿಕೆ ಇರುವ ವ್ಯಕ್ತಿಯಾಗಿದ್ದಾರೆ. ಅಭಿವೃದ್ಧಿ ಕುರಿತ ಹೊಂದಿರುವ ಅವರನ್ನು ಬೆಂಬಲಿಸುವ ಮೂಲಕ ಮೋದಿ ಅವರ ಕೈ ಬಲಪಡಿಸಲು ನಾವೆಲ್ಲಾ ಮುಂದಾಗೋಣ ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಸಿ.ರಮೇಶ್, ಬಿಜೆಪಿ ಮುಖಂಡ ಡಾ.ರೇವಣ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್, ಜೆಡಿಎಸ್ ಕ್ಷೇತ್ರಾಧ್ಯಕ್ಷ ಚಿನ್ನಸ್ವಾಮಿ, ಬಿಜೆಪಿ ಮಂಡಲ ಅಧ್ಯಕ್ಷ ಶಿವಕುಮಾರ್, ಮೈಸೂರು ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಹೆಳವರ ಹುಂಡಿ ಸಿದ್ದಪ್ಪ, ಗೂಳಿ ಮಹೇಶ್, ಮೈಸೂರು ಜಿಲ್ಲಾ ಗ್ರಾಮಾಂತರ ಯುವ ಮೋರ್ಚಾ ಅಧ್ಯಕ್ಷ ಸಾಮ್ರಾಟ್ ಸುಂದರೇಶನ್, ಎಸ್ಸಿ ಮೋರ್ಚಾ ಅಧ್ಯಕ್ಷ ಅನಿಲ್ ಕುಮಾರ್, ಕರೋಹಟ್ಟಿ ಮಹದೇವಯ್ಯ, ಮಾಜಿ ಗ್ರಾಪಂ ಅಧ್ಯಕ್ಷ ಶಂಭುದೇವನಪುರ ರಮೇಶ್, ಕಾಡಿ ಮಹದೇವ್, ಹೆಮ್ಮಿಗೆ ಹೊನ್ನಯ್ಯ, ಮರಡೀಪುರ ನಾಗರಾಜು, ಸಿ.ಬಿ.ಹುಂಡಿ ಸಿದ್ದು ಸೇರಿದಂತೆ ಮತ್ತಿತರರಿದ್ದರು.

ಮೂರನೇ ಬಾರಿಗೆ ಮೋದಿ ಅವರನ್ನು ಪ್ರಧಾನಿ ಮಾಡಲು ಸ್ವತಃ ಮಾಜಿ ಪ್ರಧಾನಿ ದೇವೇಗೌಡರೇ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದಾರೆ. ಹಾಗಾಗಿ ನಾವೆಲ್ಲರೂ ಮೈತ್ರಿ ಪಾಲನೆ ಮಾಡಿ ಬಾಲರಾಜು ಅವರನ್ನು ಅತ್ಯಂತ ಬಹುಮತದಿಂದ ಗೆಲ್ಲಿಸಬೇಕಿದೆ. ವಾತಾವರಣ ನೋಡಿದರೆ ನನಗೆ ವಿಧಾನಸಭಾ ಚುನಾವಣೆಯಲ್ಲಿ ಸಿಕ್ಕ ದುಪ್ಪಟ್ಟು ಬೆಂಬಲ ಬಾಲರಾಜುಗೆ ವ್ಯಕ್ತವಾಗಿದ್ದು, ಅವರು ಚುನಾವಣೆಯಲ್ಲಿ ಗೆಲುವು ಸಾಧಿಸಲಿದ್ದಾರೆ.

-ಎಂ.ಅಶ್ವಿನ್ ಕುಮಾರ್, ಮಾಜಿ ಶಾಸಕ.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಮಗಧೀರ (ತೆ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಯುವ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಸೂರ್ಯ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ರತ್ನ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಯುವ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ) | 4 ಪ್ರದರ್ಶನಗಳು |
| **ಸಂಗಂ** | |
| ಅವತಾರ ಪುರುಷ 2 (ಕ) | 4 ಪ್ರದರ್ಶನಗಳು |
| **ಲಿಡೋ** | |
| ಚಿರತೆ ಬಂತು ಚಿರತೆ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ) | 4 ಪ್ರದರ್ಶನಗಳು |
| **ಪ್ರಭಾ** | |
| ರತ್ನ (ಕ) | 2 ಪ್ರದರ್ಶನಗಳು |
| ಲವ್ ಯೂ ಶಂಕರ (ಕ) | 2 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ಕುಂಗ್ ಫೂ ಪಾಂಡ 4 (3ಡಿ) (ಇಂ): ಬೆ.11.40ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.45ಕ್ಕೆ, ದಾಸವರೇಣ್ಯ ಶ್ರೀ ವಿಜಯದಾಸರು (ಕ): ಸಂ.4.10ಕ್ಕೆ, ಆವೇಶಂ (ಮ): ರಾ.7ಕ್ಕೆ, ರಾ.10.05ಕ್ಕೆ. |
| ಸ್ಕ್ರೀನ್ 2 | ಜೈ ಗಣೇಶ (ಮ): ಬೆ.10.50ಕ್ಕೆ, ರಾ.10.10ಕ್ಕೆ, O2 (ಕ): ಮ.1.20ಕ್ಕೆ, ಮೈದಾನ್ (ಹಿಂ): ಮ.3.35ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ರಾ.7ಕ್ಕೆ. |
| ಸ್ಕ್ರೀನ್ 3 | ಅವತಾರ ಪುರುಷ 2 (ಕ): ಬೆ.10.45ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಮ.1.10ಕ್ಕೆ, ಯುವ (ಕ): ಸಂ.4.15ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ. |
| ಸ್ಕ್ರೀನ್ 4 | ದೋ ಔರ್ ದೋ ಪ್ಯಾರ್ (ಹಿಂ): ಬೆ.10.55ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ರಾ.9.55ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.1.45ಕ್ಕೆ. |

### ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.25ಕ್ಕೆ, ರಾ.10ಕ್ಕೆ, ಯುವ (ಕ): ಮ.1ಕ್ಕೆ, ಸಂ.4.15ಕ್ಕೆ, O2 (ಕ): ರಾ.7.30ಕ್ಕೆ. |
| ಸ್ಕ್ರೀನ್ 2 | ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.45ಕ್ಕೆ, ಸಂ.5.55ಕ್ಕೆ, ಮೈದಾನ್ (ಹಿಂ): ಮ.2.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.9.20ಕ್ಕೆ. |
| ಸ್ಕ್ರೀನ್ 3 | ಯುವ (ಕ): ಬೆ.10.10ಕ್ಕೆ, O2 (ಕ): ಮ.1.25ಕ್ಕೆ, ಪಾರಿಜಾತ ಪರ್ವಂ (ತೆ): ಮ.3.55ಕ್ಕೆ, ಆವೇಶಂ (ಮ): ಸಂ.6.50ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ರಾ.10.10ಕ್ಕೆ. |
| ಸ್ಕ್ರೀನ್ 4 | ಮೈದಾನ್ (ಹಿಂ): ಬೆ.11.25ಕ್ಕೆ, ರಾ.9.50ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ಮ.3.10ಕ್ಕೆ, ಯುವ (ಕ): ಸಂ.6.35ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ. |
| ಸ್ಕ್ರೀನ್ 2 | ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ. |
| ಸ್ಕ್ರೀನ್ 3 | ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ. |
| ಸ್ಕ್ರೀನ್ 4 | ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ. |

### ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

### ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

**ಸೂಚನೆ :** ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

## ವಿವಿಧೆಡೆ ಬೋಸ್ ಪರ ಶಾಸಕ ದರ್ಶನ್ ಮತಯಾಚನೆ



ನಂಜನಗೂಡು, ಏ.18– ಶಾಸಕ ದರ್ಶನ್ ಬಿರು ಬಿಸಿಲನ್ನೂ ಲೆಕ್ಕಿಸದೆ ತಾಲೂಕಿನ ಹೊರಳವಾಡಿ, ಬದನವಾಳು, ದೇವನೂರು, ಹೆಡತಲೆ, ಹೆಮ್ಮರಗಾಲ, ನೇರಳೆ ಗ್ರಾಪಂ ವ್ಯಾಪ್ತಿಯಲ್ಲಿ ಲೋಕಸಭಾ ಅಭ್ಯರ್ಥಿ ಸುನೀಲ್ ಬೋಸ್ ಪರ ಮತಯಾಚಿಸಿದರು.

ನಂತರ ಮಾತನಾಡಿದ ಅವರು, ಬೆಲೆ ಏರಿಕೆ ಸಂಕಷ್ಟದಲ್ಲಿದ್ದ ಜನರಿಗೆ ನೆರವು ನೀಡುವ ಉದ್ದೇಶದಿಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ. ಹೀಗಾಗಿ ಕಾಂಗ್ರೆಸ್ ಪಕ್ಷ ಹಾಗೂ ಸಿದ್ದರಾಮಯ್ಯ ಕೈ ಬಲಪಡಿಸುವ ಉದ್ದೇಶದಿಂದ ಅಭ್ಯರ್ಥಿ ಸುನೀಲ್ ಬೋಸ್ ಅವರಿಗೆ ಹೆಚ್ಚಿನ ಮತ ನೀಡಿ ಗೆಲ್ಲಿಸುವ ಮೂಲಕ ಚಾಮರಾಜನಗರ ಲೋಕಸಭಾ ಕ್ಷೇತ್ರವನ್ನು ಮತ್ತೆ ಕಾಂಗ್ರೆಸ್ ಭದ್ರಕೋಟೆಯಾಗಿ ಮಾಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಮುಖಂಡರಾದ ಬುಲೆಟ್ ಮಹದೇವಪ್ಪ, ಇಂಧನ್ ಬಾಬು, ಪ್ರದೀಪ್, ರಾಜು, ಕೆಂಪಣ್ಣ, ಶಿವಬಸಪ್ಪ, ದೊರೆಸ್ವಾಮಿ ನಾಯಕ, ಕೆಂಡಗಣ್ಣಪ್ಪ ಎನ್.ಎಂ.ಮಂಜುನಾಥ್, ರಾಜೇಶ್, ಮುದ್ದುಮಾದಶೆಟ್ಟಿ, ಶಿವಣ್ಣ, ರಾಚಪ್ಪ, ಜಿಪಂ ಮಾಜಿ ಸದಸ್ಯೆ ಲತಾ, ಕೆ.ಬಿ.ಸ್ವಾಮಿ, ಚೋಳರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್ ಸೇರಿದಂತೆ ಹಲವರಿದ್ದರು.

## ಬಾಲರಾಜ್‌ಗೋಸ್ಕರ ಬಿಜೆಪಿಗೆ ಸೇರ್ಪಡೆಗೊಂಡಿದ್ದೇನೆ

### ಮುಖಂಡ ಗುರುಪಾದಸ್ವಾಮಿ





ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ಗುರುಪಾದಸ್ವಾಮಿ ಮಾತನಾಡಿದರು.

ಹೆಚ್.ಡಿ.ಕೋಟೆ, ಏ.18– ರಾಜಕೀಯವನ್ನೇ ತನ್ನ ಉಸಿರಾಗಿಸಿಕೊಂಡಿರುವ ಪ್ರಾಮಾಣಿಕ ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಾಲರಾಜ್ ಅವರಿಗೋಸ್ಕರ ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರ್ಪಡೆಗೊಂಡಿದ್ದೇನೆ ಎಂದು ಮುಖಂಡ ಗುರುಪಾದಸ್ವಾಮಿ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನನಗೆ ಕಾಂಗ್ರೆಸ್ ಉನ್ನತ ಸ್ಥಾನ ನೀಡಿತ್ತು. ಆದರೆ ಈ ಬಾರಿ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ನನ್ನ ಆತ್ಮೀಯ ಸ್ನೇಹಿತರಾದ ಬಾಲರಾಜ್ ಅವರಿಗೆ ಸಾಥ್ ನೀಡುವ ಉದ್ದೇಶದಿಂದ ನಾನು ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರ್ಪಡೆಗೊಂಡಿದ್ದೇನೆ ಎಂದರು.

ನನ್ನ ಹಾಗೂ ಬಾಲರಾಜ್ ಅವರ ಒಡನಾಟ ಬಹಳ ಹಿಂದಿನದು. ಈ ಬಾರಿ ಬಿಜೆಪಿ, ಜೆಡಿಎಸ್ ಮೈತ್ರಿ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮತಗಳ ಅಂತರದಲ್ಲಿ ಬಾಲರಾಜ್ ಅವರನ್ನು ಗೆಲ್ಲಿಸಲು ನಾವೆಲ್ಲರೂ ಶ್ರಮಿಸಬೇಕು ಎಂದು ಮನವಿ ಮಾಡಿದರು.

ಕಳೆದ 10 ವರ್ಷಗಳಲ್ಲಿ ಪ್ರಧಾನಿ ಮೋದಿ ಅವರು ದೇಶದಲ್ಲಿ ಉತ್ತಮ ಆಡಳಿತ ನಡೆಸಿದ್ದು, ದೇಶವನ್ನು ಭವ್ಯ ಭಾರತ ಮಾಡಲು ಮೋದಿ ಅವರನ್ನು ಮತ್ತೆ ಪ್ರಧಾನಿಯನ್ನಾಗಿ ಮಾಡಬೇಕು ಎಂದರು.

ಈ ವೇಳೆ ತಾಲೂಕು ಬಿಜೆಪಿ ಅಧ್ಯಕ್ಷ ಶಂಬೇಗೌಡ, ಜಿಲ್ಲಾ ಗ್ರಾಮಾಂತರ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಟಿ.ವೆಂಕಟೇಶ್, ಜಿಲ್ಲಾ ಗ್ರಾಮಾಂತರ ಕಾರ್ಯದರ್ಶಿ ಎಂ.ಪಿ.ಮಂಜುನಾಥ್, ಗ್ರಾಮಾಂತರ ಉಪಾಧ್ಯಕ್ಷ ಸೋಮಾಚಾರಿ, ಜೆಡಿಎಸ್ ಕಾರ್ಯದರ್ಶಿ ಶಿವು, ಬಿಜೆಪಿ ಮತ್ತು ಜೆಡಿಎಸ್ ಮುಖಂಡರಾದ ಮೊತ್ತ ಬಸವರಾಜಪ್ಪ, ಚಂದ್ರೇಗೌಡ, ಹೆಚ್.ಸಿ.ಶಿವಣ್ಣ, ಹೆಚ್.ಆರ್.ಶ್ರೀನಿವಾಸ್ ರಾಜು, ರಂಗನಾಥ್ ಶಿವಕುಮಾರ್, ಶಿವರಾಜಪ್ಪ, ನಾಗರಾಜಪ್ಪ ಇದ್ದರು.

## ದೇಶದಲ್ಲಿ ಮೋದಿ ಅಲೆ ಇದೆ: ಹರ್ಷವರ್ಧನ್



ಮಲ್ಕುಂಡಿ, ಏ.18– ಇಡೀ ದೇಶದಲ್ಲಿ ಪ್ರಧಾನಿ ಮೋದಿ ಅಲೆ ಇದ್ದು, ಮೋದಿ ಅವರೊಬ್ಬರೇ ಪ್ರಧಾನಿ ಸ್ಥಾನಕ್ಕೆ ಅರ್ಹರಾಗಿದ್ದಾರೆ ಎಂದು ಮಾಜಿ ಶಾಸಕ ಬಿ. ಹರ್ಷವರ್ಧನ್ ತಿಳಿಸಿದರು.

ಇಲ್ಲಿಗೆ ಸಮೀಪದ ಹಲ್ಲರೆ, ಹುರ, ಹಾಡ್ಯ, ಹೆಡಿಯಾಲ ಗ್ರಾಪಂ ವ್ಯಾಪ್ತಿಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜ್ ಪರ ಮತಯಾಚಿಸಿ ಮಾತನಾಡಿದ ಅವರು, ಪ್ರಧಾನಿ ಮೋದಿಯವರ 10 ವರ್ಷಗಳ ಜನಪರ ಆಡಳಿತ ಹಾಗೂ ಯೋಜನೆಗಳನ್ನು ಪ್ರತಿ ಮನೆ ಮನೆಗೂ ತಲುಪಿಸುವ ಕೆಲಸವನ್ನು ಕಾರ್ಯಕರ್ತರು ಮಾಡಬೇಕಿದೆ ಎಂದರು.

ಕಾಂಗ್ರೆಸ್ ಸರ್ಕಾರ ಕಳೆದ 10 ತಿಂಗಳಿಂದ ಗ್ಯಾರಂಟಿ ಜಾರಿಗೊಳಿಸುವುದರಲ್ಲಿ ನಿರತವಾಗಿದ್ದು, ರಾಜ್ಯದಲ್ಲಿ ಅಭಿವೃದ್ಧಿಶೂನ್ಯವಾಗಿದೆ. ಕಾಂಗ್ರೆಸ್‌ನವರು ಬಿಜೆಪಿ ಅಧಿಕಾರಕ್ಕೆ ಬಂದರೆ ಸಂವಿಧಾನ ಬದಲಾವಣೆ ಮಾಡುತ್ತಾರೆ ಎಂದು ಸುಳ್ಳು ಸುದ್ದಿ ಹಬ್ಬಿಸುವ ಮೂಲಕ ಜನರ ದಾರಿ ತಪ್ಪಿಸುತ್ತಿದ್ದಾರೆ. ಕೇಂದ್ರದ ಮೋದಿ ಸರ್ಕಾರ ಅಂಬೇಡ್ಕರ್ ಸಂವಿಧಾನದ ಸಿದ್ಧಾಂತದಲ್ಲೇ ಆಡಳಿತ ನಡೆಸಿದೆ. ಹೀಗಿರುವಾಗ ಸಂವಿಧಾನ ಬದಲಾವಣೆ ಹೇಗೆ ಸಾಧ್ಯ ಎಂದು ಪ್ರಶ್ನಿಸಿದ ಅವರು ಬಿಜೆಪಿ ವಿರುದ್ಧ ಯಾವುದೇ ವಿಚಾರವಿಲ್ಲದ ಕಾರಣ ಸಂವಿಧಾನ ಬದಲಾವಣೆ ವಿಚಾರ ಎತ್ತಿ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ದೇಶ ಸುರಕ್ಷಿತವಾಗಿರಲು ನರೇಂದ್ರ ಮೋದಿ ಅವರಿಂದ ಮಾತ್ರ ಸಾಧ್ಯ. ಯಾವುದೇ ಕಪ್ಪುಚುಕ್ಕೆ ಇಲ್ಲದೇ 10 ವರ್ಷ ಉತ್ತಮ ಆಡಳಿತ ನಡೆಸಿ, ದೇಶದ ಅಭಿವೃದ್ಧಿಗಾಗಿ ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತಂದು ಬಡವರ, ರೈತರ ಪರ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ದೇಶದ ಹಿತರಕ್ಷಣೆಗಾಗಿ ಮೋದಿ 3ನೇ ಬಾರಿ ಪ್ರಧಾನಿಯಾಗಬೇಕಿದೆ ಹೀಗಾಗಿ ಎಸ್.ಬಾಲರಾಜ್ ಅವರನ್ನು ಜಯಶೀಲರನ್ನಾಗಿ ಮಾಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ, ತಾಲೂಕು ಬಿಜೆಪಿ ಅಧ್ಯಕ್ಷ ಕೆಂಡಗಣ್ಣಪ್ಪ, ಮಾಜಿ ಅಧ್ಯಕ್ಷ ಪಿ.ಮಹೇಶ್, ಪ್ರಧಾನ ಕಾರ್ಯದರ್ಶಿ ಪುಟ್ಟಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ತಾಪಂ ಮಾಜಿ ಸದಸ್ಯ ಎಸ್.ಬಸವರಾಜ್, ಶಕ್ತಿ ಕೇಂದ್ರದ ಅಧ್ಯಕ್ಷ ಶಿವರುದ್ರ, ಗುರುಪ್ರಸಾದ್, ಎಂ.ಜಿ.ಮಹದೇವಸ್ವಾಮಿ, ಪರಶಿವಮೂರ್ತಿ ಸೇರಿದಂತೆ ಇತರರಿದ್ದರು.

## ಕುಡಿಯುವ ನೀರು ಕೊಡದಿದ್ದರೆ ಚುನಾವಣೆ ಬಹಿಷ್ಕಾರ



ಪಿರಿಯಾಪಟ್ಟಣ, ಏ.18– ಹಲವು ವರ್ಷಗಳಿಂದ ಬಡಾವಣೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿದ್ದು, ಈ ಬಗ್ಗೆ ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ, ನೀರು ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಲು ಮುಂದಾಗಿಲ್ಲ ಎಂದು ಪಟ್ಟಣದ ಹೊಸ ಹೌಸಿಂಗ್ ಬೋರ್ಡ್ ನಿವಾಸಿಗಳು ಆರೋಪಿಸಿದರು.

ಬಡಾವಣೆಯಲ್ಲಿ ಜಮಾಯಿಸಿದ ನಿವಾಸಿಗಳು ಖಾಲಿ ಬಿಂದಿಗೆ ಪ್ರದರ್ಶಿಸಿ ಮಾತನಾಡಿ, ಕುಡಿಯುವ ನೀರಿಗಾಗಿ ಪರಿತಪಿಸುತ್ತಿದ್ದು, ಈ ಸಂಬಂಧ ಈ ಹಿಂದೆ ವಸತಿ ಸಚಿವರಾಗಿದ್ದ ವಿ.ಸೋಮಣ್ಣ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದಾಗ ಅವರು ಕುಡಿಯುವ ನೀರು, ಮೂಲ ಸೌಕರ್ಯಕ್ಕಾಗಿ 1.60 ಕೋಟಿ ರೂ. ಅನುದಾನ ಮಂಜೂರು ಮಾಡಿದ್ದರು. ಆದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ದೂರಿದರು. ಹಲವು ವರ್ಷಗಳ ಹಿಂದೆಯೇ ಈ ಬಡಾವಣೆಗೆ ನೀರಿನ ಟ್ಯಾಂಕ್ ನಿರ್ಮಿಸಿದ್ದರೂ, ಅಂದಿನಿಂದ ಇಂದಿನವರೆಗೂ ಕುಡಿಯುವ ನೀರು ಪೂರೈಕೆಯಾಗಿಲ್ಲ. ನಲ್ಲಿ ವ್ಯವಸ್ಥೆಯೂ ಇಲ್ಲ. ಆದರೂ ಪುರಸಭೆಯವರು ಮನೆ ಹಾಗೂ ನೀರಿನ ಕಂದಾಯ ಕಟ್ಟಿಸಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಈಗಾಗಲೇ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿಗಳು ಹಾಗೂ ಸಂಬಂಧಪಟ್ಟ ಹೌಸಿಂಗ್ ಬೋರ್ಡ್ ಮಂಡಳಿ ಅವರಿಗೆ ಮನವಿ ಸಲ್ಲಿಸಲಾಗಿದೆ. ಇನ್ನೆರಡು ದಿನಗಳಲ್ಲಿ ನೀರಿನ ಸೌಕರ್ಯ ಕಲ್ಪಿಸದಿದ್ದರೇ ಲೋಕಸಭಾ ಚುನಾವಣೆ ಬಹಿಷ್ಕರಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು. ಈ ವೇಳೆ ನಿವಾಸಿಗಳಾದ ಶಿವಣ್ಣ, ಕೆ.ಸುರೇಶ್, ಚಂದ್ರೇಗೌಡ, ಮುತ್ತುರಾಜ್, ಮಹೇಶ್, ಕಾಳಯ್ಯ, ವಸಂತ, ಪೂರ್ಣಿಮಾ, ವಿಶಾಲಾಕ್ಷಿ, ಸವಿತಾ ಸೇರಿದಂತೆ ಹಲವರಿದ್ದರು.

# ದೇವೇಗೌಡರು ಬಿಜೆಪಿಯೊಂದಿಗೆ ಹೋದದ್ದು ಅಚ್ಚರಿ ಮೂಡಿಸಿದೆ

## ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ



ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಮಾತನಾಡಿದರು.

ತಿ.ನರಸೀಪುರ, ಏ.18– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಬಗ್ಗೆ ನನಗೆ ಬಹಳ ಗೌರವವಿದೆ. ಆದರೆ ಜಾತ್ಯಾತೀತ ಸಿದ್ಧಾಂತದಲ್ಲಿ ನಂಬಿಕೆ ಇಟ್ಟ ಅವರು ಬಿಜೆಪಿಯೊಂದಿಗೆ ಹೋದದ್ದು ಅಚ್ಚರಿ ಮೂಡಿಸಿದೆ ಎಂದು ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಇಲ್ಲಿನ ಎನ್.ಆರ್.ಕಲ್ಯಾಣ ಮಂಟಪದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹಿರಿಯ ಮುತ್ಸದ್ದಿ ರಾಜಕಾರಣಿ, ಮಾಜಿ ಪ್ರಧಾನಿ ದೇವೇಗೌಡರ ಬಗ್ಗೆ ಅತೀವ ನಂಬಿಕೆ, ಪ್ರೀತಿ, ವಿಶ್ವಾಸವಿತ್ತು. ಯಾರೇ ಎಲ್ಲಿಗೆ ಹೋದರೂ ಅವರು ಬಿಜೆಪಿಯೊಂದಿಗೆ ಹೋಗುತ್ತಾರೆ ಎಂದುಕೊಂಡಿರಲಿಲ್ಲ. ಆದರೆ ಬಿಜೆಪಿಯೊಂದಿಗೆ ಕೈ ಜೋಡಿಸಿದ್ದು ನಿಜಕ್ಕೂ ನಮಗೆ ಅಚ್ಚರಿ ಮೂಡಿಸಿದೆ ಎಂದರು.

ದೇವೇಗೌಡರು ಪ್ರಧಾನಿ ಹುದ್ದೆಯಿಂದ ಕೆಳಗಿಳಿಯುವ ವೇಳೆ ವಾಜಪೇಯಿ ಅವರು ನಿಮಗೆ ಬೆಂಬಲ ಕೊಡುತ್ತೇವೆ. ನೀವೇ ಪ್ರಧಾನಿಯಾಗಿ ಮುಂದುವರೆಯಿರಿ ಎಂದು ಚೀಟಿ ಕಳುಹಿಸಿದ್ದರು. ಆದರೆ ನಾನು ಕೋಮುವಾದಿ ಪಕ್ಷದ ಬೆಂಬಲ ಬೇಡ ಎಂದು ರಾಜೀನಾಮೆ ನೀಡಿದ್ದೆ ಎಂದು ಪಾರ್ಲಿಮೆಂಟಿನಲ್ಲಿ ಹೇಳಿದ್ದರು. ಅಲ್ಲದೇ ಮೋದಿ ಪ್ರಧಾನಿಯಾದರೆ ದೇಶದಲ್ಲೇ ಇರಲ್ಲ ಎಂದು ಹೇಳಿದ್ದ ಅವರು, ತಮ್ಮ ಹೇಳಿಕೆಗೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿರುವುದು ಯಾವ ಸಿದ್ಧಾಂತ ಎಂದು ಗೌಡರ ನಡೆಗೆ ಅಸಮಾಧಾನ ವ್ಯಕ್ತಪಡಿಸಿದರು.

ಇದೀಗ ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿದೆ. ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಗೆಲ್ಲಿಸಿ ಮೇಕೆದಾಟು ಯೋಜನೆ ಮಾಡಿಯೇ ತೀರುತ್ತೇವೆ ಎನ್ನುತ್ತಾರೆ. ಇದೀಗ ಬಿಜೆಪಿಯೊಂದಿಗೆ ಹೋಗಿರುವ ಕುಮಾರಸ್ವಾಮಿ ಮೇಕೆದಾಟು ಯೋಜನೆ ಜಾರಿಗೊಳಿಸಲಿ ಎಂದು ಟಾಂಗ್ ನೀಡಿದರು.

ಕಾಂಗ್ರೆಸ್, ಬಿಜೆಪಿಯೊಂದಿಗೆ ಹೋಗಲ್ಲ ಎನ್ನುತ್ತಿದ್ದವರು ಎರಡೂ ಪಕ್ಷಗಳ ಜೊತೆಗೆ ಹೋದಾಗಲು ಮುಖ್ಯಮಂತ್ರಿಯಾದರು. ಬಿಜೆಪಿ–ಜೆಡಿಎಸ್ ಮೈತ್ರಿ ವೇಳೆ 20 ತಿಂಗಳ ಅಧಿಕಾರ ಪೂರೈಸಿ ಬಿಜೆಪಿಗೆ ಅಧಿಕಾರ ನೀಡದಿದ್ದಾಗ ವಚನ ಭ್ರಷ್ಟ ಎಂದರು. ಮೈತ್ರಿ ಸರ್ಕಾರ ಇದ್ದಾಗ 17 ಶಾಸಕರನ್ನು ಆಪರೇಷನ್ ಕಮಲದ ಮೂಲಕ ಕರೆದೊಯ್ದು ಬಿಜೆಪಿ ಕುಮಾರಸ್ವಾಮಿ ಸರ್ಕಾರವನ್ನು ಬೀಳಿಸಿತ್ತು. ಆದರೆ ಈಗ ಅವರಿಬ್ಬರೇ ಜೊತೆಯಾಗಿದ್ದಾರೆ. ಇದು ರಾಜಕೀಯ ಫಿಲಾಸಫಿಯೇ ಎಂದು ವ್ಯಂಗ್ಯವಾಡಿದರು.

**ಬೋಸ್‌ಗೆ ಬೆಂಬಲ ನೀಡಿ:** ನನಗೆ ರಾಜಕೀಯ ಅಧಿಕಾರ ನೀಡಿದ್ದೀರಿ. ಇದೀಗ ಸುನೀಲ್ ಬೋಸ್ ಲೋಕಸಭೆಗೆ ಸ್ಪರ್ಧಿಸಿದ್ದು ನನಗೆ ನೀಡಿದ ಪ್ರೋತ್ಸಾಹ ಆತನಿಗೂ ನೀಡಿ ಎಂದು ಮನವಿ ಮಾಡಿದರು.

ಈ ವೇಳೆ ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ, ಮೈಮುಲ್ ನಿರ್ದೇಶಕ ಆರ್.ಚೆಲುವರಾಜು, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಪ್ರೊ.ಬಿ.ಕೆ. ಜ್ಞಾನಪ್ರಕಾಶ್, ಪ್ರಥಮ ದರ್ಜೆ ಗುತ್ತಿಗೆದಾರ ಎ.ಎನ್.ಸ್ವಾಮಿ, ಕೆ.ಎಂ.ಮಧುಕುಮಾರ್, ಜಿಪಂ ಮಾಜಿ ಸದಸ್ಯೆ ಸುಧಾ ಮಹದೇವಯ್ಯ, ಟಿ.ಹೆಚ್.ಮಂಜುನಾಥ್, ಪುರಸಭಾ ಮಾಜಿ ಅಧ್ಯಕ್ಷರಾದ ಮುನಾವರ್ ಪಾಷಾ, ಡಿ.ಪದ್ಮನಾಭ, ಮಾಜಿ ಉಪಾಧ್ಯಕ್ಷ ರಾಮಲಿಂಗೇಗೌಡ, ಯುವ ಘಟಕದ ಅಧ್ಯಕ್ಷ ಟಿ.ಎಸ್.ಲೋಕೇಶ್, ಮರಿಗೌಡ, ಶಶಿಭೂಷಣ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಕೇಶವ, ಮಾಜಿ ಅಧ್ಯಕ್ಷ ರವೀಂದ್ರ ಕುಮಾರ್, ಮಾಜಿ ಪುರಸಭಾ ಸದಸ್ಯ ಸಿದ್ದೇಗೌಡ, ಪಾರ್ಥ ಸಾರಥಿ, ಕಾಂಗ್ರೆಸ್ ಯುವ ಮುಖಂಡ ಲಕ್ಷ್ಮಿನಾರಾಯಣ, ಅಕ್ಕಿ ರಮೇಶ್, ಕೊಡಗಳ್ಳಿ ಧನಂಜಯ್ ಹಾಜರಿದ್ದರು.

> ಸಚಿವ ಮಹದೇವಪ್ಪ ಕಳೆದ 10 ತಿಂಗಳಲ್ಲಿ ಕ್ಷೇತ್ರಕ್ಕೆ 400 ಕೋಟಿಗೂ ಹೆಚ್ಚು ಅನುದಾನ ತಂದಿದ್ದಾರೆ. ಬನ್ನೂರು ಹೊಳೆ ಸೇತುವೆ, ತಿ.ನರಸೀಪುರಕ್ಕೆ ಪಾಲಿಟೆಕ್ನಿಕ್ ಕಾಲೇಜು, ರೈತರ ಜಮೀನಿಗೆ ಬರಗಾಲದಲ್ಲೂ ನೀರು, ಇಷ್ಟೇ ಅಲ್ಲದೆ ಉಳಿದ 4 ವರ್ಷ 2 ತಿಂಗಳ ತಮ್ಮ ಅಧಿಕಾರವಧಿಯಲ್ಲಿ ಅಭಿವೃದ್ಧಿಯಲ್ಲಿ ಇತಿಹಾಸ ನೆನಪಿಟ್ಟುಕೊಳ್ಳುವ ಶಾಶ್ವತ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗುವ ಹಾದಿಯಲ್ಲಿ ಮಹದೇವಪ್ಪ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಆದ್ದರಿಂದ ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಅವರನ್ನು ಗೆಲ್ಲಿಸಿಕೊಡುವ ಮೂಲಕ ಅವರಿಗೆ ಶಕ್ತಿ ತುಂಬೋಣ.
>
> - ವೈ.ಎನ್.ಶಂಕರೇಗೌಡ, ಹಿರಿಯ ಸಹಕಾರಿ.

## ಮತದಾನ ಜಾಗೃತಿಗಾಗಿ ಬೈಕ್ ರ್‍ಯಾಲಿ



ಹುಣಸೂರಿನಲ್ಲಿ ಮತದಾನ ಜಾಗೃತಿಗಾಗಿ ಬೈಕ್ ರ್‍ಯಾಲಿ ನಡೆಯಿತು.

ಹುಣಸೂರು, ಏ.18– ಸಾರ್ವಜನಿಕರಲ್ಲಿ ಮತದಾನದ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ನಗರದಲ್ಲಿ ತಾಲೂಕು ಮಟ್ಟದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಸಹಕಾರದಲ್ಲಿ ಬೈಕ್ ರ್‍ಯಾಲಿ ನಡೆಸಲಾಯಿತು.

ಬೈಕ್ ರ್‍ಯಾಲಿ ತಾಲೂಕಿನ ರಂಗನಾಥ ಬಡಾವಣೆಯಿಂದ ಆರಂಭವಾಗಿ ಕಲ್ಕುಣಿಕೆ ವೃತ್ತ, ಹಳೇ ಸೇತುವೆ ಮಾರ್ಗವಾಗಿ ಬಿ.ಎಂ.ರಸ್ತೆ, ಜೆಎಲ್‌ಬಿ ರಸ್ತೆ, ಕೋಟೆ ವೃತ್ತ, ಸಂವಿಧಾನ ವೃತ್ತದ ಮಾರ್ಗವಾಗಿ ಚಲಿಸಿ ಮುನೇಶ್ವರ ಕಾವಲ್ ಮೈದಾನದಲ್ಲಿ ಅಂತ್ಯಗೊಂಡಿತು.

ಬಳಿಕ ನೆರೆದಿದ್ದ ಅಧಿಕಾರಿಗಳು ಮತ್ತು ಸಿಬ್ಬಂದಿ ವಾಹನದ ಮೂಲಕವೇ ಮಾನವ ಸರಪಳಿ ನಿರ್ಮಿಸಿ ಪ್ರತಿಜ್ಞಾ ವಿಧಿ ಬೋಧಿಸಿದರು.

ಈ ವೇಳೆ ತಾಪಂ ಇಓ ಸೇರಿದಂತೆ ತಾಲೂಕು ಮಟ್ಟದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

# ಮಹಿಳೆಯರಲ್ಲಿ ಮತದಾನ ಜಾಗೃತಿ ಪ್ರಮಾಣ ಹೆಚ್ಚಿಸಬೇಕು

**ಮತದಾನದ ಜಾಗೃತಿ, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಪ್ರಭಾವತಿ ಹಿರೇಮಠ್ ಕಿವಿಮಾತು**



ಮತದಾನ ಜಾಗೃತಿ ಮತ್ತು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಪ್ರಭಾವತಿ ಎಂ.ಹಿರೇಮಠ್ ಗುರುವಾರ ಉದ್ಘಾಟಿಸಿದರು.

ಮೈಸೂರು, ಏ.18(ಆರ್‌ಕೆ)– ನಮ್ಮದು ಪ್ರಜಾಪ್ರಭುತ್ವ ದೇಶ, ನಮ್ಮ ಹಕ್ಕನ್ನು ಚಲಾಯಿಸುವುದು ನಮ್ಮ ಜವಾಬ್ದಾರಿಯಾದ್ದರಿಂದ ಪ್ರತಿಯೊಬ್ಬರೂ ಮತ ಚಲಾಯಿಸಬೇಕು. ಇದು ಸಾಂವಿಧಾನಿಕ ಕರ್ತವ್ಯ. ಈ ನಿಟ್ಟಿನಲ್ಲಿ ಮಹಿಳೆಯರಲ್ಲಿ ಮತದಾನ ಜಾಗೃತಿಯ ಪ್ರಮಾಣವನ್ನು ಹೆಚ್ಚಿಸಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಪ್ರಭಾವತಿ ಎಂ. ಹಿರೇಮಠ್ ತಿಳಿಸಿದರು.

ಇಂದು ಮೈಸೂರು ಜಿಲ್ಲಾಡಳಿತ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಜಿಲ್ಲಾ ಪಂಚಾಯಿತಿಯ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ನಡೆದ ಮತದಾನದ ಜಾಗೃತಿ ಹಾಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿ ಹೆಣ್ಣು ಮಗು ಜನಿಸುವ ಪೂರ್ವದಿಂದಲೂ ಅದನ್ನು ರಕ್ಷಿಸಲು ಕಾನೂನುಗಳಿವೆ. ಜಗತ್ತಿನಲ್ಲಿ ಪುರುಷ – ಮಹಿಳೆ ಎಂಬುದು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಯಾವುದೇ ಅಸಮಾನತೆ, ತಾರತಮ್ಯ ಮಾಡಬಾರದು ಎಂದರು.

ತೊಟ್ಟಿಲು ತೂಗುವ ಕೈ ದೇಶವನ್ನೂ ತೂಗುತ್ತದೆ. ನಮ್ಮ ಮತ ನಮ್ಮ ಹಕ್ಕು, ಪ್ರತಿಯೊಬ್ಬ ಹೆಣ್ಣು ಮಕ್ಕಳು ಚುನಾವಣಾ ಹಬ್ಬದಲ್ಲಿ ಪಾಲ್ಗೊಂಡು ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಪುರುಷನಂತೆ ಮಹಿಳೆಯು ಕೂಡ ಎಲ್ಲಾ ಕ್ಷೇತ್ರಗಳಲ್ಲಿಯೂ ಇಂದು ತನ್ನ ಕಾರ್ಯನಿರ್ವಹಿಸುತ್ತಿದ್ದಾರೆ. ಮಹಿಳೆ ಪುರುಷನಿಗೆ ಸಮಾನಳಲ್ಲ, ಆಕೆ ಪುರುಷನಿಗಿಂತಲೂ ಒಂದು ಹೆಜ್ಜೆ ಮುಂದೆ. ಮನೆಯನ್ನು ಮುನ್ನಡೆಸುವ ಮಹಿಳೆ ದೇಶವನ್ನೂ ಮುನ್ನಡೆಸಬಲ್ಲಳು. ಪ್ರತಿಯೊಬ್ಬ ಮಹಿಳೆಯೂ ಕಡ್ಡಾಯವಾಗಿ ಮತದಾನ ಮಾಡಬೇಕು. ಮಹಿಳೆಯರಲ್ಲಿ ಹೆಚ್ಚಿನ ಶಕ್ತಿ ಇದೆ. ಅದನ್ನು ಸದುಪಯೋಗಪಡಿಸಿಕೊಳ್ಳಬೇಕು. ಮನೆಯಲ್ಲಿ ಮಕ್ಕಳನ್ನು ಗಂಡು–ಹೆಣ್ಣು ಎಂಬ ತಾರತಮ್ಯ ಮಾಡದೆ ಇಬ್ಬರನ್ನೂ ಸಮಾನತೆಯಡಿ ಬೆಳೆಸಬೇಕು ಎಂದರು.

ಜಿಲ್ಲೆಯಲ್ಲಿ ಮಹಿಳಾ ಮತದಾರರೇ ಹೆಚ್ಚಾಗಿದ್ದು, ಈ ಬಾರಿಯೂ ಪ್ರತಿಶತ ನೂರರಷ್ಟು ಮಹಿಳಾ ಮತದಾನ ಆಗಬೇಕು. ಹಾಗಾಗಿ ಕಡ್ಡಾಯವಾಗಿ ಜಾಗೃತವಾಗಿ, ನೈತಿಕವಾಗಿ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಮ್ಮ ಸುತ್ತ–ಮುತ್ತಲಿನ ಸಾರ್ವಜನಿಕರಿಗೆ ಮತದಾನ ಮಾಡುವಂತೆ ಪ್ರೇರೇಪಿಸಬೇಕು ಎಂದು ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ. ಗಾಯತ್ರಿ ಮಾತನಾಡಿ, ಪ್ರತಿಯೊಂದು ಕ್ಷೇತ್ರದಲ್ಲಿಯೂ ಇಂದು ಹೆಣ್ಣು ಸ್ವಾಭಿಮಾನಿಯಾಗಿ ದುಡಿಯುತ್ತ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಆದರೆ ಮತದಾನದಲ್ಲಿ ಹಿಂದುಳಿಯುತ್ತಿದ್ದಾರೆ. ಹಾಗಾಗಿ ಅವರಿಗೆ ಮತದಾನದ ಮಹತ್ವವನ್ನು ತಿಳಿಸಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡಿ ಚುನಾವಣೆಯನ್ನು ಯಶಸ್ವಿಗೊಳಿಸಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಮಾತನಾಡಿ, ಪ್ರತಿಯೊಬ್ಬ ಮಹಿಳೆಯು ಒಂದು ಶಕ್ತಿ, ಯಾವುದಕ್ಕೂ ಹೆದರದೆ ಧೈರ್ಯವಾಗಿ ಸಮಸ್ಯೆಯನ್ನು ಎದುರಿಸಬೇಕು. ನಮ್ಮ ಕಷ್ಟಗಳಿಗೆ ನಾವೇ ಪರಿಹಾರ ಕಂಡುಕೊಳ್ಳಬೇಕು. ಉತ್ತಮ ಅಭ್ಯರ್ಥಿಯನ್ನು ನಾವೇ ಆಯ್ಕೆಮಾಡುವ ಅವಕಾಶವಿದೆ. ಆದ್ದರಿಂದ ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಿ ಎಂದು ತಿಳಿಸಿದರು.

ಈ ವೇಳೆ ಜಿಲ್ಲಾ ಸ್ವೀಪ್ ಸಮಿತಿ ಮತ್ತು ಆಕಾಶವಾಣಿ ವತಿಯಿಂದ ಮತದಾನದ ಮಹತ್ವ ಕುರಿತು ಆಯೋಜಿಸಲಾಗಿದ್ದ ವಿವಿಧ ಸ್ಪರ್ಧೆಗಳಾದ ಪ್ರಬಂಧ ರಚನೆ, ರಸಪ್ರಶ್ನೆ, ರೀಲ್ಸ್ ಹಾಗೂ ಚಿತ್ರಕಲಾ ಸ್ಪರ್ಧೆಗಳಲ್ಲಿ ಭಾಗವಹಿಸಿದ ಸ್ಪರ್ಧಿಗಳಿಗೆ ಬಹುಮಾನವನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ಆಯುಕ್ತ ಬಿ. ರಮೇಶ್, ಜಿಲ್ಲಾ ಅರಣ್ಯ ಇಲಾಖೆಯ ಅಧಿಕಾರಿ ಮಾಲತಿ ಪ್ರಿಯಾ, ಕೇಂದ್ರ ಸರ್ಕಾರದ ಚುನಾವಣಾ ಮಾಹಿತಿ ಅಧಿಕಾರಿಗಳಾದ ಶೃತಿ, ಚುನಾವಣಾ ರಾಯಭಾರಿ ತನಿಷ್ಕಾ ಮೂರ್ತಿ, ವಿವಿಧ ಇಲಾಖೆಗಳ ಮಹಿಳಾ ಅಧಿಕಾರಿಗಳು ಉಪಸ್ಥಿತರಿದ್ದರು.



ಮಾಜಿ ಸಚಿವರೂ ಆದ ಹಾಲಿ ಶಾಸಕ ಎಸ್.ಸುರೇಶ್.ಕುಮಾರ್ ಗುರುವಾರ ಮೈಸೂರು ಜಿಲ್ಲಾ ನ್ಯಾಯಾಲಯಕ್ಕೆ ಭೇಟಿ ನೀಡಿ, ಮೈಸೂರು–ಕೊಡಗು ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪರ ಮತಯಾಚಿಸಿದರು. ಈ ವೇಳೆ ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಹಿರಿಯ ವಕೀಲರು ಹಾಗೂ ಲಾ ಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕರಾದ ಹೆಚ್.ಎನ್.ವೆಂಕಟೇಶ್, ಮಾಜಿ ಅಧ್ಯಕ್ಷ ಜಿ.ವಿ.ರಾಮಮೂರ್ತಿ, ಬಿಜೆಪಿ ನಗರಾಧ್ಯಕ್ಷ ಮಾಜಿ ಶಾಸಕ ಎಲ್.ನಾಗೇಂದ್ರ ಹಾಗೂ ಇತರ ವಕೀಲರು ಉಪಸ್ಥಿತರಿದ್ದರು.

## ಕುವೆಂಪು ಸಂಚಾರಿ ಗ್ರಂಥಾಲಯ ವಾಹನ ಸೇವೆ ತಾತ್ಕಾಲಿಕ ಸ್ಥಗಿತ

ಮೈಸೂರು,ಏ.18– ಮೈಸೂರು ನಗರ ಕೇಂದ್ರ ಗ್ರಂಥಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕುವೆಂಪು ಸಂಚಾರಿ ಗ್ರಂಥಾಲಯ ವಾಹನವು ತಾಂತ್ರಿಕ ದೋಷವಿರುವ ಕಾರಣ ಸದರಿ ವಾಹನದ ಸೇವೆ ಏ.18 ರಿಂದ ಮೇ 1 ರವರೆಗೆ ಲಭ್ಯವಿಲ್ಲ ಎಂದು ನಗರ ಕೇಂದ್ರ ಗ್ರಂಥಾಲಯದ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬೆಂಗಳೂರಿನ ಸಾರಕ್ಕಿ ಬಳಿ ಪಾರ್ಕ್‌ನಲ್ಲಿ ಜೋಡಿ ಕೊಲೆ

ಬೆಂಗಳೂರು, ಏ.18– ಬೆಂಗಳೂರಿನ ಸಾರಕ್ಕಿ ಬಳಿಯಿರುವ ಪಾರ್ಕ್‌ನಲ್ಲಿ ಗುರುವಾರ ಹಾಡಹಗಲೆ ಜೋಡಿ ಕೊಲೆ ನಡೆದಿದೆ. ಇಂದು ಸಂಜೆ ಅಕ್ರಮ ಸಂಬಂಧ ಮುಂದುವರಿಸಲು ನಿರಾಕರಿಸಿದ ಯುವತಿಯನ್ನು ವಿವಾಹಿತ ವ್ಯಕ್ತಿ ಬರ್ಬರವಾಗಿ ಹತ್ಯೆ ಮಾಡಿದ್ದಾನೆ.

ಇಂದು ಸಂಜೆ ಸಾರಕ್ಕಿ ಮಾರ್ಕೆಟ್ ಬಳಿ ಇರುವ ಪಾರ್ಕ್‌ನಲ್ಲಿ ಗೊರಗುಂಟೆಪಾಳ್ಯ ನಿವಾಸಿ ಸುರೇಶ್ (46) ಮತ್ತು ಶಾಂಕಾಂಬರಿ ನಗರ ನಿವಾಸಿ ಅನುಷಾ (25) ಎಂಬುವರ ನಡುವೆ ಜಗಳ ಆರಂಭವಾಗಿ ಇಬ್ಬರ ಕೊಲೆಯಲ್ಲಿ ಅಂತ್ಯವಾಗಿದೆ.

ಪೊಲೀಸರ ಪ್ರಕಾರ, ಸುರೇಶ್ ಮತ್ತು ಅನುಷಾ ಇಬ್ಬರು ಹಲವು ವರ್ಷಗಳಿಂದ ಪರಿಚಿತರು. ಸುರೇಶ್‌ಗೆ ಮದುವೆಯಾಗಿತ್ತು. ಆದರೂ ಸುರೇಶ್ ಹಾಗೂ ಅನುಷಾ ಇಬ್ಬರೂ ಸಂಬಂಧ ಹೊಂದಿದ್ದರು. ಅನುಷಾಗೆ ಸಂಬಂಧ ಮುಂದುವರೆಸುವುದು ಇಷ್ಟ ಇರಲಿಲ್ಲ. ಹೀಗಾಗಿ, ಭೇಟಿ ಮಾಡಿ ನಂತರ ಸಂಪರ್ಕ ಕಡಿತ ಮಾಡಿಕೊಳ್ಳುವ ತೀರ್ಮಾನ ಮಾಡಿದ್ದರು. ಈ ವೇಳೆ ಅನುಷಾ ತನ್ನ ಕೈ ತಪ್ಪಿ ಹೋಗ್ತಾಳೆ ಎಂದು ಕೋಪಗೊಂಡಿದ್ದ ಸುರೇಶ್ ಕೋಪದಲ್ಲಿ ಚಾಕುವಿನಿಂದ ಇರಿದು ಕೊಂದಿದ್ದಾನೆ.

ಮಗಳಿಗೆ ಸುರೇಶ್ ಚಾಕು ಹಾಕುತ್ತಿದ್ದಾಗ ಅನುಷಾ ತಾಯಿ ಗೀತಾ ತಡೆಯಲು ಯತ್ನಿಸಿದ್ದಾರೆ. ತಾಯಿ ಅಡ್ಡ ಬಂದರೂ ನಿಲ್ಲಿಸದೆ ಚಾಕುವಿನಿಂದ ಇರಿಯುವುದನ್ನು ಮುಂದುವರಿಸಿದ್ದ ಸುರೇಶ್ ತಲೆಮೇಲೆ ಗೀತಾ ಅವರು ಅಲ್ಲಿಯೇ ಇದ್ದ ಸಿಮೆಂಟ್ ಇಟ್ಟಿಗೆಯನ್ನು ಎತ್ತಿ ಹಾಕಿದ್ದಾರೆ. ತೀವ್ರ ರಕ್ತಸ್ರಾವವಾಗಿ ಸ್ಥಳದಲ್ಲಿ ಅನುಷಾ ಮತ್ತು ಸುರೇಶ್ ಇಬ್ಬರು ಮೃತಪಟ್ಟಿದ್ದಾರೆ. ಅನುಷಾ ತಾಯಿ ಗೀತಾ ಅವರನ್ನು ವಶಕ್ಕೆ ಪಡೆದ ಜೆಪಿ ನಗರ ಪೊಲೀಸರು, ತನಿಖೆ ನಡೆಸುತ್ತಿದ್ದಾರೆ.

















